ಶನಿವಾರ, ಜೂನ್ 15, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಚರಣೆ
ಶ್ರೀನಗರದ ಹೊರವಲಯದಲ್ಲಿ 'ಮೇಳ ಖೀರ್ ಭವಾನಿ' ಹಬ್ಬದ ಅಂಗವಾಗಿ ಭಕ್ತರು ಪೂಜೆ ಸಲ್ಲಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

SALE BDA Anjanapura 5th G Block 30x40 south Facing 95 lakh also 40x60 west facing 9th Block. 9620041313, 9945373839

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

HOUSE FOR Sale at 25x40 East Facing Hosakerahalli, BSK 3rd Stage, Near Ring Road, G+2 also at 20x30 Site North Facing Anjanapura 2nd Block. 9945427003

SALE BSK 6th Stage 4th H Block 30x40 west Facing 95 lakh Also 40x60 Facing 6th Block 1.90cr Negotiable all owners site 9945373839, 9620041313

BDA SITE FOR SALE @ BSK 6TH STAGE 7TH BLOCK 40x60 NORTH. IN GOOD LOCATION. 98455-55666

Jayanagar

PRIME PROPERTY for SALE near Madhavan Park 1st Block, 40x60 South Facing. Brokers Excuse. Contact: 7760110114.

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

Kanakapura Road

SALE NARAYANA Nagar 1st Block 40x60 South Facing 500 metre Metro station Kanakapura Road. 9945373839, 9620041313

SALE BDA approved Balaji Layout, Kanakapura Road 30x40 East Facing, Near Metro Station. Rate 1.25Cr 9945373839, 9620041313

Kempegowda Layout

"KEMPEGOWDA LAYOUT 4th-Block 'A'.Sector 30x40 50'meater from- Periperal Ring Road,& 25'Meater Padmashree College`& 6th Block 'J'.Sector 30x40'North. Direct Owner. 9845050773"

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

KEMPEGOWDA LAYOUT, BDA Site for Sale 20x30, 30x40, 40x60, 50x80, Contact Kumar: 9945119449

"PURE-RESIDENTIAL 40X60-SITE sale, KNS Anirvan, close to 300'ft Ring-Road, West facing, BDA'katha 40'ft'Road, behind BigPark. Contact: 9886809049

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

"30X50 SOUTH- FACING site for sale @ Nelamangala Rashi developers close to D-Mart Tumkur highway. 9845268611"

Rajajinagar

***RAJAJINAGAR* 5TH** Block 68th Cross 1500 sqft South Facing Rs.25000/- sqft Slightly Negotiable. Contact: 9686469799

Sanjaynagar

RMV BHOOPASANDRA BDA Site 29'x57' East 40' Road besides Central Excise, Off Chawla Road Rs. 3.30 Crore Call 9980555558

Vishweshwariah Layout

AVAILABLE BDA Sites 40X60, 30X40 Vishweshwaraiah Layout 1st Block, 2nd Block 40ft Road Good Location: 9844603127

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

"30X50 WF PRIME RESIDENTIAL SITE SALE RAILWAY LAYOUT [NEAR VIDYANIKETHANA SCHOOL]. GENUINE BUYERS CONTACT- 9845143579"

VISVESWARIAH LAYOUT 5th Block near KLE College & 100 feet Rd BDA West facing 30X40 Site for immediate sale. HN 9900339878/ 9844039878.

SALE VISHVESHWARAIAH 4th Block 30X40 South No. 1319 3rd Block No. 2197 South, 2nd Block 40x60 No.786: 9448045601/ 9535811626

Arkavathi Layout

BDA-SITE FOR Sale Arkavathi Layout 15th Block 40x60. Jakkur Srirampura 5500sqft For Sale Call:7676900174 6363496142

Multiple Locations

A-KHATA SITES for Sale in Harulkunta, Kudlu, near HSR Layout, and Converted Sites for Sale in Devasandra Village, K.R.Puram. Contact:9845539612.

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

House

Basaveshwaranagar

HOUSE FOR sale 40x60 west, Ground and first floor, Good location, Near Pavithra paradise. 9845527196.

Ganganagar

40X60 WITH Old House East Facing 40ft Road BDA Katha Semi Commercial 23k Psqft: 9916119936

Girinagar

HOUSE FOR Sale 30X55, 1650 sft. EF, Ground, First floor. 22,500 per sqft. 9901043000, 9844435161

J P Nagar

HOUSE SALE: J.P.Nagar, 6th Phase, BDA site, E/F, 4 bedroom, Seperate card shed. Contact: 9880402575.

Kengeri

SALE 30X40 1+2+4BHK duplex house with Lift A-Khata Property in Kengeri. VR Groups Call: 8217653801

Nagarabhavi

30X50 E/F 4 BHK Duplex House, 30X40 N/F 5 BHK Duplex Beautiful House sale Call.9591013777

BRAND NEW 4 BHK Triplex fully furnished House, ground floor 1 shop, 2 car parking for Sale @ Rajajinagar HBCS Layout Annapoorneshwarinagar NORTH/EAST Corner, Ready to occupy 9844039482

"INDIVIDUAL HOUSE BDA 1.20 Lakhs Rental income 30x40 new building, Sale:`₹3.70 Crore negotiable, opposite Nammura Thindi, Nagarabhavi. 9945309883"

Flat

Mysore Road

MYSORE ROAD AVAILABLE 3BHK FLAT LEASE1800 SQ.FT RS. 31 LACS WITH CARPARKING: 8105273951/ 9738223432

Rajajinagar

NEAR ORION Mall 3 bedroom flat 1620 private terrace 585 in Renaissance Park1 2.7Cr 9600008771

Uttarahalli

POORNAPRAGNA LAYOUT SALE 3BHK Deluxe Flats, Ready-to Move, 2250sft. 2 Carpark, Lift`& Generator Back-up, CCTV, Call: 9620249988.

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Out-Station

LAND FOR SALE Bangalore to Hassan Highway Kunigal 1.5 Acre Nagamangala 5 Acre Roysrealty 9980072843

Commerical

Kengeri

BDA COMMERCIAL Property for Sale 20,000/- Sqft. Adjacent Kengeri Metro Station for Hotel, Theater. 9945119449

Sarjapur Road

COMMERCIAL 20000 Sft Suitable For Complex Near Wipro Kodathi RS 10500/- sft Buyers Contact: 8884501767

Vidyaranyapura

SITE BBMP A Katha 40x30, 20X30 SEMI COMMERCIAL SF 9200/- THINDLU LAKE SHOW GARDEN: 8296895858

Kempegowda Layout

SEMI-COMMERCIAL SITE SALE, NADAPRABHU KEMPEGOWDA LAYOUT 8th Block 'D' SECTOR 165X100, W/F, ₹.4500/-. Contact: 9686469799

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9952936298

Villas/Bunglows

Nagarabhavi

5BHK INDEPENDENT house, 2 Floor, 3000 Sq.ft., South facing, near Chandra Layout. Close to hospital, bank, school, market. Possession by (07) (2024). Genuine Buyers only. Contact: +91 9341989867. Brokers Excuse. Asking for 4 Crores

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH-FACE CONTACT OWNER 98440 18823

Commercial Building

Banashankari

NF 9000 sft commercial Building (5 Flr) on site measuring 2650sq ft @Bank Colony- BSK 1st Stg for Sale. Brokers Excuse. 9880599012/9632190465

Commercial Land

Nandini Layout

BDA 40X60 EAST FACING COMMERCIAL SITE AT NANDINI LAYOUT FOR SALE 9844039482

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

"WANTED NAGARBHAVI, Nagarbhavi RHCS, D-Group Layout, Vishveshwaraiah Layout Any measurements feel free transperant Call: 7259675150"

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaj`Layout, Agent Excuse Contact: 9008259222.

Industrial & Factory

General

NEED INDUSTRIAL land or convertible land of around 2 to 3 acres in 10 km radius of TVS Motor company hosur. Intrested sellers may call on below number. 9886020888

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL PROPERTY
GF 5500 & FF-5000 Sft for Rent
Suitable for Office / Bank / Shop.
Jayanagar 8th Block
Close to Banashankari Temple/ R V Metro / JSS Centre.
Contact No.
+91 94483 72901

CHAMARAJPET, AV Towers, Mysore Road Ground, Third`Floors Occupied. First For Commercial Operations. Second with`Office Setup. Contact 9341260793.

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

INDUSTRIAL SHED/GODOWN for rent in Harohalli Industrial Area 3rd phase, 11,000 Sft, Contact : 9108982314

RENT: INDUSTRIAL shed @ KIADB Harohalli Phase-2, Built 2000 in 22000 sqft, 8HP, Phone: 9972299585

Villas/Bunglows

FOR RENT VILLA Premium Gated Community VILLA 4BHK, 4000sft, 10minutes from International Airport. Contact: 9845765617.

JOB OPPORTUNITIES

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

WANTED CANDIDATES PUC/ Graduates (Science only) age 25- 32. Freshers Anekal/ Shanthalanagar given Training. 7892714526.

Teachers/ Professors

SAMPOORNA GROUP of Institutions, Channapatna Required BE:Prof,ASP,AP For all Subjects. B.Sc.(Hons) Ag:Prof,ASP,AP For all Subjects Lab technicians, Asst's, Wardens, Facilities Manager, Internal Auditor, System admin,Cooks etc. Qualification & Pay as-per norms. Send CV with photo before 21st June to sampurnabrundavan@gmail.com www.sampoornainstitutions.org

Wanted

REQUIRED SHOWROOM and Field MALE SALES EXECUTIVE. Age Limit 25-45 Years. For Swastik Ceramics Co. Jayanagar 5th Block. Contact: 9741040290

PUBLIC NOTICE

PUBLIC NOTICE

My Client intends to purchase the properties mentioned and described in the schedule hereunder from its owners **Sri. Shivanna,** S/o Mare Gowda. The owners represent that he is the absolute owner in respect of Schedule property having good and marketable, right, title and interest and that apart from him no other person/ persons have any right or claim over the schedule property. The owner further represent that he has not entered into any agreements/Memorandum of understanding etc. For sale/ transfer of the schedule property nor have mortgaged, created any right interest, lien or encumbered the schedule property or any part thereof in any manner with any persons/s. Any Persons/s having objections/ claims shall with documentary evidence lodge their objections or claims with in **15 days** from the date of this notice with the undersigned, failing which, my client shall proceed with above mentioned transaction.

SCHDULE

All that piece and parcel of the agricultural dry land bearing Old Sy No 71/3 New No 71/7 measuring 6 Guntas situated at Hyadala Village, Channarayapatna Hobli, Devanahalli Taluk, Bengaluru Rural District which is bounded on the:
East: Land belonging to Channamma, **West:** Land belonging to A. Pilla Reddy, **North:** Land belonging to Subramani, **South:** Land belonging to Krishnappa.

B.P. Puttasiddaiah
Advocate
No 12/a, Shivapriya, 2ndmain, 1st Cross, Dr. Modi Hospital Road, Manjunathnagar, Bengaluru -560010.
Ph:9845878913
Bengaluru Date:15.06.2024

PUBLIC NOTICE

My Client intends to purchase the properties mentioned and described in the schedule hereunder from its owners **Sri. A Pille Gowda,** S/o H.T Anjinappa. The owners represent that he is the absolute owner in respect of Schedule property having good and marketable, right, title and interest and that apart from him no other person/persons have any right or claim over the schedule property. The owner further represent that he has not entered into any agreements/ Memorandum of understanding etc. For sale/ transfer of the schedule property nor have mortgaged, created any right interest, lien or encumbered the schedule property or any part thereof in any manner with any persons/s. Any Persons/s having objections/claims shall with documentary evidence lodge their objections or claims with in **15 days** from the date of this notice with the undersigned, failing which, my client shall proceed with above mentioned transaction.

SCHDULE

All that piece and parcel of the agricultural dry land bearing Sy No 71/2 New No 71/11 measuring 1 Acre 39 Guntas situated at Hyadala Village, Channarayapatna Hobli, Devanahalli Taluk, Bengaluru Rural District which is bounded on the: **East:** Property belonging to Krishnappa, Shivanna and Subramani. **West:** Reamaining Land in Sy No 71/2, **North:** Water Channel, **South:** Road

B.P. Puttasiddaiah
Advocate
No 12/a, Shivapriya, 2ndmain, 1st Cross, Dr. Modi Hospital Road, Manjunathnagar, Bengaluru -560010.
Ph:9845878913
Bengaluru Date:15.06.2024



PUBLIC NOTICE
To Place your Classified Ads Contact
9731810277

ಶನಿವಾರ, ಜೂನ್ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 166 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಫಾದರ್ಸ್ ಡೇ ವಿಶೇಷ: ಅಪ್ಪನ ನೆರಳಲ್ಲಿ



ಆಳ-ಅಗಲ
ಕಾಂಗ್ರೆಸ್ ಪುಟಿದೆದ್ದ ಬಗೆ... ಕೊಚ್ಚಿ ನಿಲ್ದಾಣದಲ್ಲಿ ಕಟ್ಟೆಯೊಡೆದ ಶೋಕ 7
ಹೊಸ ಎತ್ತರಕ್ಕೆ ಜಿಗಿದ ನಿಫ್ಟಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,992	23,465	₹73,560 (ಬೆಂಗಳೂರು)	₹89,900 (ಬೆಂಗಳೂರು)	83.55

₹4,440 ಕೋಟಿ ಮೌಲ್ಯದ ಆಸ್ತಿ ಜಪ್ತಿ 7
ಭವಾನಿ ಅರ್ಜಿ: ಆದೇಶ ಕಾಯ್ದಿರಿಸಿದ ಹೈಕೋರ್ಟ್ 5

ಚಿನಕುರುಳಿ

ಪ್ರಕಾಶ್ ಶೆಟ್ಟಿ

ದರ್ಶನ್ ಕೊಟ್ಟ ₹30 ಲಕ್ಷ ಜಪ್ತಿ

₹5 ಕೋಟಿ ಆಮಿಷ ಒಡ್ಡಿದ್ದ ಆರೋಪ • ರೌಡಿ ಪಟ್ಟಿ ತೆರೆಯಲು ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಠಾಣೆಗೆ ಶರಣಾಗುವಂತೆ ಹೇಳಿ ಕೆಲ ಆರೋಪಿಗಳಿಗೆ ನಟ ದರ್ಶನ್ ನೀಡಿದ್ದ ₹30 ಲಕ್ಷ ಹಣವನ್ನು ಪಶ್ಚಿಮ ವಿಭಾಗದ ಪೊಲೀಸರು ಜಪ್ತಿ ಮಾಡಿದ್ದಾರೆ. ಅದರ ಜತೆಗೆ, 'ಪ್ರಕರಣದಲ್ಲಿ ಬಚಾವಾಗಲು ದರ್ಶನ್ ಮತ್ತಷ್ಟು ಮಂದಿಗೆ ₹5 ಕೋಟಿಯಷ್ಟು ಆಮಿಷವೊಡ್ಡಿದ್ದರು' ಎಂಬ ಮಾಹಿತಿ ಆಧಾರದಲ್ಲಿ ತನಿಖೆ ಮುಂದುವರಿಸಿದ್ದಾರೆ.

'ಜೂನ್ 8ರಂದು ರಾತ್ರಿ ನಡೆದಿದ್ದ ಕೊಲೆ ಪ್ರಕರಣದಿಂದ ಪಾರಾಗಲು ಆರೋಪಿಗಳಿಗೆ ದರ್ಶನ್ ₹30 ಲಕ್ಷ ನೀಡಿದ್ದರು. ಹಣ ಪಡೆದಿದ್ದ ಕಾರ್ತಿಕ್ ಅಲಿಯಾಸ್ ಕಪ್ಪೆ ಹಾಗೂ ಇತರರು, ತಾವೇ ಕೊಲೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡು ಠಾಣೆಗೆ ಬಂದಿದ್ದರು. ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಕೊಲೆ ರಹಸ್ಯ ಪತ್ತೆಯಾಯಿತು. ಆರೋಪಿಗಳಿಂದ ಪೂರ್ಣ ನಗದು, ವಾಹನಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಆಯುಧಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

'ಊಟ ಮಾಡಿ ಊರಿಗೆ ಹೋಗುವಂತೆ ಹಣ ನೀಡಿದ್ದೆ'

'ರೇಣುಕಸ್ವಾಮಿ ಕೊಲೆಯಲ್ಲಿ ನನ್ನ ಪಾತ್ರವಿಲ್ಲ. ಆತನಿಗೆ ಎಚ್ಚರಿಕೆಯಷ್ಟೇ ನೀಡಿದ್ದೆ. ಜೂನ್ 8ರಂದು ರಾತ್ರಿ ಆತನಿಗೆ ನಾನೇ ಹಣ ಕೊಟ್ಟು, ಊಟ ಮಾಡಿಕೊಂಡು ಊರಿಗೆ ಸುರಕ್ಷಿತವಾಗಿ ವಾಪಸು ಹೋಗುವಂತೆ ಹೇಳಿದ್ದೆ' ಎಂಬುದಾಗಿ ನಟ ದರ್ಶನ್ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆಂದು ಗೊತ್ತಾಗಿದೆ.

'ರೇಣುಕಸ್ವಾಮಿ ಕಳುಹಿಸಿದ್ದ ಸಂದೇಶದ ಬಗ್ಗೆ ಪವಿತ್ರಾ ಗೌಡ ನನಗೆ ಮಾಹಿತಿ ನೀಡಿರಲಿಲ್ಲ. ಬೇರೆಯವರ ಮೂಲಕ ವಿಷಯ ಗೊತ್ತಾಯಿತು. ನಂತರ ಹುಡುಗರಿಗೆ ಹೇಳಿ ಆತನ ವಿಳಾಸ ಪತ್ತೆ ಮಾಡಿಸಿದೆ. ನಾನು ಚಿತ್ರದುರ್ಗಕ್ಕೆ ಹೋಗಲು ಸಾಧ್ಯವಿಲ್ಲದಿದ್ದರಿಂದ, ಆತನನ್ನೇ ಬೆಂಗಳೂರಿಗೆ ಕರೆಸಿದೆ. 'ದರ್ಶನ್ ನಿನ್ನ ಜೊತೆ ಮಾತನಾಡಬೇಕು' ಎಂದು ಹುಡುಗರ ಮೂಲಕ ಹೇಳಿಸಿಯೇ ಸುರಕ್ಷಿತವಾಗಿ ಬೆಂಗಳೂರಿಗೆ ಕರೆಸಿದ್ದೆ. ನಮ್ಮ ಹುಡುಗರು ಆತನನ್ನು ಶೆಡ್‌ಗೆ ಕರೆದೊಯ್ದಿದ್ದರು. ಅಲ್ಲಿಗೆ ಬರುವಂತೆ ನನಗೆ ಹೇಳಿದ್ದರು. ಹೀಗಾಗಿ, ಶೆಡ್‌ಗೆ ಹೋಗಿದ್ದೆ' ಎಂದೂ ದರ್ಶನ್ ಹೇಳಿರುವುದಾಗಿ ತಿಳಿದುಬಂದಿದೆ.

'ರೇಣುಕಸ್ವಾಮಿಗೆ ಬುದ್ಧಿವಾದ ಹೇಳಿದ ನಂತರ, ಆತನಿಗೆ ಹಣ ಕೊಟ್ಟು ಊಟ ಮಾಡಿಕೊಂಡು ವಾಪಸು ಊರಿಗೆ ಹೋಗು ಎಂದು ಹೇಳಿ ಅಲ್ಲಿಂದ ಹೊರಟು ಹೋದೆ. ಆನಂತರ, ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಮೈಸೂರಿನಿಂದ ಪೊಲೀಸರು ಬಂಧಿಸಿ ಬೆಂಗಳೂರಿಗೆ ಕರೆತಂದಾಗಲೇ ರೇಣುಕಸ್ವಾಮಿ ಕೊಲೆ ನಡೆದಿರುವ ಸಂಗತಿ ಗೊತ್ತಾಯಿತು' ಎಂದು ಅವರು ಹೇಳಿಕೆ ನೀಡಿರುವುದಾಗಿ ಮೂಲಗಳು ಹೇಳಿವೆ.

ರಾತ್ರಿ ಕಾರ್ಯಾಚರಣೆ: ಕಮಿಷನರ್ ದಿಟ್ಟ ಕ್ರಮ

'ಜೂನ್ 9ರಂದು ಪತ್ತೆಯಾದ ರೇಣುಕಸ್ವಾಮಿ ಹತ್ಯೆ ಪ್ರಕರಣದಲ್ಲಿ ದರ್ಶನ್ ಭಾಗಿಯಾಗಿದ್ದ ಮಾಹಿತಿ ಲಭ್ಯವಾಗುತ್ತಿದ್ದಂತೆಯೇ ತನಿಖಾಧಿಕಾರಿಯೂ ಆಗಿದ್ದ ಇನ್‌ಸ್ಪೆಕ್ಟರ್ ಗಿರೀಶ್ ನಾಯ್ಕ್ ಅವರು ಎಸಿಪಿ ಚಂದನ್ ಹಾಗೂ ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಅವರಿಗೆ ವಿಷಯ ತಿಳಿಸಿದ್ದರು. ಡಿಸಿಪಿ ಗಿರೀಶ್, ಕಮಿಷನರ್ ಬಿ.ದಯಾನಂದ್ ಅವರಿಗೆ ಮಾಹಿತಿ ರವಾನಿಸಿದ್ದರು. 'ಪುರಾವೆ ಇದ್ದರೆ ಹೆದರಬೇಡಿ. ಮಾಧ್ಯಮಗಳಿಗೆ ವಿಷಯ ಗೊತ್ತಾಗುವ ಮುನ್ನವೇ ಮೈಸೂರಿನ ಹೋಟೆಲ್‌ನಿಂದ ದರ್ಶನ್‌ನನ್ನು ಬಂಧಿಸಿ ನಗರಕ್ಕೆ ಕರೆತನ್ನಿ' ಎಂದು ದಯಾನಂದ್ ಖಡಕ್ ಸೂಚನೆ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಜೂನ್ 9ರಂದು ರಾತ್ರಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಸಕಲ ಪುರಾವೆಗಳನ್ನೂ ಸಿದ್ಧಪಡಿಸಿಕೊಂಡಿದ್ದರು. ಜೂನ್ 10ರಂದು ನಸುಕಿನಲ್ಲಿ ಮೈಸೂರಿನ ಹೋಟೆಲ್‌ಗೆ ಹೋಗಿದ್ದ ಎಸಿಪಿ ಚಂದನ್, ನಟ ದರ್ಶನ್ ಎದುರು ನಿಂತಿದ್ದರು. 'ನಾನು ಕೊಲೆ ಮಾಡಿಲ್ಲ. ನಿಮ್ಮ ಜೊತೆ ಬರುವುದಿಲ್ಲ' ಎಂದಿದ್ದ ದರ್ಶನ್‌ಗೆ ತಮ್ಮದೇ ಶೈಲಿಯಲ್ಲಿ ಉತ್ತರ ನೀಡಿದ್ದರು. ಆಗ ದರ್ಶನ್, ಪೊಲೀಸ್ ಜೀಪು ಹತ್ತಿದ್ದರು. ಮಾಧ್ಯಮಗಳಿಗೆ ವಿಷಯ ಗೊತ್ತಾಗುವ ಮುನ್ನವೇ ದರ್ಶನ್ ಬೆಂಗಳೂರಿನಲ್ಲಿದ್ದರು. ಇದೊಂದು ಅಪರೂಪದ ಕಾರ್ಯಾಚರಣೆ' ಎಂದು ವಿವರಿಸಿದರು.

ಪ್ರಾಸಿಕ್ಯೂಷನ್ ಕ್ರಮಕ್ಕೆ ಹೈಕೋರ್ಟ್ ತರಾಟೆ

ಬಿಎಸ್‌ವೈ ಬಂಧನಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೋಕ್ಸೊ ಪ್ರಕರಣದ ಆರೋಪಿಯಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಂದಿನ ವಿಚಾರಣೆಯವರೆಗೂ ಬಂಧಿಸಬಾರದು' ಎಂದು ಆದೇಶಿಸಿರುವ ಹೈಕೋರ್ಟ್, ಈ ಸಂಬಂಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಅಮಾನತಿನಲ್ಲಿ ಇರಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಗೊಳಿಸಬೇಕು ಮತ್ತು ಈ ಪ್ರಕರಣದಲ್ಲಿ ನನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ಎರಡು ಪ್ರತ್ಯೇಕ ಅರ್ಜಿಗಳ ಜೊತೆಗೆ 'ಯಡಿಯೂರಪ್ಪ ಅವರನ್ನು ಬಂಧಿಸಲು ನಿರ್ದೇಶಿಸಬೇಕು' ಎಂದು ಕೋರಿ ಪ್ರಕರಣದ ಸಂತ್ರಸ್ತ ಬಾಲಕಿಯ ಅಣ್ಣ ಸಲ್ಲಿಸಿದ್ದ ಮತ್ತೊಂದು ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ಒಟ್ಟಿಗೇ ವಿಚಾರಣೆ ನಡೆಸಿದರು.

6ನೇ ಪುಟ ನೋಡಿ

ಮುಖ್ಯಾಂಶಗಳು

- ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶ
- ವಿಚಾರಣೆ ಇದೇ 28ಕ್ಕೆ ಮುಂದೂಡಿಕೆ

ಆರೋಪಿ ಮಾಜಿ ಮುಖ್ಯಮಂತ್ರಿ. ಇಂತಹವರನ್ನು ವಶದಲ್ಲಿ ಇರಿಸಿಕೊಂಡೇ ವಿಚಾರಣೆ ನಡೆಸಬೇಕೆಂಬ ಪೊಲೀಸರ ಹಟ ಪ್ರಾಮಾಣಿಕತೆಯಿಂದ ಕೂಡಿಲ್ಲ
ಕೃಷ್ಣ ಎಸ್.ದೀಕ್ಷಿತ್ ನ್ಯಾಯಮೂರ್ತಿ

'ಯಾರನ್ನು ಸಂತುಷ್ಟಗೊಳಿಸಲು ಬಂಧಿಸುತ್ತೀರಿ?'

'ಬಿ.ಎಸ್.ಯಡಿಯೂರಪ್ಪ ಯಾರೊ ಒಬ್ಬ ಯಂಕ, ನಾಣಿ, ಸೀನನಂತಹ ಸಾಮಾನ್ಯ ವ್ಯಕ್ತಿಯಲ್ಲ. ಅವರು ಈ ರಾಜ್ಯದ ಮುಖ್ಯಮಂತ್ರಿ ಯಾಗಿದ್ದವರು. ತಮ್ಮ ಜೀವನದ ಸಂಧ್ಯಾಕಾಲದಲ್ಲಿದ್ದಾರೆ. ಸ್ವಾಭಾವಿಕವಾಗಿಯೇ ಅವರಿಗೆ ತನುವಿನ ಅಡಚಣೆಗಳಿರುತ್ತವೆ. ಅಷ್ಟಕ್ಕೂ ನೀವು ಯಾರನ್ನು ಸಂತುಷ್ಟಗೊಳಿಸುವ ಸಲುವಾಗಿ ಬಂಧಿಸಲು ತವಕಿಸುತ್ತಿದ್ದೀರಿ' ಎಂದು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಪ್ರಾಸಿಕ್ಯೂಷನ್ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ಅರ್ಜಿದಾರರು ಈಗಾಗಲೇ ಒಮ್ಮೆ ನೋಟಿಸ್‌ಗೆ ಪ್ರತಿಯಾಗಿ ಹಾಜರಾಗಿದ್ದಾರೆ. ಎರಡನೇ ನೋಟಿಸ್‌ಗೆ ಸಮಯ ಕೇಳಿದ್ದು ಬರುತ್ತೇನೆ ಎಂದು ಪತ್ರ ಬರೆದಿದ್ದಾರೆ. ಇದನ್ನು ನೀವು ಗೌರವಿಸಬೇಕು. ಅವರೇನೂ ತಪ್ಪಿಸಿಕೊಂಡು ಹೋಗುವ ವ್ಯಕ್ತಿಯಲ್ಲ. ಅಷ್ಟಕ್ಕೂ ವಶದಲ್ಲಿ ಇರಿಸಿಕೊಂಡೇ ವಿಚಾರಣೆ ನಡೆಸಬೇಕಾದ ಅನಿವಾರ್ಯ ಆರೋಪದಲ್ಲಿ ಇದೆಯೇ? ಒಬ್ಬ ಮಾಜಿ ಮುಖ್ಯಮಂತ್ರಿಗೇ ಈ ರೀತಿಯ ಭೀತಿ ಸುತ್ತಿಕೊಂಡರೆ ಸಾಮಾನ್ಯರ ಗತಿಯೇನು? ದೂರುದಾರ ಮಹಿಳೆಯ ನಡೆಯ ಬಗ್ಗೆ ಸಮಗ್ರ ವಿವರ ಕೊಡಿ...' ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆದರು.

ಇದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ತನಿಖೆ ಪ್ರಗತಿಯಲ್ಲಿದೆ. ನ್ಯಾಯಪೀಠ ಕೇಳುತ್ತಿರುವ ವಿವರಗಳನ್ನೆಲ್ಲಾ ಲಿಖಿತ ಆಕ್ಷೇಪಣೆಯಲ್ಲಿ ಸಲ್ಲಿಸಲು ಸಮಯ ನೀಡಬೇಕು' ಎಂದು ಮನವಿ ಮಾಡಿದರು.

ಕಾಮರಾಜ್ ರಸ್ತೆ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದ ಕಾಮಗಾರಿಗಾಗಿ ಐದು ವರ್ಷಗಳ ಹಿಂದೆ ಮುಚ್ಚಲಾಗಿದ್ದ ಕಾಮರಾಜ್ ರಸ್ತೆಯ ಒಂದು ಭಾಗ ಶುಕ್ರವಾರ ಸಂಚಾರಕ್ಕೆ ತೆರೆದುಕೊಂಡಿದೆ.

ಅನಿಲ್ ಕುಂಬ್ಳೆ ವೃತ್ತದ ಕಡೆಯಿಂದ ಬರುವ ವಾಹನಗಳು ಕಾವೇರಿ ಎಂಪೋರಿಯಂ ಜಂಕ್ಷನ್‌ನಲ್ಲಿ ಎಡತಿರುವು ಪಡೆಯಬೇಕು. ಕಾಮರಾಜ ರಸ್ತೆಯಲ್ಲಿ ಸಂಚರಿಸಿ ಕಬ್ಬನ್ ರಸ್ತೆ ಜಂಕ್ಷನ್‌ನಲ್ಲಿ ನೇರವಾಗಿ ಸಾಗಿ ಕಮರ್ಷಿಯಲ್ ಸ್ಟ್ರೀಟ್ ಕಡೆಗೆ ಹೋಗಬಹುದು. ಕಬ್ಬನ್ ರಸ್ತೆಯ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಬಿಆರ್‌ವಿ ಕಡೆಗೆ ಹಾಗೂ ಬಲ ತಿರುವು ಪಡೆದು ಹಲಸೂರು ಕಡೆಗೆ ವಾಹನಗಳು ಸಂಚರಿಸಬಹುದು.

ಎಂ.ಜಿ. ರಸ್ತೆಯ ಮಯೋಹಾಲ್ ಜಂಕ್ಷನ್ ಕಡೆಯಿಂದ ಬರುವ ವಾಹನಗಳು ಕಾವೇರಿ ಎಂಪೋರಿಯಂ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಕಾಮರಾಜ ರಸ್ತೆಯಲ್ಲಿ ಸಂಚರಿಸಿ ಕಬ್ಬನ್ ರಸ್ತೆ ಜಂಕ್ಷನ್‌ನಲ್ಲಿ ನೇರವಾಗಿ ಸಾಗಿ ಕಮರ್ಷಿಯಲ್ ಸ್ಟ್ರೀಟ್ ಕಡೆಗೆ ತೆರಳಬಹುದು. ಕಬ್ಬನ್ ರಸ್ತೆಯ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಬಿಆರ್‌ವಿ ಕಡೆಗೆ ಹಾಗೂ ಬಲ ತಿರುವು ಪಡೆದು ಮಣಿಪಾಲ್ ಸೆಂಟರ್ ಕಡೆಗೆ ವಾಹನಗಳು ಸಂಚರಿಸಬಹುದು ಎಂದು ಅಶೋಕನಗರ ಸಂಚಾರ ಪೊಲೀಸರು ತಿಳಿಸಿದ್ದಾರೆ.

ಐದು ವರ್ಷ ಬಂದ್: ನಾಗವಾರ–ಕಾಳೇನ ಅಗ್ರಹಾರ ಮೆಟ್ರೊ ಮಾರ್ಗದಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಇಂಟರ್‌ಚೇಂಜ್ ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣ ನಿರ್ಮಿಸಲು ಕಾಮರಾಜ್ ರಸ್ತೆಯನ್ನು 2019ರಲ್ಲಿ ಬಿಎಂಆರ್‌ಸಿಎಲ್ ಮುಚ್ಚಿತ್ತು. ಭೂಮಿ ಹಸ್ತಾಂತರ, ಮರಗಳ ತೆರವು ಪ್ರಕ್ರಿಯೆ ವಿಳಂಬವಾಗಿದ್ದರಿಂದ ಕಾಮಗಾರಿ ತುಂಬಾ ನಿಧಾನವಾಗಿ ಸಾಗಿತ್ತು. ಮಧ್ಯೆ ಕೋವಿಡ್ ಬಿಕ್ಕಟ್ಟು ಕೂಡ ವಿಳಂಬಕ್ಕೆ ಕಾರಣವಾಯಿತು.

ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಕಾಮರಾಜ್ ರಸ್ತೆಯ ಒಂದು ಬದಿಯಿಂದ ವಾಹನಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಯಂತ್ರೋಪಕರಣಗಳ ಸಾಗಾಟಕ್ಕಾಗಿ ಇನ್ನೊಂದು ಬದಿಯ ರಸ್ತೆ ಬಳಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ 3.3 ಕಿ.ಮೀ. ಉದ್ದ ಇರಲಿದೆ ಈ ವ್ಯವಸ್ಥೆ

ಡಬಲ್ ಡೆಕರ್ ಶೀಘ್ರ ಸಂಚಾರಕ್ಕೆ ಮುಕ್ತ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ನಿರ್ಮಾಣಗೊಳ್ಳುತ್ತಿರುವ ನಗರದ ಮೊದಲ 'ಡಬಲ್ ಡೆಕರ್' ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡಿದೆ. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಬಳಿಕ ಸಂಚಾರಕ್ಕೆ ಮುಕ್ತಗೊಳ್ಳಲಿದೆ.

ಆರ್.ವಿ. ರಸ್ತೆ–ಬೊಮ್ಮಸಂದ್ರ ಮಾರ್ಗದಲ್ಲಿ ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 3.3 ಕಿ.ಮೀ. ದೂರ ವಾಹನ ಹಾಗೂ ಮೆಟ್ರೊ ರೈಲು ಸಂಚರಿಸುವ ರೀತಿಯಲ್ಲಿ ಈ ಮೇಲ್ಸೇತುವೆ ನಿರ್ಮಿಸಲಾಗಿದೆ. ಒಂದೇ ಪಿಲ್ಲರ್‌ನಲ್ಲಿ ರೋಡ್ ಕಂ ರೇಲ್(ಡಬಲ್ ಡೆಕರ್) ಸೇತುವೆ ನಿರ್ಮಾಣಗೊಂಡಿದೆ.

ಎರಡೂ ಬದಿಗಳಲ್ಲಿ ಎರಡು ರಸ್ತೆ ನಿರ್ಮಿಸಲಾಗಿದ್ದು, ಇಲ್ಲಿ ಬಸ್, ಕಾರು ಸಹಿತ ಎಲ್ಲ ರೀತಿಯ ವಾಹನಗಳು ಸಂಚರಿಸಲಿವೆ. ಎರಡನೇ ಅಂತಸ್ತಿನ ಮಾರ್ಗದಲ್ಲಿ ಮೆಟ್ರೊ ರೈಲು ಸಂಚರಿಸಲಿದೆ. ನೆಲ ಅಂತಸ್ತಿನಲ್ಲಿರುವ ತ್ರಿಪಥ ರಸ್ತೆಯಲ್ಲಿ ಸಂಚಾರ ಎಂದಿನಂತೆ ಮುಂದುವರಿಯಲಿದೆ. ಡಬಲ್ ಡೆಕರ್ ಮಾರ್ಗದ ಮೇಲೆ ವಾಹನಗಳು ಒಮ್ಮೆ ಹತ್ತಿದರೆ ಮಧ್ಯದಲ್ಲಿ ಇಳಿಯಲು ಅವಕಾಶ ಇಲ್ಲ. ವಾಹನ ದಟ್ಟಣೆ ಕಡಿಮೆ ಮಾಡಲು ಇದು ನೆರವಾಗಲಿದೆ. ಸಿಗ್ನಲ್‌ರಹಿತ ಸಂಚಾರಕ್ಕೆ ಅನುಕೂಲ ಆಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್ ಒಳಗೆ ಗುಲಾಬಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ. ಚಾಲಕರಹಿತ ಎಂಜಿನ್ ಹೊಂದಿರುವ ಮೆಟ್ರೊ ಇದೇ ಮಾರ್ಗದಲ್ಲಿ ಸಂಚರಿಸುವುದು ಒಂದು ವಿಶೇಷವಾದರೆ, ರೋಡ್ ಕಂ ರೇಲ್ ಸಿಸ್ಟಂ ಈ ಮಾರ್ಗದ ಇನ್ನೊಂದು ವಿಶೇಷ. ಜಯದೇವ ಜಂಕ್ಷನ್‌ನಲ್ಲಿ ಸುರಂಗದಲ್ಲಿ ಗುಲಾಬಿ ಮೆಟ್ರೊ (ಕಾಳೇನ ಅಗ್ರಹಾರ–ನಾಗವಾರ ಮಾರ್ಗ), ಅದರ ಮೇಲೆ ರಸ್ತೆ, ರಸ್ತೆಯ ಮೇಲೆ ಹಳದಿ ಮೆಟ್ರೊ ರೈಲು ಸಂಚರಿಸಲಿದೆ. ಈ ರೀತಿ ಮೆಟ್ರೊ–ರಸ್ತೆ–ಮೆಟ್ರೊ ಒಂದರ ಮೇಲೆ ಒಂದು ಇರುವ ವ್ಯವಸ್ಥೆ ಬೇರೆ ಎಲ್ಲಿಯೂ ಇಲ್ಲ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ ಮಾರ್ಗದ ಕಾಮಗಾರಿ 2021ರಲ್ಲಿ ಆರಂಭವಾಗಿತ್ತು. ರೋಡ್ ಕಂ ರೇಲ್ ಸಿಸ್ಟಂ ಸೇರಿದಂತೆ ಈ ಕಾಮಗಾರಿ 2021ಕ್ಕೆ ಪೂರ್ಣಗೊಳ್ಳಬೇಕಿತ್ತು. ವಿಶೇಷ ವಿನ್ಯಾಸ, ಕೋವಿಡ್ ಇನ್ನಿತರ ಕಾರಣಗಳಿಂದ ಮತ್ತೆ ಎರಡು ವರ್ಷ ಕಾಮಗಾರಿ ನಿಧಾನವಾಗಿತ್ತು. ಇದೀಗ ಅಂತಿಮ ಹಂತಕ್ಕೆ ತಲುಪಿದೆ.

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರಾಗಿಗುಡ್ಡದಿಂದ ಕೇಂದ್ರ ರೇಷ್ಮೆ ಮಂಡಳಿವರೆಗೆ (ಸೆಂಟ್ರಲ್ ಸಿಲ್ಕ್ ಬೋರ್ಡ್) ಡಬಲ್ ಡೆಕರ್ ನಿರ್ಮಾಣಗೊಂಡಿದೆ ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಮುಖ್ಯಾಂಶಗಳು

- ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಮೇಲ್ಸೇತುವೆ
- ಆರ್.ವಿ. ರಸ್ತೆ–ಬೊಮ್ಮಸಂದ್ರ ಮಾರ್ಗದಲ್ಲಿ ಇನ್ನು ಮುಂದೆ ಸರಾಗ ಸಂಚಾರ
- ಎರಡು ವರ್ಷ ವಿಳಂಬವಾದ ಕಾಮಗಾರಿ ಕೊನೆಗೂ ಪೂರ್ಣ

ಚಲ್ಲಘಟ್ಟ–ಕೆಂಗೇರಿ ಮೆಟ್ರೊ 17ಕ್ಕೆ ಭಾಗಶಃ ರದ್ದು

'ನಮ್ಮ ಮೆಟ್ರೊ' ನೇರಳೆ ಮಾರ್ಗದ ಕೆಂಗೇರಿ ಮತ್ತು ಚಲ್ಲಘಟ್ಟ ನಿಲ್ದಾಣಗಳ ನಿರ್ವಹಣೆ ಕೆಲಸಕ್ಕಾಗಿ ಜೂನ್ 17ರಂದು ಮಧ್ಯಾಹ್ನ 1ರವರೆಗೆ ಕೆಂಗೇರಿ–ಚಲ್ಲಘಟ್ಟ ಮೆಟ್ರೊ ನಿಲ್ದಾಣಗಳ ನಡುವೆ ರೈಲು ಸಂಚಾರ ರದ್ದುಗೊಳಿಸಲಾಗಿದೆ. ಮಧ್ಯಾಹ್ನ 1ರ ಬಳಿಕ ಎಂದಿನಂತೆ ಮೆಟ್ರೊ ಕಾರ್ಯಾಚರಣೆ ಇರಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ರಸ್ತೆ, ಪಾದಚಾರಿ ಮಾರ್ಗ ದುರಸ್ತಿಪಡಿಸಲು ಮೆಟ್ರೊಗೆ ಸೂಚನೆ

ನಗರದ ಹೊರ ವರ್ತುಲ ರಸ್ತೆಯಲ್ಲಿ ನಮ್ಮ ಮೆಟ್ರೊ ಕಾಮಗಾರಿ ಪೂರ್ಣಗೊಂಡಿರುವ ಪ್ರದೇಶಗಳಲ್ಲಿ ಸರ್ವೀಸ್ ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸಿ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ, ಮೆಟ್ರೊ, ಜಲಮಂಡಳಿ ಹಾಗೂ ಒಆರ್‌ಆರ್‌ಸಿಎ ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ 22 ರಸ್ತೆಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಜೊತೆಗೆ ಹೊರ ವರ್ತುಲ ರಸ್ತೆಯಲ್ಲಿನ ಮೇಲ್ಸೇತುವೆಗಳನ್ನು ದುರಸ್ತಿಪಡಿಸಬೇಕು. ಪಣತ್ತೂರ್ ರಸ್ತೆ ವಿಸ್ತರಣೆ ಕಾಮಗಾರಿ ಕೈಗೊಳ್ಳಬೇಕು ಎಂದರು.

ಮೆಟ್ರೊ ವ್ಯವಸ್ಥಾಪಕ ನಿರ್ದೇಶಕರಾದ ಮಹೇಶ್ವರ್ ರಾವ್ ಮಾತನಾಡಿ, 'ಮೆಟ್ರೊ 2ಎ ಕಾಮಗಾರಿ ನಡೆಯುವ ರಸ್ತೆಯ ವಿಭಜಕ ನಿರ್ವಹಣೆಯನ್ನು ಮೆಟ್ರೊ ವತಿಯಿಂದ ಮಾಡಲಾಗುತ್ತಿದೆ. ಬಿಬಿಎಂಪಿ ಹಾಗೂ ಮೆಟ್ರೊ ಸಮನ್ವಯದಲ್ಲಿ ಕಾಮಗಾರಿಯನ್ನು ನಾಗರಿಕರ ಹಿತ ಉದ್ದೇಶಗಳಿಗೆ ತೊಂದರೆ ಉಂಟಾಗದ ನಿರ್ವಹಿಸಲಾಗುವುದು ಎಂದರು.

ಬಿಬಿಎಂಪಿ ಶಾಲೆ–ಕಾಲೇಜುಗಳಿಗೆ ಖಾಸಗಿ ಅನುದಾನಕ್ಕೆ ಅವಕಾಶ

ಬೆಂಗಳೂರು: ಬಿಬಿಎಂಪಿಯ ಶಿಶುವಿಹಾರ ಸೇರಿದಂತೆ ಶಾಲಾ–ಕಾಲೇಜುಗಳನ್ನು ಶೈಕ್ಷಣಿಕವಾಗಿ ಉತ್ತಮಗೊಳಿಸಲು ಹಾಗೂ ಇತರೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಆಸಕ್ತ ಸಂಘ–ಸಂಸ್ಥೆಗಳು, ಖಾಸಗಿ ಕಂಪನಿಗಳಿಗೆ ಅನುದಾನ ನೀಡಲು ಅವಕಾಶ ನೀಡಲಾಗಿದೆ.

ಪಾಲಿಕೆಯು 93 ಶಿಶುವಿಹಾರ, 16 ಪ್ರಾಥಮಿಕ, 33 ಪ್ರೌಢಶಾಲೆ, 18 ಪದವಿ ಪೂರ್ವ ಕಾಲೇಜು, 4 ಪ್ರಥಮ ದರ್ಜೆ ಕಾಲೇಜು ಹಾಗೂ 2 ಸ್ನಾತಕೋತ್ತರ ಕೇಂದ್ರಗಳನ್ನು ಹೊಂದಿದೆ. 25,500ಕ್ಕೂ ಹೆಚ್ಚು ಬಡ ಹಾಗೂ ಎಲ್ಲಾ ವರ್ಗದ ಮಕ್ಕಳು ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಈ ಶಾಲಾ/ಕಾಲೇಜುಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ಸಂಘ–ಸಂಸ್ಥೆಗಳು ಸಿಎಸ್‌ಆರ್ ಅಡಿಯಲ್ಲಿ ಅನುದಾನವನ್ನು ಒದಗಿಸಲು ಮೂರು ಮಾದರಿಯಲ್ಲಿ ಒಡಂಬಡಿಕೆ ಮಾಡಿಕೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಆಸಕ್ತ ಸಂಘ–ಸಂಸ್ಥೆಗಳು, ಖಾಸಗಿ ಕಂಪನಿಗಳು ಹಾಗೂ ಸಾರ್ವಜನಿಕರು ಶಿಕ್ಷಣ ವಿಭಾಗದ ಹಿರಿಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು. ಮೊಬೈಲ್ 94801 80152, ಇ–ಮೇಲ್ eoeducation@yahoo.in ಅಥವಾ specialcommissioner education@gmail.comಗೆ ಪ್ರಸ್ತಾವ ಸಲ್ಲಿಸಬಹುದು ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತರಾದ ಪ್ರೀತಿ ಗೆಹಲೋತ್ ಅವರು ತಿಳಿಸಿದ್ದಾರೆ.

ಬಾಲಭವನ ಸೊಸೈಟಿ ಅಧ್ಯಕ್ಷರಾಗಿ ಬಿ.ಆರ್. ನಾಯ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜವಾಹರ್ ಬಾಲಭವನ ಸೊಸೈಟಿ ಅಧ್ಯಕ್ಷರನ್ನಾಗಿ ಬಿ.ಆರ್. ನಾಯ್ಡು ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಮುಂದಿನ ಎರಡು ವರ್ಷ ಬಿ.ಆರ್ ನಾಯ್ಡು ಅಥವಾ ಮುಂದಿನ ಆದೇಶದವರೆಗೆ ಬಿ.ಆರ್. ನಾಯ್ಡು ಅವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಂಗವಿಕಲರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಜವಾಹರ್ ಬಾಲಭವನ ಸೊಸೈಟಿಯು ಕಾರ್ಯ ನಿರ್ವಹಿಸುತ್ತಿದೆ.

ಟಿಎಚ್‌ಇ ರ‍್ಯಾಂಕಿಂಗ್ ಅಮೃತ ವಿವಿ ಮೊದಲ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತನಗರದ ಅಮೃತ ವಿಶ್ವ ವಿದ್ಯಾಪೀಠಂ ಸತತ ನಾಲ್ಕನೇ ವರ್ಷ 'ಟೈಮ್ಸ್ ಹೈಯರ್ ಎಜುಕೇಷನ್' ಇಂಪ್ಯಾಕ್ಟ್ ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನ ಪಡೆದಿದೆ. ಅಮೃತ ವಿಶ್ವ ವಿದ್ಯಾಲಯವು ವಿಶ್ವದ ಅಗ್ರ 100 ಶಿಕ್ಷಣ ಸಂಸ್ಥೆಗಳ ಒಂದು.

'ಟೈಮ್ಸ್ ಹೈಯರ್ ಎಜುಕೇಷನ್' ಈ ವರ್ಷ ನಡೆಸಿದ ಇಂಪ್ಯಾಕ್ಟ್ ರ‍್ಯಾಂಕಿಂಗ್ ಪ್ರಕ್ರಿಯೆಯಲ್ಲಿ 125 ದೇಶಗಳ 2,152 ಉನ್ನತ ಶಿಕ್ಷಣ ಸಂಸ್ಥೆಗಳು ಭಾಗಿಯಾಗಿದ್ದವು. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ವಿಶ್ವವಿದ್ಯಾಲಯಗಳ ಕೊಡುಗೆಗಳು ಮತ್ತು ಸಮಗ್ರ ಮೌಲ್ಯಮಾಪನ ಮತ್ತು ಸುಸ್ಥಿರತೆಗೆ ಸಂಶೋಧನೆ, ಮುಂದಾಳತ್ವ, ತಲುಪುವ ವ್ಯಾಪ್ತಿ, ಬೋಧನೆಗಳ ಬದ್ಧತೆಯನ್ನು ಆಧರಿಸಿ ರ‍್ಯಾಂಕ್ ನೀಡಲಾಗುತ್ತದೆ.

ಜೂನ್ 10ರಿಂದ 13ರವರೆಗೆ ಬ್ಯಾಂಕಾಕ್‌ನಲ್ಲಿ ನಡೆದ 'ಟೈಮ್ಸ್ ಹೈಯರ್ ಎಜುಕೇಷನ್' ಗ್ಲೋಬಲ್ ಸಸ್ಟೇನಬಲ್ ಡೆವಲಪ್‌ಮೆಂಟ್ ಕಾಂಗ್ರೆಸ್‌ನಲ್ಲಿ ಫಲಿತಾಂಶಗಳನ್ನು ಪ್ರಕಟಿಸಲಾಯಿತು. ಅಮೃತ ವಿಶ್ವ ವಿದ್ಯಾಪೀಠಂನಲ್ಲಿನ ಕಾರ್ಯತಂತ್ರದ ಉಪಕ್ರಮಗಳು, ಸಂಶೋಧನೆ ಮತ್ತು ಹೊಸತನದ ಬಗ್ಗೆ ಮನೀಶಾ ವಿ. ರಮೇಶ್ ವಿಚಾರ ಮಂಡಿಸಿದರು.

ತಪಾಸಣೆ ನೆಪ: ಎದೆಗೆ ಮುತ್ತಿಕ್ಕಿದ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎದೆ ನೋವು ಎಂದು ಚಿಕಿತ್ಸೆ ಪಡೆಯಲು ಬಂದ ಮಹಿಳೆಯೊಬ್ಬರ ತಪಾಸಣೆಯ ವೇಳೆ ಎದೆಯ ಭಾಗವನ್ನು ಅನುಚಿತವಾಗಿ ಸ್ಪರ್ಶಿಸಿ, ಮುತ್ತಿಕ್ಕಿ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂಬ ಆರೋಪ ಹೊತ್ತ ನಗರದ ಡಾ.ಎಸ್.ಚೇತನ್‌ಕುಮಾರ್ ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಡಾ.ಎಸ್. ಚೇತನ್‌ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ವೈದ್ಯರು ಮತ್ತು ರೋಗಿಗಳ ಮಧ್ಯದಲ್ಲಿನ ನಡವಳಿಕೆಯ ಬಗ್ಗೆ ಅದರಲ್ಲೂ ಮಹಿಳಾ ರೋಗಿಗಳು ಬಂದಾಗ ಪುರುಷ ವೈದ್ಯರ ವರ್ತನೆ ಶ್ರೇಷ್ಠ ಭಾವನೆಗಳಿಂದ ಕೂಡಿರಬೇಕು' ಎಂದು ಕಿವಿಮಾತು ಹೇಳಿದೆ.

'ವೈದ್ಯರು ರೋಗಿಗಳ ದೌರ್ಬಲ್ಯವನ್ನು ಅನ್ಯಥಾ ಬಳಸಿಕೊಳ್ಳಬಾರದು. ರೋಗಿಯು ವೈದ್ಯರ ಮೇಲಿಟ್ಟಿರುವ ನಂಬಿಕೆಯನ್ನು ದುರುಪಯೋಗಪಡಿಸಿಕೊಳ್ಳಬಾರದು' ಎಂದು ನ್ಯಾಯಪೀಠ ಹೇಳಿದೆ.

'ವೈದ್ಯರು ರೋಗಿಗಳನ್ನು ಪರೀಕ್ಷಿಸುವ ವೇಳೆಯ ಇತಿಮಿತಿಗಳ ಬಗ್ಗೆ ಭಾರತೀಯ ವೈದ್ಯಕೀಯ ಮಂಡಳಿಯ ಸ್ಪಷ್ಟ ಮಾರ್ಗಸೂಚಿಗಳಿವೆ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರ ವೈದ್ಯರು ಮೇಲ್ನೋಟಕ್ಕೆ ಈ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಹಾಗಾಗಿ, ಪ್ರಕರಣದ ಕುರಿತು ತನಿಖೆ ನಡೆಯಬೇಕಾಗಿದೆ' ಎಂದು ಹೇಳಿ ಅರ್ಜಿ ವಜಾಗೊಳಿಸಿದೆ.

ಪ್ರಕರಣವೇನು?: ಡಾ.ಚೇತನ್‌ಕುಮಾರ್ ಕೆಲಸ ನಿರ್ವಹಿಸುತ್ತಿದ್ದ ಆಸ್ಪತ್ರೆಗೆ ಮಹಿಳೆಯೊಬ್ಬರು ಎದೆ ನೋವಿನ ಕಾರಣ ಪರೀಕ್ಷೆ ಮಾಡಿಸಿಕೊಳ್ಳಲು ಬಂದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು ಮತ್ತು ಎಕ್ಸ್‌ರೇ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸೂಚಿಸಿದ್ದರು. ಹೆಚ್ಚಿನ ತಪಾಸಣೆಗೆ ಕ್ಲಿನಿಕ್‌ಗೆ ಖುದ್ದಾಗಿ ಬಂದು ಭೇಟಿಯಾಗುವಂತೆ ಸೂಚಿಸಿದ್ದರು.

'ಮಹಿಳೆಯು 2024ರ ಮಾರ್ಚ್ 21ರಂದು ಕ್ಲಿನಿಕ್‌ಗೆ ಒಬ್ಬರೇ ಹೋಗಿದ್ದರು. ಆಗ ತಪಾಸಣೆ ನಡೆಸುವ ವೇಳೆ ವೈದ್ಯರು ಎದೆಯ ಭಾಗದ ಮೇಲೆ ಸ್ಟೆತಾಸ್ಕೋಪ್ ಇಟ್ಟು ಪರಿಶೀಲಿಸಿದ್ದರು. ನಂತರ ಎದೆಯ ಭಾಗವನ್ನು ಅನುಚಿತವಾಗಿ ಸ್ಪರ್ಶಿಸಿ, ಸ್ತನಕ್ಕೆ ಮುತ್ತಿಕ್ಕಿದ್ದರು. ಮಹಿಳೆ ಕ್ಲಿನಿಕ್‌ನಿಂದ ಹೊರಬಂದು ತಮ್ಮ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದರು' ಎಂದು ದೂರಿನಲ್ಲಿ ವಿವರಿಸಲಾಗಿತ್ತು.

ವೈದ್ಯರ ವಿರುದ್ಧ ಪುಟ್ಟೇನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನಗರದಲ್ಲಿ ಇಂದು

ಪರಿಸರ ದಿನಾಚರಣೆ ಹಾಗೂ ಇಂಗುಗುಂಡಿ ಸಮರ್ಪಣೆ: ಉದ್ಘಾಟನೆ: ಸಿ.ಕೆ. ರವಿಚಂದ್ರ, ಅತಿಥಿಗಳು: ಎಚ್.ಕೆ. ವಿವೇಕಾನಂದ, ಕಾಂತರಾಜ್, ಉದಯ್ ಶಂಕರ್, ಕನ್ನಡ ದಿನೇಶ್, ಕೆ.ಸಿ ಮೂರ್ತಿ, ಸಿ. ಸಂಪತ್ ಕುಮಾರ್, ಸಿಂಹಾದ್ರಿ, ಆಯೋಜನೆ: ರಾಜ್ಯ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಬಾಗ್ ವೆಸ್ಟ್ ಗೇಟ್, ಬೆಳಿಗ್ಗೆ 7.30

'ಮಂಜುಮಲ್ ಬಾಯ್ಸ್' ನಿರ್ದೇಶಕ ಚಿದಂಬರಂ ಜೊತೆಗೆ ಮಾತುಕತೆ:



ಆಯೋಜನೆ ಮತ್ತು ಸ್ಥಳ: ಟೆಂಟ್ ಸಿನೆಮಾ ಶಾಲೆ, ಬನಶಂಕರಿ, ಬೆಳಿಗ್ಗೆ 10

ಹಿರಿಯ ನಾಗರಿಕರಿಗೆ ಡಿಜಿಟಲ್ ಸಾಕ್ಷರತೆ ಮತ್ತು ಸೈಬರ್ ಸುರಕ್ಷತೆ ತರಬೇತಿ ಕಾರ್ಯಕ್ರಮ: ಅತಿಥಿಗಳು: ಬಿ. ದಯಾನಂದ, ಎನ್. ಸಿದ್ದೇಶ್ವರ, ಸ್ಥಳ: ಪೊಲೀಸ್ ಆಯುಕ್ತರ ಕಚೇರಿ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

ವೆಲ್‌ರಾಜ್ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10

ಚಿದಾನಂದ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಎನ್.ಎಸ್. ತಾರಾನಾಥ, ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಅಭಿನಂದನ ಭಾಷಣ: ಎಚ್. ಶಶಿಕಲಾ, ಉಪಸ್ಥಿತಿ: ಪಿ.ಶಿವಪ್ರಸಾದ್, ಬಿ.ಸಿ. ನಾಗೇಂದ್ರ ಕುಮಾರ್, ಸಿ.ಯು. ಮಂಜುನಾಥ್, ಪಿ.ಟಿ. ಶ್ರೀನಿವಾಸ ನಾಯಕ, ಸ್ಥಳ: ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ರಸ್ತೆ, ಬೆಳಿಗ್ಗೆ 10.30

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ: ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಉಪಸ್ಥಿತಿ: ಬಸವರಾಜ ಎಸ್.ಹೊರಟ್ಟಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿ: ಕೆ.ಎ. ದಯಾನಂದ, ಅಧ್ಯಕ್ಷತೆ: ಸಿ.ಎಸ್. ಷಡಾಕ್ಷರಿ, ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ, ಜೆ.ಸಿ.ರಸ್ತೆ, ಸಂಜೆ 4

ಭರತನಾಟ್ಯ ರಂಗಪ್ರವೇಶ, ಪ್ರಸ್ತುತಿ: ಚೈತ್ರಾ ಭಟ್, ಪ್ರತಿಭಾ, ಅತಿಥಿಗಳು: ಸುಪರ್ಣಾ ವೆಂಕಟೇಶ್, ಸಾಯಿ ವೆಂಕಟೇಶ್, ಸುಧೀರ್ ಕುಮಾರ್, ಸುಧೀರ್ ರಾವ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

'ನಾರಿ ಸಮ್ಮಾನ್–2024' ಪ್ರಶಸ್ತಿ ಪ್ರದಾನ ಕಾರ್ಯಕ್ರಮ: ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಮಂಜುಳಾ ಚೆಲ್ಲೂರು, ಸಂತೋಷ್ ಲಾಡ್, ಶಾಲಿನಿ ರಜನೀಶ್, ಬಿ.ಎಚ್. ಎಂ. ದಾರುಕೇಶ್, ಶ್ರೀನಾಥ್, ಎಚ್.ಆರ್. ಶಾಂತರಾಜಣ್ಣ, ಸುಚೇಂದ್ರ ಪ್ರಸಾದ್, ಎಂ.ಪಿ. ಉಮಾದೇವಿ, ಭಾವನಾ, ರಾಣಿ ಸತೀಶ್, ಮಂಜುಳಾ ಎ.ಪಾಟೀಲ್, ಪ್ರಶಸ್ತಿ ಪುರಸ್ಕೃತರು: ಅನುಶ್ರೀ, ಸೋನಾಲ್ ಮಂಥೆರೊ, ಪಲ್ಲವಿ ರವಿ, ಮಮತಾ ಎಸ್. ಎಚ್., ಉಮಾಬಾಯಿ ಖರೆ, ಜ್ಯೋತಿ ಟೋಸೂರ, ರತ್ನಮ್ಮ ಆರ್., ನವಿತ ಜೈನ್, ಆಯೋಜನೆ: ಮೀಡಿಯಾ ವಿಷನ್, ವಿರೂಪಾಕ್ಷಯ್ಯ ಕಲಾ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸಂಜೆ, 5

ಶಾಸ್ತ್ರೀಯ ಸಂಗೀತ ಕಛೇರಿ: ಸಿಂಧು ಮತ್ತು ಸ್ಮಿತ, ಪಿಟೀಲು: ಚಾರುಲತ ರಾಮಾನುಜಂ, ಮೃದಂಗ: ಎಚ್.ಎಸ್. ಸುಧೀಂದ್ರ, ಘಟಂ: ಜಿ. ಓಂಕಾರ್ ರಾವ್, ಆಯೋಜನೆ: ಎಂ.ಇ.ಎಸ್. ಕಲಾವೇದಿ, ಸ್ಥಳ: ಎಂ ಇ ಎಸ್ ಕಾಲೇಜು, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸುಧಾ ಓದಿರಿ

ಕರ್ನಾಟಕ ಸರ್ಕಾರ
ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ
ಕಂಠೀರವ ನಗರ, ಬೆಂಗಳೂರು – 560 096. ದೂರವಾಣಿ: 080–23378611

ಸಂ.ಎಸ್.ಕೆ.ಎಸ್/ಆಡಳಿತ/ಮಾ.ಸಂಪನ್ಮೂಲ/2024–25/34 ದಿನಾಂಕ : 13.06.2024

ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಸಿಬ್ಬಂದಿಯ ಸೇವೆ ಪಡೆಯಲು ಇ–ಟೆಂಡರ್ ಪ್ರಕಟಣೆ

ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ, ಬೆಂಗಳೂರು ಕಛೇರಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿ ಕೊಂಡಿರುವ ಬಾಹ್ಯ ಗುತ್ತಿಗೆದಾರರಿಂದ ಏಕ–ಲಕೋಟೆಯಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸುವವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ: 13.06.2024 ರಂದು ಮಧ್ಯಾಹ್ನ 03.00 ಗಂಟೆ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಟೆಂಡರ್‌ಗಳನ್ನು ಇಎಂಡಿ ಮೊತ್ತದೊಂದಿಗೆ **ದಿನಾಂಕ: 12.07.2024 ರ ಮಧ್ಯಾಹ್ನ 03.00 ಗಂಟೆಯೊಳಗೆ ಸಲ್ಲಿಸಬಹುದು.** ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: +91–080–46010000, +91 080–68948777 ಹಾಗೂ ಹೆಚ್ಚಿನ ಮಾಹಿತಿಯನ್ನು ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಕಚೇರಿ (080– 23378611) ನ್ನು ಸಂಪರ್ಕಿಸಬಹುದು.

ಟೆಂಡರ್ ಅಂದಾಜು ಮೌಲ್ಯ ರೂ 58 ಲಕ್ಷ

ನಿರ್ದೇಶಕ ಮಂಡಳಿಯ ಆದೇಶದನ್ವಯ
ಸಹಿ/– (ರಾಜು.ಆರ್)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/336/ಶಿರಡಿ ಸಾಯಿ/2024–25

ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110
ದೂರವಾಣಿ: 080–29599998 e-mail : forest.brzp@gmail.com

ಸಂಖ್ಯೆ: ಎ3/ಬಿಯುಡಿ/ಟೆಂಡರ್/ಸಿಆರ್–33/2023–24 ದಿನಾಂಕ: 10.06.2024

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ ಕಛೇರಿ ಮತ್ತು ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ಕಛೇರಿಗಳಿಗೆ ಅವಶ್ಯವಿರುವ ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕರು, ಲಿಪಿಕ ಸಹಾಯಕ ಮತ್ತು ರಾತ್ರಿ ಕಾವಲುಗಾರ ನೌಕರರನ್ನು ಮಾನವ ಸಂಪನ್ಮೂಲ ಸೇವಾ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಪಡೆಯು ಸಲುವಾಗಿ ಮತ್ತು ನರೇಗ ಯೋಜನೆಯಡಿ 2024ರ ಮಳೆಗಾಲದಲ್ಲಿ ನೆಡುತೋಪು ನಿರ್ಮಾಣ ಮಾಡಲು ಗಿಡಗಳಿಗೆ ಆಧಾರ ಕಡ್ಡಿಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ನೊಂದಾಯಿತ ಸರಬರಾಜುದಾರರಿಂದ ಸರಬರಜು ಮಾಡಲು ಕರ್ನಾಟಕ ಸರ್ಕಾರದ ಇ–ಪೋರ್ಟಲ್ http://kppp.karnataka.gov.in ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 29–06–2024 ಸಂಜೆ 5.00 ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01–07–2024ರ ಅಪರಾಹ್ನ 5.00 ಗಂಟೆಗೆ. ಆರ್ಥಿಕ ಬಿಡ್‌ನ್ನು ದಿನಾಂಕ: 02.07.2024 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: 06.07.2024ರ ಸಂಜೆ 5.00 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ: 08.07.2024 ರಂದು ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ದಿನಾಂಕ: 09.07.2024 ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/341/ಆಕಾರ್/2024–25

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff.ulb.hosakote@yahoo.com Web:- site.www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/09/2024–25 ದಿನಾಂಕ: 13.06.2024

"ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2023–24ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಎರಡರ ಪ್ರಕಾರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ರೂ.ಗಳಲ್ಲಿ
	ಪರಿಶಿಷ್ಟ ಜಾತಿ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿಗಳು.		
1	DMA/2023-24/RD/WORK_INDENT 17758	47.00	47,000/-
2	DMA/2023-24/RD/WORK_INDENT 17699	49.50	49,500/-
	ಪರಿಶಿಷ್ಟ ಪಂಗಡ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿ.		
3	DMA/2023-24/RD/WORK_INDENT 17724	49.00	49,000/-
	ಸಾಮಾನ್ಯ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿಗಳು.		
4	DMA/2023-24/RD/WORK_INDENT 17761	41.00	82,000/-
5	DMA/2023-24/RD/WORK_INDENT 17760	44.00	88,000/-
6	DMA/2023-24/RD/WORK_INDENT 17759	45.50	91,000/-
7	DMA/2023-24/RD/WORK_INDENT 17755	45.50	91,000/-
8	DMA/2023-24/RD/WORK_INDENT 17749	49.00	98,000/-
9	DMA/2023-24/RD/WORK_INDENT 17722	47.00	94,000/-
10	DMA/2023-24/RD/WORK_INDENT 17684	49.50	99,000/-
11	DMA/2023-24/RD/WORK_INDENT 17766	33.00	66,000/-

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **27/06/2024ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **29/06/2024 ರ ಬೆಳಿಗ್ಗೆ 11:00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **03/07/2024ರ ಬೆಳಗ್ಗೆ 11:00 ಗಂಟೆಗೆ** ನಿಗಧಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.
3) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ **20/06/2024ರ ಬೆಳಿಗ್ಗೆ 11:00 ಗಂಟೆಗೆ** ಹೊಸಕೋಟೆ ನಗರಸಭೆಯ ಪೌರಾಯುಕ್ತರ ಕೊಠಡಿಯಲ್ಲಿ.

ಸಹಿ/– ಪೌರಾಯುಕ್ತರು
ನಗರಸಭೆ, ಹೊಸಕೋಟೆ.

ವಾಸಾಸಂಇ/ವಾ.ಪ್ರ/332/ಶಿರಡಿ ಸಾಯಿ/2024–25

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. ಬಿ–ಟಿಆರ್‌ಓ–ಎಎಂಸಿ–ಸಿಎಂಎಸ್–ಕಿಯೋಸ್ಕ್–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಓಟಿ ಸಂ. ಬಿ–ಟಿಆರ್‌ಓ–ಎಎಂಸಿ–ಸಿಎಂಎಸ್–ಕಿಯೋಸ್ಕ್–02–24 ಬೆಂಗಳೂರು ವಿಭಾಗದ ವಿವಿಧ ಸ್ಥಳಗಳಲ್ಲಿ ಎರಡು ವರ್ಷಗಳ ಅವಧಿಗಾಗಿ ಸಿಎಂಎಸ್ ಕಿಯೋಸ್ಕ್‌ಗಳು, ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು ಮತ್ತು ಅದರ ಎಲ್ಲಾ ಸಂಬಂಧಿತ ಉಪಕರಣದ ಸಿಎಎಂಸಿ	ರೂ. 5,26,721.36

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01–07–2024 ರಂದು 15:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್‌ಓ ಬೆಂಗಳೂರು
ಪಿಯುಬಿ/157/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY

IN THE COURT OF THE HON'BLE II ADDITIONAL FAMILY JUDGE, FAMILY COURT, AT BANGALORE
M.C. No. 1603/2024

BETWEEN: Mr. Pulluru Balaji, aged about 36 years, S/o. P. Nagaraju, Residing at #804, 8th Floor, G-Block, BEL Multistored Apartments, BEL Officers Colony, Jalahalli, Bangalore - 560 013. ... **PETITIONER**

AND: Mrs. Mounika B.N, aged about 29 years, W/o Mr. Pulluru Balaji, D/o. Nagaraju B.S, Residing at No.302, 36, Retreat Garden Apartment, White City Layout, Seegehalli, VTC: Virgonagar, Po: Virgonagar, Bangalore Rural - 560 049. ... **RESPONDENT**

PUBLIC NOTICE

Whereas the Petitioner above named has filed the above Petition under section 12(1) (c) of the Hindu Marriage Act, 1956 seeking Judgement and Decree in his favour to declare the marriage solemnized on 17/03/2023 between the Petitioner and the Respondent at Shri Subrahmanya Swamy Temple, Whitefield Railway Colony, Kadugodi, Bangalore - 560 067 as null and void and to award cost of the this Petition. And to grant such other and further reliefs based on the nature and circumstances of the above case in the interest of justice and equity. Hence, the notice hereby issued to Respondent to appear either-in-person or through an authorised person or Advocate and file objection if any on **19/07/2024** at **11:00 A.M.** before the Hon'ble II Additional Principal Judge Family court, at Bangalore. In the event of fail to appear on the date, it would be deemed that you have no interested in the matter and would be decided in your absence exparte.

Given under my hand and seal of the court on this 05/06/2024

By order of the Court, Sheristedar, Family Court, Bengaluru

Advocate for Petitioner: **MAHESH .M.N KAMAL AND Co.**
No. 905, 9th Floor, Mittal Tower, M.G. Road, Bangalore-560001.

ಭಾರತ ಸರ್ಕಾರ
ತರಬೇತಿ ಮಹಾ ನಿರ್ದೇಶನಾಲಯ
ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ
(https://www.msde.gov.in/)
Directorate General of Training | Skill India कौशल भारत - कुशल भारत

ಪ್ರವೇಶಾತಿ ಪ್ರಕಟಣೆ

ಕ್ರಾಫ್ಟ್ ಇನ್‌ಸ್ಟ್ರಕ್ಟರ್ ಸ್ಕೀಮ್ (ಸಿಐಟಿಎಸ್) ಅಡಿಯಲ್ಲಿನ ಕೋರ್ಸ್‌ಗಳಿಗೆ, ನ್ಯಾಷನಲ್ ನ್ಯಾಷನಲ್ ಸ್ಕಿಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ (ಎನ್‌ಎಸ್‌ಟಿಐ) ಮತ್ತು ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಆಫ್ ಟ್ರೈನರ್ಸ್ (ಐಟಿಒಟಿ) ಗಳಲ್ಲಿ, ದಿನಾಂಕ **21.07.2024** ರಂದು ಕೈಗೊಳ್ಳಲಾಗುವ **ಆಲ್ ಇಂಡಿಯಾ ಕಾಮನ್ ಎಂಟ್ರನ್ಸ್ ಟೆಸ್ಟ್** (ಎಐಸಿಇಟಿ) ಮುಖಾಂತರ ಪ್ರವೇಶಾತಿ ನೀಡಲಾಗುತ್ತದೆ. ದೇಶಾದ್ಯಂತ ವಿವಿಧ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆಗೆ ಹಾಜರಾಗಲು ದಿನಾಂಕ **15.06.2024** ರಿಂದ **05.07.2024** ರವರೆಗೆ ಅರ್ಹ ಅಭ್ಯರ್ಥಿಗಳಿಂದ www.nimionlineadmission.in ನಲ್ಲಿ ಕೈಗೊಳ್ಳಲಾಗುವ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ (ಆನ್‌ಲೈನ್) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ: www.nimionlineadmission.in

CBC 63101/11/0002/2425

varthana
ವರ್ತನಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ : ನಂ. 5ಬಿಸಿ–110, ವರಸಿದ್ಧಿ, 3ನೇ ಮಹಡಿ, ಹೊರ ವರ್ತುಲ ರಸ್ತೆ, ಸರ್ವೀಸ್ ರಸ್ತೆ, 3ನೇ ಬ್ಲಾಕ್, ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣ ನಗರ, ಬೆಂಗಳೂರು – 560043.
ವೆಬ್‌ಸೈಟ್ : www.varthana.com, ಇ–ಮೇಲ್: care@varthana.com, ದೂರವಾಣಿ : 080–68455777, **ಶಾಖಾ ಕಚೇರಿ :** 5ಬಿಸಿ–110, ವರಸಿದ್ಧಿ, 3ನೇ ಮಹಡಿ, ಹೊರ ವರ್ತುಲ ರಸ್ತೆ, ಸರ್ವೀಸ್ ರಸ್ತೆ, 3ನೇ ಬ್ಲಾಕ್, ಹೆಚ್.ಆರ್.ಬಿ.ಆರ್. ಲೇಔಟ್, ಕಲ್ಯಾಣ ನಗರ, ಬೆಂಗಳೂರು – 560043.

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸಾರ್ವಜನಿಕರ ಹರಾಜು ಪ್ರಕಟಣೆ

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ೨೦೦೨ರ ಭದ್ರತಾ ಆಸಕ್ತಿ ಕಾಯ್ದೆ ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು ೨೦೦೨ರ ನಿಯಮ ೮(೬)ರ ಅಡಿ ಓದಿಕೊಂಡಂತೆ ಸ್ಥಿರಾಸ್ತಿಗಳ ಮಾರಾಟ ಕುರಿತು ಹರಾಜು ಮಾರಾಟ ನೋಟಿಸ್.

ಈ ಮೂಲಕ ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು), ಸಹ ಸಾಲಗಾರ(ರು) ಮತ್ತು ಅಡಮಾನದಾರ(ರು)ಗೆ ಸೂಚನೆ ನೀಡುವುದೇನೆಂದರೆ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಭದ್ರತಾ ಸಾಲಗಾರರಿಗೆ ಅಡಮಾನ ಮಾಡಲಾಗಿದ್ದು, ಅದರ ಸ್ವಾಧೀನವನ್ನು **ವರ್ತನಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು (ಈ ಮೊದಲು ಮೆ. ತಿರುಮೇನಿ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ಎಂದಾಗಿತ್ತು) ಅಧಿಕೃತ ಅಧಿಕಾರಿ ತೆಗೆದುಕೊಂಡಿದ್ದಾರೆ.** ಸ್ವಾಧೀನ ಪಡೆದ ಸ್ವತ್ತನ್ನು ಈ ಕೆಳಗೆ ನೀಡಿರುವ ಖಾತೆಯಲ್ಲಿ ಬಾಕಿಯಿರುವ ಮೊತ್ತ ವಸೂಲಿಗಾಗಿ "ಎಲ್ಲಿದೆಯೋ ಹಾಗೇ", "ಏನಿದೆಯೋ ಹಾಗೆ" ದಿನಾಂಕ : 20-07-2024 (ಶನಿವಾರ) ರಂದು ಮಾರಾಟ ಮಾಡಲಾಗುತ್ತದೆ. ಸಾಲಗಾರ(ರ), ಅಡಮಾನದಾರ(ರ), ಭದ್ರತಾ ಸ್ವತ್ತು / ಬಾಕಿ / ಮೀಸಲು ಬೆಲೆ / ಹರಾಜು ದಿನಾಂಕ ಮತ್ತು ಸಮಯ, ಇ.ಎಂ.ಡಿ., ಬಿಡ್ ಹೆಚ್ಚಳ ಮೊತ್ತದ ವಿವರವನ್ನು ಈ ಕೆಳಗೆ ನೀಡಲಾಗಿದೆ.

ಸಾಲಗಾರರು / ಅಡಮಾನದಾರ ಹೆಸರು : 1. ಮೆ. ಅತ್ತಿಬೆಲೆ ಪಬ್ಲಿಕ್ ಸ್ಕೂಲ್, ಅದರ ಅಧಿಕೃತ ಸಹಿದಾರರಿಂದ ಪ್ರತಿನಿಧಿಸುತ್ತದೆ, 2. ಮೆ. ಬೆಸ್ಟ್ ಶಿಕ್ಷಣ ಟ್ರಸ್ಟ್, ಅದರ ಅಧಿಕೃತ ಸಹಿದಾರರಿಂದ ಪ್ರತಿನಿಧಿಸುತ್ತದೆ, 3. ಶ್ರೀ ಮುನಿರಾಜು ಡಿ. ತಂದೆ ದಾರಾವರು ಮುನಿಸ್ವಾಮಿ, 4. ಶ್ರೀಮತಿ ಧರ್ಮವತಿ ಕೆ. ತಂದೆ ಎನ್.ಎಂ. ಕೃಷ್ಣಪ್ಪ, 5. ಶ್ರೀ ಟಿ. ರಾಜಪ್ಪ ತಂದೆ ದಿ.ತಿಮ್ಮರಾಯಪ್ಪ, 6. ಶ್ರೀ ಟಿ. ರಾಜಪ್ಪ ಡಿ. ತಂದೆ ದಾರಾವರು, 7. ಶ್ರೀಮತಿ ಮುನಿರತ್ನ ಡಿ. ತಂದೆ ದಾರವಾರು ವೆಂಕಟರಮಣಪ್ಪ, 8. ಶ್ರೀಮತಿ ಮಂಜುಳಾ ಡಿ. ತಂದೆ ದರವಾರು ವೆಂಕಟರಮಣಪ್ಪ, 9. ಶ್ರೀ ಕೆ. ಮೋಹನ್ಕಾಂತ್, ತಂದೆ ಕೃಷ್ಣಪ್ಪ

ಸಾಲದ ಖಾತೆ ಸಂಖ್ಯೆ : U22BLR-BLR-021775, U21BLR-BLR-018140, S19BLR-BLR-006637, U21BLR-BLR-016692, S20BLR-BLR-013878, S18BLR-BLR-000988, U20BLR-BLR-014515, U22BLR-BLR-020090.

ರೂಪಾಯಿಗಳಲ್ಲಿ ಬಾಕಿ ಮೊತ್ತದ ವಿವರ : ರೂ. 3,65,79,706/- (ರೂಪಾಯಿ ಮೂರು ಕೋಟಿ ಅರವತ್ತೈದು ಲಕ್ಷ ಎಪ್ಪತ್ತೊಂಬತ್ತು ಸಾವಿರದ ಏಳುನೂರಾ ಆರು ಮಾತ್ರ) ದಿನಾಂಕ : 14-06-2024 ರಂತೆ, ಜೊತೆಗೆ ಬಾಕಿ ಮೊತ್ತ ಪಾವತಿಯಾಗುವವರೆಗೆ ಒಪ್ಪಂದದ ರಚನಾತ್ಮಕ ದರ, ಬಡ್ಡಿ ಜೊತೆಗೆ ಲೀಗಲ್ ವೆಚ್ಚ / ಶುಲ್ಕ ಸೇರಿ.

ಸ್ಥಿರಾಸ್ತಿಯ ವಿವರಗಳು : ಅನುಸೂಚಿ "ಎ" : ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಆಸ್ತಿ ನಿವೇಶನ ಸಂಖ್ಯೆ: 54, ನಮೂನೆ ಸಂಖ್ಯೆ: 9 & 10, ಸೈ ನಂ: 295 ರಲ್ಲಿ 6 ಎಕರೆ 9 ಗುಂಟಾಗಳು, ಜಂಟಾರ್ ಸಂಖ್ಯೆ: 3264 ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ, ಉತ್ತರದಿಂದ ದಕ್ಷಿಣಕ್ಕೆ : 30 ಅಡಿ 1200 ಚದರ ಅಡಿ ನಿರ್ಮಿಸಿದ ಮನೆ ನೆಲ ಮಹಡಿ + 2 ಅಂತಸ್ತಿನ ಕಟ್ಟಡ ಅತ್ತಿಬೆಲೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಮತ್ತು ಚಕ್ಕುಬಂಧಿ :– ಪೂರ್ವಕ್ಕೆ : ಸೈಟ್ ಸಂಖ್ಯೆ 43, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ಸಂಖ್ಯೆ 55.
ಮೇಲಿನ ಆಸ್ತಿ/ಗಳ ಮೀಸಲು ಬೆಲೆ ರೂ. 64,20,000/- ಮತ್ತು ಮುಂಗಡ ಠೇವಣಿ ಹಣ (ಮೀಸಲು ಬೆಲೆಯ ಇಎಂಡಿ 10%) ರೂ. 6,42,000/-. ತಿಳಿದಿರುವ ಹೊರೆಗಳು, ಯಾವುದಾದರೂ ಇದ್ದರೆ: ಶೂನ್ಯ

ಅನುಸೂಚಿ "ಬಿ" : ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಸರ್ವೇ ನಂ. 57/1, ಅಳತೆ 3 ಗುಂಟೆ, ಆಸ್ತಿ, ಕೋಲಾರ ಜಿಲ್ಲೆ, ಮಾಲೂರು ತಾಲೂಕು, ಕೋಲಾರ ಜಿಲ್ಲೆಯ ಆಲಂಬಾಡಿ ಗ್ರಾಮ. ಚಕ್ಕುಬಂಧಿ :– ಪೂರ್ವಕ್ಕೆ : ಸರ್ಕಾರಿ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಚೆನ್ನಪ್ಪ ಮನೆ, ದಕ್ಷಿಣಕ್ಕೆ : ಸ್ವಂತ ಮನೆ.
ಮೇಲಿನ ಆಸ್ತಿ/ಗಳ ಮೀಸಲು ಬೆಲೆ ರೂ. 80,41,100/- ಮತ್ತು ಮುಂಗಡ ಠೇವಣಿ ಹಣ (ಮೀಸಲು ಬೆಲೆಯ ಇಎಂಡಿ 10%) ರೂ. 8,04,110/-. ತಿಳಿದಿರುವ ಹೊರೆಗಳು, ಯಾವುದಾದರೂ ಇದ್ದರೆ : ಶೂನ್ಯ

ಅನುಸೂಚಿ "ಸಿ" : ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಆಸ್ತಿ ನಿವೇಶನ ಸಂಖ್ಯೆ: 1, ಆಸ್ತಿ ಸಂಖ್ಯೆ: 600/1, ಖಾತಾ ಸಂಖ್ಯೆ: 756 ಅಳತೆ 1,200 ಚದರ ಅಡಿ ಬಿ ಬೊಮ್ಮಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ಒಟ್ಟು 40 ಅಡಿ. 1,200 ಚದರ ಅಡಿ ಮತ್ತು ಚಕಬಂದಿ: ಪೂರ್ವದಿಂದ: ಆಸ್ತಿ ಎಸ್ ವೆಂಕಟಸ್ವಾಮಿ ರೆಡ್ಡಿಗೆ ಸೇರಿದೆ. ಪಶ್ಚಿಮದಿಂದ: ಸೈಟ್ ನಂ. 2 ಉತ್ತರದಿಂದ: ಆಸ್ತಿ ಜಗದೀಶ್ ಅವರಿಗೆ ಸೇರಿದೆ. ದಕ್ಷಿಣದಿಂದ: ರಸ್ತೆ
ಮೇಲಿನ ಆಸ್ತಿ/ಗಳ ಮೀಸಲು ಬೆಲೆ ರೂ. 82,35,000/- ಮತ್ತು ಮುಂಗಡ ಠೇವಣಿ ಹಣ (ಮೀಸಲು ಬೆಲೆಯ ಇಎಂಡಿ 10%) ರೂ. 8,23,500/-. ತಿಳಿದಿರುವ ಹೊರೆಗಳು, ಯಾವುದಾದರೂ ಇದ್ದರೆ : ಶೂನ್ಯ

ಅನುಸೂಚಿ "ಡಿ" : ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಹಳೆ ಸೈ ನಂ: 379/2, ಹೊಸ ಸೈ ನಂ: 379/4 ಅಳತೆಯ 16.08 ಗುಂಟಾಗಳನ್ನು ಹೊಂದಿರುವ ಆಸ್ತಿ ಅತ್ತಿಬೆಲೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು ಮತ್ತು ಚಕ್ಕುಬಂಧಿ : ಪೂರ್ವಕ್ಕೆ : ನಾರಾಯಣಸ್ವಾಮಿಯವರ ಆಸ್ತಿ, ಪಶ್ಚಿಮಕ್ಕೆ : ಡಿ ಮುನಿರಾಜು ಅವರ ಆಸ್ತಿ, ಉತ್ತರಕ್ಕೆ : ಸೇಂಟ್ ಡೊಮಿಯಾಮಿಕ್ ಶಾಲೆಯ ಆಸ್ತಿ, ದಕ್ಷಿಣಕ್ಕೆ : ರಸ್ತೆ
ಮೇಲಿನ ಆಸ್ತಿ/ಗಳ ರಿಸರ್ವ್ ಬೆಲೆ ರೂ. 1,20,00,000/- ಮತ್ತು ಮುಂಗಡ ಠೇವಣಿ ಹಣ (ಮೀಸಲು ಬೆಲೆಯ ಇಎಂಡಿ 10%) ರೂ. 12,00,000/-. ತಿಳಿದಿರುವ ಹೊರೆಗಳು, ಯಾವುದಾದರೂ ಇದ್ದರೆ : ಶೂನ್ಯ

ಉದ್ದೇಶಿತ ಬಿಡ್‌ದಾರರು ತಮ್ಮ ಇ.ಎಮ್.ಡಿ. ಮೊತ್ತ ಮತ್ತು ಬಿಡ್ ಮೊತ್ತವನ್ನು ಕೆವೈಸಿ ದಾಖಲೆಗಳೊಂದಿಗೆ (ಪ್ಯಾನ್ ಕಾರ್ಡ್ ಮತ್ತು ಆಧಾರ್/ಮತದಾರರ ಚೀಟಿ/ಚಾಲನಾ ಪರವಾನಗಿ) ಮತ್ತು ರೂ. 1,000/- ಮರು ಪಾವತಿಸಲಾಗದ ಟೆಂಡರ್ ಶುಲ್ಕವನ್ನು ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಡ್ರಾಫ್ಟ್ ಡ್ರಾಫ್ಟ್/ಪೇ ಆರ್ಡರ್ ಮೂಲಕ, **"ಮೆ॥ ವರ್ತನಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್" ಪರವಾಗಿ, ಬೆಂಗಳೂರಿನಲ್ಲಿ ದಿನಾಂಕ : 20-07-2024 ರಂದು (ಶನಿವಾರ) ಬೆಳಗ್ಗೆ 11.00 ಗಂಟೆ ಅಥವಾ ಅದಕ್ಕಿಂತ ಮೊದಲು ಪಾವತಿಸಬೇಕು.**

ಹರಾಜು ನಡೆಯುವ ಸ್ಥಳ : ವರಸಿದ್ಧಿ, ನಂ. 5ಬಿಸಿ-110, 3ನೇ ಮಹಡಿ, 3ನೇ ಬ್ಲಾಕ್, ಹೆಚ್.ಆರ್.ಬಿ.ಆರ್. ಲೇ ಔಟ್, ಕಲ್ಯಾಣ ನಗರ, ಬೆಂಗಳೂರು - 560043. **ದಿನಾಂಕ : 20-07-2024 ರಂದು (ಶನಿವಾರ) ಮಧ್ಯಾಹ್ನ 1.00 ಗಂಟೆಗೆ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಕಂಪನಿಯ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ : www.varthana.com ಅನ್ನು ನೋಡಿ.
ನಿರೀಕ್ಷಿತ ಬಿಡ್ಡುದಾರರು ಹೆಚ್ಚಿನ ವಿವರಗಳಿಗೆ / ಮಾಹಿತಿಗಾಗಿ **ಅಧಿಕೃತ ಅಧಿಕಾರಿ, ಶ್ರೀಮತಿ ವೀಣಾ ವೈ.ಎಂ. - ದೂರವಾಣಿ ಸಂಖ್ಯೆ : 9900647241, ಶ್ರೀ ಲೋಕೇಶ ಜಿ. ದೂರವಾಣಿ ಸಂಖ್ಯೆ : 9886767620.** ಅವರನ್ನು ಸಂಪರ್ಕಿಸಬಹುದು.

ದಿನಾಂಕ : 15-06-2024, ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ, ವರ್ತನಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್**

ಸಂಸ್ಕೃತ ಕಲಿಕೆಗೆ ಪ್ರೇರಣೆ ಅಗತ್ಯ

ಸಂಸ್ಕೃತ ವಿ.ವಿ. ಘಟಿಕೋತ್ಸವದಲ್ಲಿ ರಾಜ್ಯಪಾಲ ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮಕ್ಕಳಿಗೆ ಸ್ಥಳೀಯ ಭಾಷೆಯೊಂದಿಗೆ ಸಂಸ್ಕೃತ ಭಾಷೆ ಅಧ್ಯಯನಕ್ಕೂ ಪ್ರೇರಣೆ ನೀಡಬೇಕಾದ ಅಗತ್ಯವಿದೆ' ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ 10 ಮತ್ತು 11ನೆಯ ದೀಕ್ಷಾಂತ ಘಟಿಕೋತ್ಸವದಲ್ಲಿ ಶುಕ್ರವಾರ ಅವರು ಮಾತನಾಡಿದರು.

'ಸಂಸ್ಕೃತದಲ್ಲಿ ಅಧ್ಯಯನ ಮಾಡಿದರೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಯಶಸ್ಸು ಸಿಗುವುದಿಲ್ಲ ಎಂದು ಹೇಳಲಾಗುತ್ತದೆ. ಆದರೆ, ಸಂಸ್ಕೃತ ಓದಿಯೇ ಇಸ್ರೊ ವಿಜ್ಞಾನಿಯೊಬ್ಬರು ಸಾಧನೆ ಮಾಡಿದ್ದಾರೆ. ಸಂಸ್ಕೃತದ ಮೇಲೆ ನನಗೆ ಎಲ್ಲಿಲ್ಲದ ವ್ಯಾಮೋಹ. ಆದ್ದರಿಂದಲೇ, ನಾನು ಶಾಸಕನಾಗಿ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯನಾದಾಗ ಸಂಸ್ಕೃತದಲ್ಲೇ ಪ್ರತಿಜ್ಞಾವಿಧಿ ಸ್ವೀಕರಿಸಿದೆ' ಎಂದು ಹೇಳಿದರು.

'ರಾಜ್ಯದ ಮತ್ತೂರು ಗ್ರಾಮದಲ್ಲಿ ಜನರು ಸಂಸ್ಕೃತ ಭಾಷೆಯಲ್ಲೇ ಹೆಚ್ಚು ಮಾತನಾಡುತ್ತಾರೆ ಎಂದು ಕೇಳಿದ್ದೇನೆ. ಆ ಗ್ರಾಮಕ್ಕೆ ಮುಂದಿನ ದಿನಗಳಲ್ಲಿ ಭೇಟಿ ನೀಡುತ್ತೇನೆ. ಜ್ಞಾನವಾಣಿಯಾಗಿರುವ ಸಂಸ್ಕೃತವನ್ನು ಉಳಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ' ಎಂದು ಅಭಿಪ್ರಾಯಪಟ್ಟರು.

ಸಂಸ್ಕೃತ ವಿಶಾಲವಾದ ತಳಹದಿ ಹೊಂದಿದೆ. ಕೆಲವರು ಮಾತ್ರ ಅಧ್ಯಯನ ಮಾಡಲು ಯೋಗ್ಯವಾದ ಭಾಷೆ ಎಂಬ ಕಾಲವಿತ್ತು. ಆದರೆ, ಈಗ ಪ್ರತಿಯೊಬ್ಬರೂ ಸಂಸ್ಕೃತ ಕಲಿಯುವಂತಹ ವಾತಾವರಣ ಸೃಷ್ಟಿಯಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಗೌರವ ಡಿ.ಲಿಟ್ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಸಂಸ್ಕೃತ ಓದಿಯೇ ಇಸ್ರೊ ವಿಜ್ಞಾನಿಯಿಂದ ಸಾಧನೆ: ಗೆಹಲೋತ್
- ಸಂಸ್ಕೃತ ಸಾಹಿತ್ಯ ರಾಷ್ಟ್ರದ ಹೃದಯವೆಂದ ಸಚಿವ ಎಂ.ಸಿ. ಸುಧಾಕರ್
- ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಗೆ ಗೌರವ ಡಿ.ಲಿಟ್. ಪ್ರದಾನ

'ಸಂಸ್ಕೃತವನ್ನು ಸಂಕುಚಿತವಾಗಿ ನೋಡಬಾರದು. ಇದು ಬಳಸಿದಷ್ಟೂ ಪ್ರಕಾಶಮಾನವಾದ ಭಾಷೆಯಾಗಿದೆ. ಸಂಸ್ಕೃತ ಸಾಹಿತ್ಯ ಭವ್ಯ ಪರಂಪರೆ ಹೊಂದಿದ್ದು, ನಮ್ಮ ರಾಷ್ಟ್ರದ ಹೃದಯವಾಗಿದೆ' ಎಂದರು.

2021–22ನೇ ಸಾಲಿನ ಗೌರವ ಡಿ.ಲಿಟ್. ಅನ್ನು ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಚಿನ್ಮಯ ಇಂಟರ್ ನ್ಯಾಷನಲ್ ಫೌಂಡೇಷನ್‌ನ ಪ್ರೊ. ಗೌರೀ ಮಾಹುಲೀಕರ್, ಪಳ್ಳತ್ತಡ್ಕದ ಘನಪಾಠೀ ಶಂಕರನಾರಾಯಣ ಭಟ್ಟ ಹಾಗೂ 2022–23ನೇ ಸಾಲಿನ ಡಿ.ಲಿಟ್. ಅನ್ನು ನಂದೇಶ್ವರ ಕಮರಿಮಠದ ದುಂಡೇಶ್ವರ ಸ್ವಾಮೀಜಿ, ಹಿತ್ಲಳ್ಳಿಯ ಸೂರ್ಯನಾರಾಯಣ ಭಟ್ಟ, ಎ. ಹರಿದಾಸ ಭಟ್ಟ ಅವರಿಗೆ ನೀಡಲಾಯಿತು. 1,004 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಕೃತ ವಿವಿ ಕುಲಪತಿ ಡಾ.ಎಸ್.ಅಹಲ್ಯಾ, ಕುಲಸಚಿವರಾದ ಪ್ರೊ.ವಿ.ಗಿರೀಶ್ ಚಂದ್ರ, ಡಾ.ಕೆ. ರಾಮಕೃಷ್ಣ ಭಟ್, ಸಂಸ್ಕೃತ ವಿದ್ವಾಂಸ ಎಚ್.ವಿ. ನಾಗರಾಜರಾವ್ ಉಪಸ್ಥಿತರಿದ್ದರು.

ಬಿಬಿಎಂಪಿ ಗುತ್ತಿಗೆದಾರರಿಗೆ ₹467 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ₹467 ಕೋಟಿ ಪಾವತಿ ಮಾಡಲು ವಲಯಗಳ ಮುಖ್ಯ ಎಂಜಿನಿಯರ್‌ಗಳಿಗೆ ಹಣ ವರ್ಗಾವಣೆ ಮಾಡಲಾಗಿದೆ.

ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ 2023ರ ಅಕ್ಟೋಬರ್ 12ರಿಂದ ನವೆಂಬರ್ 23ರವರೆಗೆ ಸಲ್ಲಿಸಲಾಗಿರುವ ಬಿಲ್‌ಗಳಿಗೆ ಜೇಷ್ಠತೆ ಆಧಾರದಲ್ಲಿ ಹಣ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಈ ಬಾಬ್ತಿನಲ್ಲಿ ಕೇಂದ್ರ ಹಾಗೂ ಎಂಟೂ ವಲಯಗಳಿಗೆ ₹337.23 ಕೋಟಿ ಹಣವನ್ನು ಹಣಕಾಸು ವಿಭಾಗ ವಿಶೇಷ ಆಯುಕ್ತರು ವಲಯ ಎಂಜಿನಿಯರ್‌ಗಳ ಖಾತೆಗೆ ಜೂನ್ 13 ವರ್ಗಾಯಿಸಿದ್ದಾರೆ. ಈ ಮೊತ್ತ ಪಾವತಿಯ ನಂತರವೂ ಇನ್ನೂ ₹1,500 ಕೋಟಿ ಬಾಕಿ ಉಳಿಯುತ್ತದೆ.

ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ 2022ರ ಜೂನ್‌ನಿಂದ ಆಗಸ್ಟ್ ವರೆಗಿನ ಬಿಲ್ ಪಾವತಿಗೆ ₹130.11 ಕೋಟಿ ಹಣ ಬಿಡುಗಡೆ ಮಾಡಲಾಗಿದೆ.

ಪ್ರತಿ ಬಿಲ್‌ನ ಶೇ 75ರಷ್ಟನ್ನು ಮಾತ್ರ ಜೇಷ್ಠತೆ ಆಧಾರದಲ್ಲಿ ಪಾವತಿಸಲಾಗುತ್ತದೆ. ಇನ್ನೂ 22 ತಿಂಗಳ ಬಿಲ್ ಬಾಕಿ ಉಳಿದಿದ್ದು, ಅದರ ಮೊತ್ತ ಸುಮಾರು ₹1700 ಕೋಟಿಯಷ್ಟಿದೆ.

'ಬಾಕಿ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂಬುದೂ ಸೇರಿದಂತೆ ಬಿಬಿಎಂಪಿ ಗುತ್ತಿಗೆದಾರರ ಸಂಘದ ಒಂಬತ್ತು ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಲಾಗಿತ್ತು.

'ಇದೀಗ ₹467 ಕೋಟಿ ಬಿಡುಗಡೆಯಾಗಿದ್ದು, ಉಳಿದ ಹಣ ಶೀಘ್ರ ಬಿಡುಗಡೆಯಾಗುವ ಭರವಸೆ ಇದೆ' ಎಂದು ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

Rajiv Gandhi Institute of Petroleum Technology (RGIPT)
(An Institute of National Importance Established under an Act of Parliament, MoPNG, Govt. of India)
ENERGY INSTITUTE, BENGALURU
M.Tech & Ph.D. Admission Notice – 2024
Application are invited for admission to M.Tech & Ph.D programs at Energy Institute, Bengaluru (Centre of RGIPT, Jais) for Odd (July) Semester, Academic Year 2024-25
M.Tech Admissions at EIB are open for GATE-qualified Students: Assistantship @ Rs.12,400/- per month and Non-GATE Students:Assistantship@Rs.8,000/-per month.
M.Tech Programmes offered at EIB:
M.Tech in Electric Vehicle Technology | M.Tech in Renewable Energy
Ph.D. Programs: Electrical and Electronics Engineering, and Computer Science and Engineering
For more information on Program structure and Eligibility, please visit the admission web page: https://www.rgipt.ac.in/en/page/postgraduate-admission
Mob:+91-9310640409, +91-9149210938, +91-9444970220, +91-8918409620
Email: admissionblr@rgipt.ac.in/ hodeib@rgipt.ac.in
Last Date of Application: 30-06-2024

ಮಂಡಿಯಲ್ಲೇ 365 ಮೆಟ್ಟಿಲು ಏರಿದ ಎಚ್‌ಡಿಕೆ ಅಭಿಮಾನಿ

ಮೇಲುಕೋಟೆ: ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದರಿಂದ, ಮಂಡ್ಯ ತಾಲ್ಲೂಕಿನ ಚಿಕ್ಕಮಂಡ್ಯ ಗ್ರಾಮದ ಲೋಕೇಶ್ ಇಲ್ಲಿನ ಯೋಗನರಸಿಂಹಸ್ವಾಮಿ ಬೆಟ್ಟವನ್ನು ಮಂಡಿಯಲ್ಲಿ ಹತ್ತಿ ಶುಕ್ರವಾರ ಹರಕೆ ತೀರಿಸಿದ್ದಾರೆ. ಲೋಕೇಶ್ ಅವರ ಸಾಹಸಕ್ಕೆ ಬಿಜೆಪಿ ಮತ್ತು ಜೆಡಿಎಸ್‌ನಿಂದ ಅಭಿನಂದನೆ ಮಹಾಪೂರವೇ ಹರಿದು ಬಂದಿದೆ.

ಇದು ಬ್ರಹ್ಮರ್ಷಿ ಆನಂದ ಸಿದ್ಧಿ ಪೀಠಂನ ಆಯುರ್ವೇದ ಉತ್ಪನ್ನ
Discover Digestive Harmony with Gastro Jeevan:
Your Ayurvedic Solution for Acidity & Gastric wellness.
ಗ್ಯಾಸ್ಟ್ರಿಕ್ & ಅಸಿಡಿಟಿ ಸಮಸ್ಯೆಗೆ ಸ್ಥಿರ ಪರಿಹಾರ
ಗ್ಯಾಸ್ಟ್ರೋ ಜೀವನ್
ಹೊಟ್ಟೆ ನೋವು, ಗ್ಯಾಸ್ ಟ್ರಬಲ್, ಎದೆಯುರಿ, ಹುಳಿ ತೇಗು (ಅಸಿಡಿಟಿ), ಅಜೀರ್ಣ, ವಾಂತಿ, ಹೊಟ್ಟೆ ಉಬ್ಬರಿಕೆ, ಹಸಿವೆ ಸಮಸ್ಯೆ, ನಿದ್ರಾಹೀನತೆ, ಮಲಬದ್ಧತೆ, ಬೆನ್ನು ನೋವು, ಬೇಧಿ, ತಲೆನೋವು, ದು:ಸ್ವಪ್ನ ಮತ್ತು ನಿಶ್ಯಕ್ತಿ ಪರಿಹಾರಕ್ಕೆ
ಗ್ಯಾಸ್ಟ್ರೋ ಜೀವನ್
GASTRO JEEVAN
Herbal Antacid
200 ML
ಕೇವಲ 160 ರೂ. ಮಾತ್ರ
ಹೊಟ್ಟೆಗೆ ಸಂಬಂಧಿಸಿದ ಎಲ್ಲಾ ತರಹದ ಕಾಯಿಲೆಗಳಿಗೆ ಶಾಶ್ವತ ಪರಿಹಾರ
ಗ್ಯಾಸ್ಟ್ರೋ ಜೀವನ್
ದಿನಕ್ಕೆ ಮೂರು ಬಾರಿ ಊಟದ ನಂತರ ಒಂದು ಚಮಚ ಔಷಧ ಸೇವಿಸಿ.
ಮಹರ್ಷಿ ಮಂದಿರದಲ್ಲಿ ಡಾ. ಮಹರ್ಷಿ ಆನಂದ ಗುರೂಜಿ ಅವರು ಹೊಟ್ಟೆ ಸಂಬಂಧ ಕಾಯಿಲೆಗೆ ರಾಮಬಾಣವಾಗಿ ಸಿದ್ಧಪಡಿಸಿದ ಆಯುರ್ವೇದ ಉತ್ಪನ್ನ ಗ್ಯಾಸ್ಟ್ರೋ ಜೀವನ್
ಎಲ್ಲಾ ಇಂಗ್ಲೀಷ್ - ಆಯುರ್ವೇದಿಕ್ ಮೆಡಿಕಲ್ ಸ್ಟೋರ್, ಸೂಪರ್ ಮಾರ್ಕೆಟ್ ಮತ್ತು ಲೇಡೀಸ್ ಸ್ಟೋರ್‌ಗಳಲ್ಲಿ ಲಭ್ಯ.
ಹೆಚ್ಚಿನ ವಿವರಗಳಿಗೆ ವಿಚಾರಿಸಿ: Maharshi Ayur Care PH: 8123357321, 9741618883
Super Stockists: Naresh Enterprises, Mangalore. 8197501501

ಮುಧೋಳ: ನಕಲಿ ಗುಟ್ಕಾ ವಶ, 9 ಮಂದಿ ಬಂಧನ

ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಪೊಲೀಸರು ಆರೋಪಿಗಳನ್ನು ಬಂಧಿಸಿ, ನಕಲಿ ಗುಟ್ಕಾ ಮತ್ತು ತಂಬಾಕು ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಯಿತು

ಪ್ರಜಾವಾಣಿ ವಾರ್ತೆ

ಮುಧೋಳ: ನಕಲಿ ಗುಟ್ಕಾ ಮತ್ತು ತಂಬಾಕು ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ರಾಜ್ಯ ಹಾಗೂ ಹೊರ ರಾಜ್ಯಗಳ ಒಂಬತ್ತು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ದೇವದುರ್ಗದ ಮಹಮ್ಮದ್ ವಶೀಂ, ಹೈದರಾಬಾದ್‌ನ ಮುನೀರ್, ಹಿಮಾಯತ, ದೆಹಲಿಯ ಮಹಮ್ಮದ್ ಅಲಿ, ನಿಪ್ಪಾಣಿಯ ವಿಕಾಸ ಚವಾಣ್, ಸಂತೋಷ ಬಳ್ಳೊಳ್ಳೆ, ಬೆಳಗಾವಿಯ ಜಹೀರ್ ಅಬ್ಬಾಸ್, ನದೀಮ್ ಮತ್ತು ಇಕ್ಬಾಲ್ ಬಂಧಿತರು. ನಕಲಿ ವಸ್ತುಗಳು, ಪ್ಲಾಸ್ಟಿಕ್‌ಸ್ಯಾಶೆ, ಯಂತ್ರಗಳು ಸೇರಿ ₹30 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳು ನಕಲಿ ಆರ್‌ಎಂಡಿ ಪಾನ್ ಮಸಾಲಾ ಮತ್ತು ಎಂ ಗೋಲ್ಡ್ ಸುಗಂಧಿತ ತಂಬಾಕನ್ನು ಸಿದ್ಧಪಡಿಸಿ ಮಾರುತ್ತಿದ್ದು, ಆರ್ಥಿಕವಾಗಿ ನಷ್ಟವಾಗುತ್ತಿರುವ ಬಗ್ಗೆ ತಂಬಾಕು ಸಂಸ್ಥೆಯವರು ಮುಧೋಳ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅದರ ತನಿಖೆ ಕೈಗೊಂಡು ದೆಹಲಿ ಸೇರಿ ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಸಿಪಿಐ ಆರ್.ಆರ್.ಪಾಟೀಲ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ತಂಡದಲ್ಲಿ ಪಿಎಸ್‌ಐಗಳಾದ ಅಜಿತಕುಮಾರ ಹೊಸಮನಿ, ರಮೇಶ ಪಾಟೀಲ, ರಾಕೇಶ ಬಗಲಿ ಪೊಲೀಸ್ ಸಿಬ್ಬಂದಿ ಆರ್.ಬಿ.ಕಟಗೇರಿ, ಬೀರಪ್ಪ ಕುರಿ, ಹನಮಂತ ಮಾದರ, ಮಾರುತಿ ದಳವಾಯಿ, ದಾದಾಪೀರ್ ಅತ್ರಾವತ, ಎಚ್.ವೈ. ಕೋಳಿ, ಎನ್.ವೈ. ಐದಮನಿ ಇದ್ದರು.

20ರಿಂದ ಬೆಂಗಳೂರು–ಮದುರೈ ವಂದೇ ಭಾರತ್ ರೈಲು

ನವದೆಹಲಿ: ಇನ್ನೆರಡು ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 20ರಂದು ಚಾಲನೆ ನೀಡಲಿದ್ದಾರೆ. ಈ ಎರಡು ರೈಲುಗಳು ಮದುರೈ– ಬೆಂಗಳೂರು ಮತ್ತು ಚೆನ್ನೈ– ನಾಗರ್‌ಕೋಯಿಲ್ ಮಾರ್ಗವಾಗಿ ಸಂಚರಿಸಲಿವೆ. ಚೆನ್ನೈ ರೈಲು ನಿಲ್ದಾಣದಲ್ಲಿ ಪ್ರಧಾನಿಯವರು ಈ ರೈಲುಗಳಿಗೆ ಚಾಲನೆ ನೀಡಿ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈಗಾಗಲೇ 24 ರಾಜ್ಯಗಳು ಮತ್ತು 256 ಜಿಲ್ಲೆಗಳಲ್ಲಿ 50ಕ್ಕೂ ಹೆಚ್ಚು ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ.

4.5 ಕೆ.ಜಿ. ಗಡ್ಡೆ ಹೊರತೆಗೆದ ವೈದ್ಯರು

ಕೊಪ್ಪಳ: ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಅಧೀನದಲ್ಲಿರುವ ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, 45 ವರ್ಷದ ಮಹಿಳೆಯೊಬ್ಬರ ಗರ್ಭಾಶಯದಲ್ಲಿದ್ದ ನಾಲ್ಕೂವರೆ ಕೆ.ಜಿ. ತೂಕದ ಗಡ್ಡೆಯನ್ನು ಹೊರತೆಗೆಯಲಾಗಿದೆ.

ತಾಲ್ಲೂಕಿನ ಬಿಸರಳ್ಳಿ ಗ್ರಾಮದ ಮಹಿಳೆಯೊಬ್ಬರು ಹೊಟ್ಟೆನೋವಿನಿಂದ ಬಳಲುತ್ತಿದ್ದರು. ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥ ಡಾ.ಬಿ.ಎಚ್. ನಾರಾಯಣಿ ಹಲವು ಪರೀಕ್ಷೆಗಳನ್ನು ನಡೆಸಿದಾಗ ಮಹಿಳೆಯ ಗರ್ಭಾಶಯದಲ್ಲಿ ದೊಡ್ಡ ಗಡ್ಡೆ ಇರುವುದು ಗೊತ್ತಾಗಿದೆ. ನಾರಾಯಣಿ ಮತ್ತು ಅವರ ತಂಡದ ಸದಸ್ಯರಾದ ಡಾ.ಧನಲಕ್ಷ್ಮೀ ಕೆ.ಆರ್, ಡಾ.ಸೀಮಾ ಬಿ.ಎನ್ ಹಾಗೂ ಡಾ.ರಾಜೇಶ ಬಿ.ಎನ್. ಸತತ ಮೂರು ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ಮಾಡಿ ಗಡ್ಡೆ ಹೊರ ತೆಗೆದಿದ್ದಾರೆ.

ನಿಧನ ವಾರ್ತೆ

ಇಸ್ರೊ ವಿಜ್ಞಾನಿ ಶ್ರೀನಿವಾಸ ಹೆಗಡೆ



ಬೆಂಗಳೂರು: ಇಸ್ರೊದ ನಿವೃತ್ತ ವಿಜ್ಞಾನಿ, ಚಂದ್ರಯಾನ–1ರ ಯೋಜನಾ ನಿರ್ದೇಶಕರಾಗಿದ್ದ ಶ್ರೀನಿವಾಸ ಹೆಗಡೆ (71) ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಉಡುಪಿ ಜಿಲ್ಲೆ ಕಾರ್ಕಳ ಮೂಲದ ಹೆಗಡೆ ಅವರು 1978ರಲ್ಲಿ ಇಸ್ರೊವನ್ನು ಸೇರಿ 2014ರವರೆಗೆ ಸೇವೆ ಸಲ್ಲಿಸಿದರು. ಹಲವು ಬಾಹ್ಯಾಕಾಶ ಯೋಜನೆಗಳಲ್ಲಿ ಅವರು ಭಾಗಿಯಾಗಿದ್ದರು. ಯು.ಆರ್.ಉಪಗ್ರಹ ಕೇಂದ್ರದಲ್ಲಿ ತಮ್ಮ ವೃತ್ತಿ ಆರಂಭಿಸಿದರು. ಹಲವು ಸಂಪರ್ಕ ಉಪಗ್ರಹಗಳ ಉಡಾವಣೆಯಲ್ಲಿ ಕಾರ್ಯ ನಿರ್ವಹಿಸಿದ್ದರು.

ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಗುರುವಾರ ಹೃದಯಾಘಾತಕ್ಕೆ ಒಳಗಾದರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಶುಕ್ರವಾರ ಮಧ್ಯಾಹ್ನ ಅವರು ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗರಾಜ್



ಬೆಂಗಳೂರು: ನಗರದ ದೇವಯ್ಯ ಪಾರ್ಕ್‌ನ ನಾಗಪ್ಪ ಬ್ಲಾಕ್ ವ್ಯಾಪ್ತಿಯ ಪತ್ರಿಕಾ ವಿತರಕ ನಾಗರಾಜ್ (49) ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ತಾಯಿ, ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ನಗರದ ಹರಿಶ್ಚಂದ್ರ ಘಾಟ್‌ನ ಚಿತಾಗಾರದಲ್ಲಿ ಶನಿವಾರ ಮೃತರ ಅಂತ್ಯಕ್ರಿಯೆ ನಡೆಯಲಿದೆ.

ಶಾಸಕ, ಸಂಸದರಾಗಲು ಯಾವುದೇ ವಿಳಂಬ ಇಲ್ಲ, ಕಾರ್ಪೊರೇಟರ್‌ಗಳಿಗೇಕೆ ತಡೆ: ಮಾಜಿ ಮೇಯರ್‌ಗಳ ಪ್ರಶ್ನೆ

ಪಾಲಿಕೆ ಚುನಾವಣೆ: ಯಾಕೀ ತಾತ್ಸಾರ?

53 ಒಟ್ಟು ಮೇಯರ್ (1949ರಿಂದ 2020)

33 1949ರಿಂದ 1995 (ಬೆಂಗಳೂರು ನಗರಸಭೆ-ನಗರ ಪಾಲಿಕೆ)

10 1996ರಿಂದ 2006 (ಬೆಂಗಳೂರು ಮಹಾನಗರ ಪಾಲಿಕೆ)

10 2010ರಿಂದ 2020 (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

● ಆರ್. ಮಂಜುನಾಥ್

ಬೆಂಗಳೂರು: ಪಾಲಿಕೆಯನ್ನು ವಿಸ್ತಾರದರೂ, ಹೇಗಾದರೂ ವಿಭಜನೆ ಮಾಡಿಕೊಳ್ಳಿ, ಆದರೆ ಅದಕ್ಕೆ ಮುನ್ನ, ಸಂವಿಧಾನದ ಆಶಯವನ್ನು ಉಳಿಸಿಕೊಳ್ಳಲು ಚುನಾವಣೆ ಮಾಡಿ. ಶಾಸಕರಾಗಲು, ಸಂಸದರಾಗಲು ಯಾವುದೇ ವಿಳಂಬ ಮಾಡುವುದಿಲ್ಲ, ಕಾಲಕ್ಕೆ ತಕ್ಕಂತೆ ಚುನಾವಣೆ ಮಾಡಿಕೊಳ್ಳುತ್ತೀರಿ. ಆದರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮಾತ್ರ ತಾತ್ಸಾರ ಏಕೆ...

ಪಾಲಿಕೆಯ ಮಾಜಿ ಮೇಯರ್‌ಗಳ ಅಭಿಪ್ರಾಯ, ಪ್ರಶ್ನೆಗಳಿವು.

'ಸಂವಿಧಾನದಂತೆ ವಿಧಾನಸಭೆ, ಲೋಕಸಭೆಗೆ ಚುನಾವಣೆಗಳು ಕಾಲಕಾಲಕ್ಕೆ ನಡೆಯುತ್ತವೆ. ಇದರಿಂದ ಆಯ್ಕೆಯಾಗುವ ಜನಪ್ರತಿನಿಧಿಗಳು, ಅದೇ ಸಂವಿಧಾನದಲ್ಲಿ ಹೇಳಿರುವಂತೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಮುಂದೂಡುತ್ತಲೇ ಬಂದಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾಡಲಾಗುತ್ತಿರುವ ಅಪಮಾನ' ಎಂದು ಹೇಳಿದ್ದಾರೆ.

'ಬೃಹತ್ ಬೆಂಗಳೂರನ್ನು ಆಡಳಿತಾತ್ಮಕವಾಗಿ ವಿಭಾಗ ಮಾಡಿದರೆ ಒಳ್ಳೆಯದು, ನಾಲ್ಕೈದು ಪಾಲಿಕೆ ಎಂದು ಪ್ರತ್ಯೇಕಗೊಳಿಸಿದರೆ ಪರಸ್ಪರ ಸಮನ್ವಯ ಸಾಧಿಸಲು ಸಾಧ್ಯವಾಗುವುದಿಲ್ಲ. ಒಂದು ಬೃಹತ್ ರಸ್ತೆ ಮೂರು ಪಾಲಿಕೆಗಳ ನಡುವೆ ಸಾಗಿದರೆ, ಅದರ ಗುಣಮಟ್ಟ ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಇದೊಂದು ಉದಾಹರಣೆ ಅಷ್ಟೇ. ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ತೊಂದರೆಯಾಗುತ್ತದೆ. ಇದನ್ನು ಒಟ್ಟುಗೂಡಿಸಿ, ಒಂದು ವ್ಯವಸ್ಥೆ ರೂಪಿಸಿದರೆ ಉತ್ತಮವಾಗಬಹುದು. ಆದರೆ, ಇದೇ ನೆಪವೊಡ್ಡಿ ಚುನಾವಣೆಯನ್ನು ಮುಂದೂಡುವುದು ಸರಿಯಲ್ಲ' ಎಂದು ಮಾಜಿ ಮೇಯರ್‌ಗಳು ಅಭಿಪ್ರಾಯಪಟ್ಟಿದ್ದಾರೆ.

'ಈ ಎಲ್ಲ ನೆಪ ನೀತಿ, ಏನೇನೋ ಕಾನೂನು ತರಲು ಯೋಜಿಸುವ ಸರ್ಕಾರ, ನಗರಕ್ಕೆ ಮೇಯರ್ ನೇರ ಆಯ್ಕೆ ಅಥವಾ ಒಂದಕ್ಕಿಂತ ಹೆಚ್ಚು ವರ್ಷದ ಅಧಿಕಾರ ನೀಡುವ ಬಗ್ಗೆ ಮಾತ್ರ ಆಲೋಚಿಸುತ್ತಿಲ್ಲ. ನಗರದ ಪ್ರಥಮ ಪ್ರಜೆ ಬಗ್ಗೆ ಕಾಳಜಿಯೇ ಇಲ್ಲ' ಎಂದು ದೂರಿದರು.

'ಒಂದು ಕಸದ ಗುಡ್ಡೆ ಎತ್ತಲೂ ಸಾಧ್ಯವಿಲ್ಲ. ಅಧಿಕಾರಿಗಳು ಮಾತೇ ಕೇಳುವುದಿಲ್ಲ. ಬಸವನಗುಡಿಯಲ್ಲಿ ರಾಜಕಾಲುವೆ ಕೆಲಸವನ್ನು ಸರಿಯಾಗಿ ಮಾಡದ ಕೆಲವು ಮನೆಗಳಿಗೆ ನೀರು ನುಗ್ಗಿ, ಅವರು ತೇಲಾಡುವಂತಾಗಿತ್ತು, ಅಧಿಕಾರಿಗಳಿಗೆ ಜನರ ಕಾಳಜಿ ಇಲ್ಲ, ಯಾವ ನಿಯಮಗಳನ್ನೂ ಪಾಲಿಸುತ್ತಿಲ್ಲ' ಎಂದು ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಹೇಳಿದರು.

ವಾರ್ಡ್ ಪುನರ್‌ವಿಂಗಡಣೆ ಸಂವಿಧಾನ ಬಾಹಿರ: 'ಸಂವಿಧಾನದ ಪ್ರಕಾರ, ಕಳೆದ ಜನಗಣತಿ ಆಧಾರದಲ್ಲಿ ವಾರ್ಡ್‌ಗಳ ಪುನರ್‌ವಿಂಗಡಣೆ ಮಾಡಬೇಕು. ಆದರೆ, ಈಗ 225 ವಾರ್ಡ್‌ಗಳನ್ನು 2011ರ ಜನಗಣತಿಯಂತೆ ಮಾಡದೆ, 'ಪ್ರೊಜೆಕ್ಟೆಡ್ ಸೆನ್ಸಸ್' ಪ್ರಕಾರ ಮಾಡಿದ್ದಾರೆ. ಇದು ಸಂವಿಧಾನ ಬಾಹಿರವಾಗಿದೆ' ಎಂದು ಮಾಜಿ ಮೇಯರ್ ಪಿ.ಆರ್. ರಮೇಶ್ ಮಾಹಿತಿ ನೀಡಿದರು.

'ಜನಗಣತಿ ಮಾಡದೆ ಇರುವುದು ಕೇಂದ್ರ ಸರ್ಕಾರದ ವೈಫಲ್ಯ. ಕಳೆದ ಬಾರಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಇದನ್ನು ಸರಿಪಡಿಸಬೇಕಾಗಿತ್ತು. ಒಟ್ಟಿನಲ್ಲಿ ಬೆಂಗಳೂರನ್ನು ಲಂಗುಲಗಾಮಿಲ್ಲದೆ ಬೆಳೆಸಿಕೊಂಡು ಹೋಗುತ್ತಿದ್ದಾರೆ' ಎಂದರು.

ಮಾಜಿ ಮೇಯರ್‌ಗಳು ಏನನ್ನುತ್ತಾರೆ?

'ರಾಜೀವ್‌ಗಾಂಧಿ ಆಶಯಕ್ಕೆ ಧಕ್ಕೆ ಬೇಡ'

ರಾಜೀವ್‌ಗಾಂಧಿಯವರು ಸ್ಥಳೀಯ ಸಂಸ್ಥೆಗಳು ಜನಪ್ರತಿನಿಧಿಗಳಿಲ್ಲದೆ ಒಂದೇ ದಿನವೂ ಖಾಲಿ ಇರಬಾರದು ಎಂದು ಸಂವಿಧಾನದಕ್ಕೆ ತಿದ್ದುಪಡಿ ಮಾಡಿ, ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ತಂದರು. ಅವರ ಆಶಯಕ್ಕೆ ಧಕ್ಕೆಯಾಗದಂತೆ ರಾಜ್ಯ ಸರ್ಕಾರಗಳು ನಡೆದುಕೊಳ್ಳಬೇಕು. ಯಾವುದೇ ರೀತಿಯ ಬದಲಾವಣೆ ಮಾಡಿಕೊಂಡರೂ ಚುನಾವಣೆ ನಡೆಸಲೇಬೇಕು, ಇನ್ನಷ್ಟು ವಿಳಂಬ ಮಾಡಬಾರದು.

ಎಂ. ರಾಮಚಂದ್ರಪ್ಪ

'ಅಧಿಕಾರ ನೀಡುವ ಮನಸ್ಸಿಲ್ಲ'

ಶಾಶ್ವತವಾಗಿ ನಾವೇ ಅಧಿಕಾರದಲ್ಲಿ ಇರುತ್ತೇವೆ ಎಂದು ಶಾಸಕರು ಹಾಗೂ ಸಚಿವರು ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡುತ್ತಿಲ್ಲ. ಕಾರ್ಪೊರೇಟರ್‌ಗಳಿದ್ದರೆ ಸ್ಥಳೀಯ ಸಮಸ್ಯೆಗಳು ಬೇಗ ನಿವಾರಣೆಯಾಗುತ್ತವೆ. ಒಬ್ಬರ ಮೇಲೆ ಇನ್ನೊಬ್ಬರು ಪರಸ್ಪರ ದೂರುತ್ತಾ ಚುನಾವಣೆ ಮುಂದೂಡುತ್ತಿದ್ದಾರೆ. ಇನ್ನು, ಯಾವುದೇ ರೀತಿಯಲ್ಲೂ ಬಿಬಿಎಂಪಿಯನ್ನು ವಿಭಜನೆ ಮಾಡಬಾರದು. ಬೆಂಗಳೂರಿನ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕು

ಎಸ್.ಕೆ. ನಟರಾಜ್

'ಚುನಾವಣೆ ನಡೆದರಷ್ಟೇ ಪ್ರಜಾಪ್ರಭುತ್ವ'

ಪ್ರಜಾಪ್ರಭುತ್ವ ಇರಬೇಕೆಂದರೆ ಚುನಾವಣೆ ನಡೆಯಲೇಬೇಕು. ಚುನಾವಣೆ ನಡೆಸದೇ ಹೋದರೆ ಪ್ರಜಾಪ್ರಭುತ್ವ ಎಲ್ಲಿರುತ್ತದೆ? ಅಧಿಕಾರಿಗಳೇ ಯಾವತ್ತೂ ಅಧಿಕಾರವನ್ನು ನಡೆಸಬಾರದು. ಮಹಾತ್ಮ ಗಾಂಧಿ, ನೆಹರೂ ಅವರ ಕಾಳಜಿಯೇ ಅದು. ಹಾಗಾಗಿ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಕಾಲಕ್ಕೆ ತಕ್ಕಂತೆ ನಡೆಸಲೇಬೇಕು

ಕೆ. ಚಂದ್ರಶೇಖರ್

'ಎಲ್ಲರೂ ಮುಂದೂಡುತ್ತಲೇ ಇದ್ದಾರೆ'



ಬಿಬಿಎಂಪಿಗೆ ಕಾಲಕಾಲಕ್ಕೆ ಚುನಾವಣೆ ಆಗಲೇಬೇಕು. ಅವಧಿ ಮುಗಿಯುವ ಆರು ತಿಂಗಳ ಮುನ್ನವೇ ಎಲ್ಲ ತಯಾರಿ ಆರಂಭವಾಗಬೇಕು ಎಂದು ರೂಲ್ ಬುಕ್‌ನಲ್ಲೇ ಇದೆ. ಆದರೆ, ಎಲ್ಲ ಸರ್ಕಾರಗಳೂ ಅದನ್ನು ಪಾಲಿಸದೆ, ಚುನಾವಣೆಯನ್ನು ಮುಂದೂಡುತ್ತಲೇ ಬಂದಿವೆ. ಬೇಕೆಂದೇ ಯಾವುದೋ ಕಾರಣ ನೀಡಿ ನ್ಯಾಯಾಲಯಕ್ಕೆ ಹೋಗುತ್ತಾರೆ. ಇನ್ನು ನಾಲ್ಕೈದು ಬೆಂಗಳೂರು ಪಾಲಿಕೆ ಮಾಡುತ್ತೇವೆ ಎಂಬುದು ಚುನಾವಣೆ ಮುಂದೂಡುವ ತಂತ್ರವಷ್ಟೇ.

ಕಟ್ಟೆ ಸತ್ಯನಾರಾಯಣ

'ದಾರಿ ತಪ್ಪಿಸುತ್ತಿರುವ ಅಧಿಕಾರಿಗಳು'

ಬಿಬಿಎಂಪಿಯಲ್ಲಿ ಅಧಿಕಾರಿಗಳ ದರ್ಪ ಹೆಚ್ಚಾಗಿದೆ. ಜನಪ್ರತಿನಿಧಿಗಳು, ಸಚಿವರನ್ನೂ ದಾರಿ ತಪ್ಪಿಸುತ್ತಿದ್ದಾರೆ. ಮುಖ್ಯಮಂತ್ರಿ ಆದಿಯಾಗಿ ಯಾರಿಗೂ ನಗರದ ಆಡಳಿತದ ಮೇಲೆ ನಿಯಂತ್ರಣವಿಲ್ಲ. ಹಿಂದಿನ ತಪ್ಪುಗಳಿಂದ ನಗರದ ಜನತೆಗೆ ಅನುಕೂಲವಾಗುವ ಯಾವ ಕೆಲಸಗಳೂ ನಡೆಯುತ್ತಿಲ್ಲ. ಬಿಬಿಎಂಪಿಗೆ ಮೊದಲು ಚುನಾವಣೆ ಮಾಡಬೇಕು. ನಂತರ ಯಾವುದೇ ರೀತಿಯ ವಿಭಜನೆ ಮಾಡಬಹುದು

ಪಿ.ಆರ್. ರಮೇಶ್

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

ಸುದ್ದಿ 2 ನಿಮಿಷ

'ಬಿಬಿಎಂಪಿ ವಿಭಜನೆ ಬೇಡ'

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಪಾಲಿಕೆಗಳನ್ನಾಗಿ ವಿಭಜಿಸುವ ಚಿಂತನೆಯನ್ನು ರಾಜ್ಯ ಸರ್ಕಾರ ಕೈಬಿಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಒತ್ತಾಯಿಸಿದೆ.

'ಬೆಂಗಳೂರು ದೊಡ್ಡದಾಗಿ ಬೆಳೆದಿರುವ, ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಕಾರಣಗಳಿಗಾಗಿ ವಿಭಜಿಸದೇ ಬೇರೆ ದಾರಿ ಇಲ್ಲ ಎಂಬ ಅಭಿಪ್ರಾಯಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಸರ್ಕಾರ ಈ ಬಗ್ಗೆ ಚಿಂತನೆ ನಡೆಸುತ್ತಿರಬಹುದು. ಆದರೆ ಬೆಂಗಳೂರು ನಗರದ ಆಡಳಿತ ನಿರ್ವಹಣೆ ದೃಷ್ಟಿಯಿಂದ ವಿಭಜನೆಯೊಂದೇ ಪರಿಹಾರವಲ್ಲ. ಆಡಳಿತ ವಿಕೇಂದ್ರೀಕರಣಕ್ಕೆ ಬೇರೆ ದಾರಿಗಳೂ ಇವೆ' ಎಂದು ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ ಹೇಳಿದ್ದಾರೆ.

'ಬೆಂಗಳೂರು ಮಹಾನಗರ ಇತ್ತೀಚಿನ ದಿನಗಳಲ್ಲಿ ವಲಸಿಗರ ಸಂತೆಯಾಗಿದೆ. ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಚಹರೆಯನ್ನೇ ಈ ವಲಸಿಗರು ಬದಲಾಯಿಸುತ್ತಿದ್ದಾರೆ. ಕನ್ನಡಿಗರೇ ಅತಂತ್ರ ಸ್ಥಿತಿಯಲ್ಲಿ ಬದುಕುವಂಥ ಸಂದರ್ಭವನ್ನು ಈ ವಲಸಿಗರು ಸೃಷ್ಟಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪಾಲಿಕೆಯನ್ನು ವಿಭಜಿಸಿದರೆ ನಗರದ ಸ್ವಾಸ್ಥ್ಯ, ಸಾಮರಸ್ಯಕ್ಕೆ ಧಕ್ಕೆ ತಂದು ಸಂಘರ್ಷ ಸೃಷ್ಟಿಯಾದರೆ ಆಶ್ಚರ್ಯಪಡಬೇಕಾಗಿಲ್ಲ. ಹೆಚ್ಚು ಪಾಲಿಕೆಗಳಿಂದ ನಿಯಂತ್ರಣ ಕಳೆದುಕೊಂಡರೆ ಕನ್ನಡಿಗರು ಎಲ್ಲಿಗೆ ಹೋಗಬೇಕು. ಬೆಳಗಾವಿ ಮಹಾನಗರಪಾಲಿಕೆಯ ಇತಿಹಾಸ ಸರ್ಕಾರಕ್ಕೆ ಗೊತ್ತಿಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಪಾಲಿಕೆ ವಿಭಜನೆಯು ನಿಶ್ಚಿತವಾಗಿ ಕನ್ನಡಿಗರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ಈ ಹಿಂದೆಯೂ ಪಾಲಿಕೆ ವಿಭಜನೆಯ ಮಾತು ಕೇಳಿ ಬಂದಾಗ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ ನಡೆಸಿತ್ತು. ಆಡಳಿತ ಸುಧಾರಣೆಯ ನಿಟ್ಟಿನಲ್ಲಿ ಸರ್ಕಾರದ ಕಾಳಜಿಯನ್ನು ನಾವು ಪ್ರಶ್ನಿಸುತ್ತಿಲ್ಲ. ಆದರೆ ಇದು ಕನ್ನಡಿಗರ ಪಾಲಿಗೆ ಸಮಸ್ಯಾತ್ಮಕವಾಗುವ ಹಿನ್ನೆಲೆಯಲ್ಲಿ ನಮ್ಮ ತಾತ್ತ್ವಿಕ ವಿರೋಧವಿದೆ' ಎಂದು ಹೇಳಿದರು.

ಅಕಾಡೆಮಿ, ನಿಗಮಗಳ ಅಧ್ಯಕ್ಷರ ಜತೆ ಡಿಕೆಶಿ ಸಭೆ

ಬೆಂಗಳೂರು: ವಿವಿಧ ಸಾಂಸ್ಕೃತಿಕ ಅಕಾಡೆಮಿಗಳು ಹಾಗೂ ನಿಗಮ ಮಂಡಳಿಗಳ ಅಧ್ಯಕ್ಷರ ಜತೆಗೆ ಕೆಪಿಸಿಸಿ (ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ) ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಈ ಹುದ್ದೆಗಳು ರಾಜಕಾರಣಕ್ಕೆ ಮೆಟ್ಟಿಲುಗಳಾಗಿದ್ದು, ಕೈ ಮತ್ತು ಬಾಯಿ ಶುದ್ಧವಾಗಿರಬೇಕು' ಎಂದು ಕಿವಿಮಾತು ಹೇಳಿದರು.

ಚುನಾವಣೆ ನೀತಿ ಸಂಹಿತೆ ಕೊನೆಗೊಂಡಿದ್ದರಿಂದ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಗುರುವಾರ ಅಧಿಕಾರ ಸ್ವೀಕರಿಸಿದ್ದರು. ಇವರನ್ನು ಒಳಗೊಂಡಂತೆ ನಿಗಮ ಮಂಡಳಿಗಳ ಅಧ್ಯಕ್ಷರ ಜತೆಗೆ ಪ್ರಥಮ ಸಭೆ ನಡೆಸಿದ ಅವರು, 'ಜನರ ಭಾವನೆಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಅಧ್ಯಕ್ಷ ಹುದ್ದೆಯು ಗೌರವಾನ್ವಿತ ಸ್ಥಾನವಾಗಿದ್ದು, ಹಗರಣಗಳಿಂದ ಅಂತರ ಕಾಯ್ದುಕೊಳ್ಳಬೇಕು. ಈ ಹಿಂದೆ ಹಗರಣಗಳು ನಡೆದಿದ್ದರೆ ಅದನ್ನು ಗಮನಕ್ಕೆ ತರಬೇಕು' ಎಂದು ತಿಳಿಸಿದರು.

'ವಿಧಾನಸಭೆ ಚುನಾವಣೆಯಲ್ಲಿ 87 ಕ್ಷೇತ್ರದಲ್ಲಿ ಸೋತಿದ್ದೇವೆ. ಈ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಉತ್ತಮವಾಗಿ ಕೆಲಸ ಮಾಡಬೇಕು. ವಿರೋಧಿಗಳು ನಮ್ಮನ್ನು ಸಿಲುಕಿಸಲು ಪ್ರಯತ್ನ ಮಾಡುತ್ತಾ ಇರುತ್ತಾರೆ. ಆದ್ದರಿಂದ ಬುದ್ಧಿವಂತಿಕೆಯಿಂದ ಕೆಲಸ ಮಾಡಬೇಕು' ಎಂದರು.

ಸಾಹಿತ್ಯ, ನಾಟಕ ಸೇರಿ ವಿವಿಧ ಅಕಾಡೆಮಿಗಳ ಹಾಗೂ ನಿಗಮ ಮಂಡಳಿಗಳ ಅಧ್ಯಕ್ಷರು ಉತ್ತಮವಾಗಿ ಕಾರ್ಯನಿರ್ವಹಿಸುವ ಬಗ್ಗೆ ಭರವಸೆ ನೀಡಿದರು.

ವಾಲ್ಮೀಕಿ ನಿಗಮ: ಮದ್ಯ, ಚಿನ್ನದ ಅಂಗಡಿಗಳಿಗೆ ಹಣ ವರ್ಗಾವಣೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭನ್ ಅವರ ಮನೆಯಿಂದ ₹3.62 ಕೋಟಿಯನ್ನು ಎಸ್‌ಐಟಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ನಿಗಮದ ಖಾತೆಯಿಂದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೆ.ಜಿ. ಪದ್ಮನಾಭನ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಮೇರೆಗೆ ₹3.62 ಕೋಟಿ ಹಣ ಜಪ್ತಿ ಮಾಡಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಇದುವರೆಗೂ ಒಟ್ಟು ₹11.83 ಕೋಟಿ ನಗದು ಹಣ ಜಪ್ತಿ ಆಗಿದೆ' ಎಂದು ಮೂಲಗಳು ತಿಳಿಸಿವೆ.

'ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರೋಪದಡಿ ಹೈದರಾಬಾದ್‌ನಲ್ಲಿ ಸತ್ಯನಾರಾಯಣ ವರ್ಮಾ ಮತ್ತು ಚಂದ್ರಮೋಹನ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಈ ವೇಳೆ ಆರೋಪಿಗಳು ತೆರೆದಿದ್ದ 18 ನಕಲಿ ಖಾತೆಗಳಿಗೆ ವರ್ಗಾವಣೆಯಾಗಿದ್ದ ನಿಗಮದ ಹಣ ಬೆಂಗಳೂರು ಮತ್ತು ಹೈದರಾಬಾದ್‌ನ ಮದ್ಯದ ಅಂಗಡಿಗಳು, ಚಿನ್ನಾಭರಣ ಮಾರಾಟ ಮಳಿಗೆಗಳು ಹಾಗೂ ಸಣ್ಣ ಕಂಪನಿಗಳು ಸೇರಿ ನೂರಕ್ಕೂ ಅಧಿಕ ಖಾತೆಗಳಿಗೆ ವರ್ಗಾಯಿಸಲಾಗಿತ್ತು. ನಂತರ ಆರೋಪಿಗಳು ನಗದು ರೂಪದಲ್ಲಿ ಹಣ ಪಡೆದುಕೊಂಡಿದ್ದರು. ಈ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

ಬೇರೆಡೆ ಇಟ್ಟ ಹಣ ವಾಪಸ್‌ಗೆ ಗಡುವು

ಪ್ರವಾಸೋದ್ಯಮ ಇಲಾಖಾ ಕಾರ್ಯದರ್ಶಿಗೆ ಸಚಿವ ಎಚ್‌.ಕೆ. ಪಾಟೀಲ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಇಲಾಖೆ ವ್ಯಾಪ್ತಿಯಲ್ಲಿರುವ ನಿಗಮ ಮತ್ತು ಮಂಡಳಿಗಳು ಹಣಕಾಸು ಇಲಾಖೆ ಮಾರ್ಗಸೂಚಿ ಉಲ್ಲಂಘಿಸಿ ಮಾರ್ಗಪಲ್ಲಟ ಮಾಡಿರಬಹುದಾದ ಸರ್ಕಾರದ ಹಣವನ್ನು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಸೂಚನೆ ನೀಡಿದ್ದಾರೆ.

ಬೇರೆ ಬೇರೆ ಖಾತೆಗಳಲ್ಲಿರುವ ಹಣವನ್ನು ಮುಖ್ಯವಾಹಿನಿಗೆ 48 ಗಂಟೆಗಳಲ್ಲಿ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಕುರಿತು ವಿವರವಾದ ವರದಿಯನ್ನು 72 ಗಂಟೆಗಳಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಒದಗಿಸಬೇಕು ಎಂದು ಅವರು ಪ್ರವಾಸೋದ್ಯಮ ಇಲಾಖೆ ಪ್ರಧಾನಕಾರ್ಯದರ್ಶಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ರಾಜ್ಯ ಸರ್ಕಾರಿ ಸ್ವಾಮ್ಯದ ನಿಗಮ ಮತ್ತು ಮಂಡಳಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹಣಕಾಸು ಅಶಿಸ್ತಿನ ವರದಿಗಳ ಹಿನ್ನೆಲೆಯಲ್ಲಿ ನಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮ–ಮಂಡಳಿಗಳು, ಅಂಗ–ಸಂಸ್ಥೆಗಳಲ್ಲಿ ಹಣಕಾಸು ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಲು ಮಹತ್ವದ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ' ಎಂದಿದ್ದಾರೆ.

ಪತ್ರದ ಮುಖ್ಯಾಂಶಗಳು

- ಇಲಾಖೆಯ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸುವ ಸಂದರ್ಭದಲ್ಲಿ ಸರ್ಕಾರದ ಮಾನದಂಡಗಳನ್ನು (ಆರ್ಥಿಕ ಇಲಾಖೆ ಮಾನದಂಡಗಳು) ಮಾತ್ರ ಪಾಲಿಸುವುದು. ಠೇವಣಿ ಇರಿಸುವ ಸಂದರ್ಭದಲ್ಲಿ ಅಂತಹ ಉದ್ದೇಶಕ್ಕೆ ಲಭ್ಯವಿರುವ ಹಣಕಾಸಿನ ಪೂರ್ಣ ಮಾಹಿತಿಯನ್ನು ಮತ್ತು ಅದಕ್ಕೆ ಬೇಕಾದ ಅವಶ್ಯಕತೆಗಳನ್ನು ಕಡತದಲ್ಲಿ ದಾಖಲಿಸಬೇಕು.
- ಅಗತ್ಯವಿಲ್ಲದ ಮತ್ತು ನಿಯಮ ಬಾಹಿರವಾದ ಯಾವುದೇ ಠೇವಣಿಯ ಮೇಲೆ ಓವರ್ ಡ್ರಾಫ್ಟ್ ಸೌಲಭ್ಯ ಪಡೆಯುವಂತಿಲ್ಲ.
- ಹಣಕಾಸಿನ ವರ್ಗಾವಣೆ ಮತ್ತು ವ್ಯವಹಾರಗಳನ್ನು ಕಾಯಂ ಸಿಬ್ಬಂದಿ ಮಾತ್ರ ನಿರ್ವಹಿಸಬೇಕು.
- ಎಲ್ಲ ಹಣಕಾಸಿನ ಸ್ವೀಕೃತಿಗಳನ್ನು ಕೇವಲ ಡಿಜಿಟಲ್ ಅಥವಾ ಆನ್‌ಲೈನ್ ಪಾವತಿ ಆಧಾರದ ತಂತ್ರಜ್ಞಾನ ಬಳಕೆ ಮಾಡುವುದು.
- ಪ್ರತಿಯೊಂದು ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಒಂದೇ ಖಾತೆಗೆ ವರ್ಗಾಯಿಸಿ ಕಾಯಂ ಸಿಬ್ಬಂದಿ ಮೂಲಕ ನಿರ್ವಹಣೆ ಮಾಡಿ ಸೂಕ್ತವಾದ ಹಣಕಾಸು ವರ್ಗಾವಣೆ ದಾಖಲೆಗಳಲ್ಲಿ ಕಾಯ್ದಿರಿಸಬೇಕು.
- ಕಾಲ– ಕಾಲಕ್ಕೆ ನಿಯಮಾನುಸಾರ ಆಂತರಿಕ ಲೆಕ್ಕಪರಿಶೋಧನೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕು. ಲೆಕ್ಕಪರಿಶೋಧನೆ ಸಂದರ್ಭದಲ್ಲಿ ಮಾಡಲಾಗುವ ಟಿಪ್ಪಣಿಗಳ ಕುರಿತು ಕೈಗೊಂಡ ಕ್ರಮಗಳನ್ನು ಕಾಲ ಕಾಲಕ್ಕೆ ಇಲಾಖೆ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಬೇಕು.

ಗಾರೆ ಕೆಲಸದವರಲ್ಲ ಪೊಲೀಸರಿವರು.. ಸದಾ ದಟ್ಟಣೆಯಲ್ಲಿರುವ ಮೈಸೂರು ರಸ್ತೆಯಲ್ಲಿ ಮಳೆಯಿಂದಾಗಿ ರಸ್ತೆ ತುಂಬೆಲ್ಲ ಗುಂಡಿ ಬಿದ್ದಿವೆ. ಇದರಿಂದ ವಾಹನಗಳ ಸರಾಗ ಸಂಚಾರಕ್ಕೆ ತೊಡಕುಂಟಾಗಿತ್ತು. ಮಂದಗತಿ ಸಂಚಾರಕ್ಕೆ ವೇಗ ನೀಡಲು ಬ್ಯಾಟರಾಯನಪುರ ಸಂಚಾರ ಪೊಲೀಸರೇ ದೀಪಾಂಜಲಿ ನಗರದ ಕಿಮ್ಕೋ ಜಂಕ್ಷನ್‌ನಲ್ಲಿ ಶುಕ್ರವಾರ ಗುಂಡಿ ಮುಚ್ಚುವ ಕಾರ್ಯದಲ್ಲಿ ತೊಡಗಿದ್ದರು

ಪ್ರಜಾವಾಣಿ ಚಿತ್ರ: ರಂಜು ಪಿ.

ಚಿಣ್ಣರಿಂದ 'ಹಸಿರು ರಕ್ಷಕ' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ ವರ್ಷ 52 ಸಾವಿರ ಗಿಡಗಳನ್ನು ಶಾಲಾ ಮಕ್ಕಳೇ ನೆಟ್ಟು ಬೆಳೆಸಿದ್ದಾರೆ. ಈ ವರ್ಷ 2 ಲಕ್ಷಕ್ಕೂ ಹೆಚ್ಚು ಗಿಡ ನೆಡುವ 'ಹಸಿರು ರಕ್ಷಕ' ಅಭಿಯಾನ ರೂಪಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಬ್ರ್ಯಾಂಡ್ ಬೆಂಗಳೂರು– ಹಸಿರೀಕರಣ' ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಮಾತನಾಡಿದರು.

'ಗಿಡ ನೆಟ್ಟರೆ ಮರ, ಮರದಿಂದ ಮಳೆ, ಮಳೆ ಬಂದರೆ ನೀರು, ನೀರು ಇದ್ದರೆ ನಾವು, ನೀವು. ಪ್ರಪಂಚದಲ್ಲಿ ನೀರು ಮತ್ತು ಅಧಿಕಾರಕ್ಕೆ ಯುದ್ಧಗಳು ಆಗುತ್ತವೆ ಎಂದು ಅನೇಕ ಜ್ಞಾನಿಗಳು ಹೇಳಿದ್ದಾರೆ. ಇದನ್ನು ಅರಿಯಿರಿ' ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

'ನಗರದ ಉಷ್ಣಾಂಶ 28 ಡಿಗ್ರಿಗಿಂತ ಹೆಚ್ಚಾಗುತ್ತಿರಲಿಲ್ಲ. ಈಗ 36 ಡಿಗ್ರಿ ದಾಟಿದೆ. ಹಸಿರು ಉಳಿಸಲು ಅನೇಕ ಸ್ವಯಂ ಸೇವಾ ಸಂಘಗಳು ಕೆಲಸ ಮಾಡುತ್ತಿವೆ. ಅದಕ್ಕೆ ಸರ್ಕಾರ ಬೆನ್ನೆಲುಬಾಗಿ ನಿಲ್ಲಲಿದೆ. ಬೆಂಗಳೂರಿನ ಹಸಿರು ಸಂರಕ್ಷಣೆಗೆ ವಿವಿಧ ಇಲಾಖೆಗಳ ಅಡಿಯಲ್ಲಿ ₹310 ಕೋಟಿ ಹಾಗೂ 15 ನೇ ಹಣಕಾಸು ಆಯೋಗದ ಅಡಿ ₹100 ಕೋಟಿ ಸೇರಿದಂತೆ ಒಟ್ಟು ₹410 ಕೋಟಿ ಹಣ ಮೀಸಲಿಡಲಾಗಿದೆ' ಎಂದರು.

'ಯಾವುದೇ ಕಾರ್ಯಕ್ರಮ ನಡೆದರೂ ಮಕ್ಕಳಿಂದಲೇ ನಿರ್ವಹಣೆ ಮಾಡಿಸಬೇಕು ಎಂದು ಸೂಚನೆ ನೀಡಿದ್ದೆ. ಆದರೆ ಅಧಿಕಾರಿಗಳು ಅದನ್ನು ಮರೆತಂತಿದೆ. ನಮ್ಮ ಜೊತೆ ವೇದಿಕೆಯಲ್ಲಿ ಮಕ್ಕಳು ಇದ್ದರೆ ಅವರಿಗೂ ನೆನಪು ಇರುತ್ತದೆ' ಎಂದು ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್, ಮಾಜಿ ಶಾಸಕ ಹಸನಬ್ಬ, ಬಿಬಿಎಂಪಿ ಆಡಳಿತಾಧಿಕಾರಿ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

ಕಾವೇರಿ: ತಮಿಳುನಾಡು ಮನವಿ ಒಪ್ಪದ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಜೂನ್ ತಿಂಗಳಲ್ಲಿ 9 ಟಿಎಂಸಿ ಅಡಿ ನೀರನ್ನು ಬಿಡಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂಬ ತಮಿಳುನಾಡು ಸರ್ಕಾರದ ಮನವಿಯನ್ನು ಕಾವೇರಿ ನೀರು ನಿಯಂತ್ರಣ ಸಮಿತಿಯು ಶುಕ್ರವಾರ ಪುರಸ್ಕರಿಸಿಲ್ಲ. ಕುಡಿಯುವ ನೀರು ಹಾಗೂ ಪರಿಸರದ ಹರಿವಿನ ಅವಶ್ಯಕತೆಗಳನ್ನು ಪೂರೈಸಲು ಜೂನ್‌ನಲ್ಲಿ ಆದ್ಯತೆ ನೀಡಬೇಕು ಎಂದು ಸಮಿತಿ ಸೂಚಿಸಿದೆ.

ಸುಪ್ರೀಂ ಕೋರ್ಟ್ 2018ರ ಫೆಬ್ರುವರಿ 16ರಂದು ನೀಡಿರುವ ಆದೇಶದ ಪ್ರಕಾರ, ಪ್ರತಿ ವರ್ಷ ಕರ್ನಾಟಕವು ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರು ಬಿಡಬೇಕಿದೆ.

ಈ ವರ್ಷ ಸಾಮಾನ್ಯ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ. ಹಾಗಾಗಿ, ಕಾವೇರಿ ಜಲಾನಯನ ಪ್ರದೇಶದ ಮೇಲ್ಭಾಗದಲ್ಲಿ ಉತ್ತಮ ಮಳೆಯಾಗುವುದು ನಿಶ್ಚಿತ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಕರ್ನಾಟಕ ಸರ್ಕಾರವು ಜೂನ್ ತಿಂಗಳ ಕಂತಿನ ನೀರನ್ನು ಬಿಡುಗಡೆ ಮಾಡಬೇಕು. ಬಿಳಿಗುಂಡ್ಲುವಿನಲ್ಲಿ ಸಾಮಾನ್ಯ ಹರಿವನ್ನು ಖಚಿತಪಡಿಸಬೇಕು ಎಂದು ತಮಿಳುನಾಡು ಸರ್ಕಾರವು ಸಮಿತಿಯ ಮುಂದೆ ಬೇಡಿಕೆ ಮುಂದಿರಿಸಿತು.

ಕರ್ನಾಟಕ ಸರ್ಕಾರದ ಪ್ರತಿನಿಧಿಗಳು, '2023ರ ಜೂನ್ ನಿಂದ 2024ರ ಜೂನ್ 14ರ ವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆ ಶೇ 70ರಷ್ಟಿದೆ. ಮಳೆಯ ಮುನ್ಸೂಚನೆಗಳ ಆಧಾರದಲ್ಲಿ ಕರ್ನಾಟಕವು ತನ್ನ ಜಲಾಶಯಗಳಿಂದ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಹಿಂದಿನ ನೀರಿನ ವರ್ಷದ ಕ್ಯಾರಿ ಓವರ್ ಸಂಗ್ರಹವನ್ನು ಕುಡಿಯಲು ಮತ್ತು ಕೈಗಾರಿಕೆಗಳಿಗೆ ಮೀಸಲಿರಿಸಲಾಗಿದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ಭಾರಿ ಕಡಿಮೆ ಇದೆ. ಇಂತಹ ಸನ್ನಿವೇಶದಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿದರು. ಉಭಯ ಸರ್ಕಾರಗಳ ವಾದ ಆಲಿಸಿದ ಸಮಿತಿಯು, 'ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಪೂರ್ಣ ಪ್ರಮಾಣದಲ್ಲಿ ಇನ್ನಷ್ಟೇ ಆರಂಭವಾಗಬೇಕಿದೆ. ಕಾವೇರಿ ನದಿ ಪಾತ್ರದ ಭೂಮಿಯಲ್ಲಿನ ತೇವಾಂಶ ಪ್ರಮಾಣ ಇನ್ನಷ್ಟೇ ವೃದ್ಧಿಯಾಗಬೇಕಿದೆ. ಜೂನ್‌ನಲ್ಲಿ ಕರ್ನಾಟಕದ ನಾಲ್ಕು ಜಲಾಶಯಗಳ ನಿವ್ವಳ ಒಳಹರಿವು 1.70 ಟಿಎಂಸಿ ಅಡಿಯಷ್ಟಿದೆ. ಸದ್ಯ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಬೇಕು' ಎಂದು ಹೇಳಿತು.

₹16 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದು, ₹16 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

'ಹಲಸೂರಿನ ಜೋಗುಪಾಳ್ಯದ ಮಾರಪ್ಪ ರಸ್ತೆಯ ಮನೆಯೊಂದರಲ್ಲಿ ಆರೋಪಿ ಕೆಲಸಕ್ಕಿದ್ದ ಮಾಡುತ್ತಿದ್ದಳು. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಆರೋಪಿ ಚಿನ್ನಾಭರಣ ಕದಿದ್ದರು. ಚಿನ್ನದ ಆಭರಣಗಳ ಬಗ್ಗೆ ಮನೆಯ ಮಾಲೀಕರು ಹೆಚ್ಚು ಗಮನಿಸಿರಲಿಲ್ಲ. ಕೆಲ ತಿಂಗಳ ನಂತರ ಮನೆಯಲ್ಲಿದ್ದ ಚಿನ್ನಾಭರಣಗಳು ಕಾಣದಿರುವಾಗ ಕಳ್ಳತನವಾಗಿರುವ ಬಗ್ಗೆ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಕೆಲಸದಾಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಯು ಕಳ್ಳತನ ಮಾಡಿದ್ದ ಚಿನ್ನದ ಆಭರಣಗಳನ್ನು ಕರಗಿಸಿ, ಮೂರು ಚಿನ್ನದ ಗಟ್ಟಿಗಳನ್ನಾಗಿ ಮಾರ್ಪಡಿಸಿದ್ದರು. ಮೂರು ಚಿನ್ನದ ಗಟ್ಟಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದರು.

ಕಳ್ಳತನ ಆರೋಪಿ ಬಂಧನ

ಬೆಂಗಳೂರು: ವಾಹನ ನಿಲುಗಡೆ ಪ್ರದೇಶದಲ್ಲಿ ಆಟೊ, ದ್ವಿಚಕ್ರವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಡಿ.ಜೆ. ಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದು, ಆತನಿಂದ ₹5 ಲಕ್ಷ ಮೌಲ್ಯದ 8 ದ್ವಿಚಕ್ರವಾಹನ ಜಪ್ತಿ ಮಾಡಿಕೊಳ್ಳಲಾಗಿದೆ.

ಆರೋಪಿಯನ್ನು ಮುದಸ್ಸಿರ್ ಎಂದು ಗುರುತಿಸಲಾಗಿದೆ.

ಪಿಳ್ಳಣ್ಣ ಗಾರ್ಡನ್ ಶಾಂಪುರ ಮುಖ್ಯರಸ್ತೆಯಲ್ಲಿರುವ ಸಭಾಂಗಣದ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿರುವ ಬಗ್ಗೆ ಪ್ರಕರಣ ದಾಖಲಿಸಲಾಗಿತ್ತು. ಈ ಬಗ್ಗೆ ತನಿಖೆ ಕೈಗೊಂಡು ಪೊಲೀಸರು ಆರ್.ಟಿ. ನಗರದ ಕೆ.ಬಿ. ಸಂದ್ರದ ಬಳಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡರು. ವಿಚಾರಣೆಗೊಳಪಡಿಸಿದಾಗ ದ್ವಿಚಕ್ರ ವಾಹನಗಳು ಹಾಗೂ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಕಳ್ಳತನ ಮಾಡಿದ್ದ ವಾಹನಗಳನ್ನು ಡಿ.ಜೆ. ಹಳ್ಳಿ ಠಾಣಾ ವ್ಯಾಪ್ತಿಯ ರಾಘವೇಂದ್ರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ನಿಲ್ಲಿಸಿರುವುದಾಗಿ ಮಾಹಿತಿ ನೀಡಿದ್ದ. ಎಂಟು ದ್ವಿಚಕ್ರ ವಾಹನಗಳು ಹಾಗೂ ಒಂದು ಆಟೊವನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದರು.

ಠಾಣೆ ಎದುರು ಯುವಕ ಆತ್ಮಹತ್ಯೆ ಯತ್ನ

ಜೊಯಿಡಾ: ತಾಲ್ಲೂಕಿನ ರಾಮನಗರ ಪೊಲೀಸ್ ಠಾಣೆ ಎದುರು ಗುರುವಾರ ಸಂಜೆ ಭಾಸ್ಕರ ಬೋಂಡೆಲ್ಕರ (28) ಎಂಬಾತ ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ. ತಕ್ಷಣವೇ ಬೆಳಗಾವಿ ಕೆಎಲ್‌ಇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು.

'ತನ್ನ ಮಾವನ ವಿರುದ್ಧ ದಾಖಲಾದ ಪ್ರಕರಣದ ಕುರಿತು ವಿಚಾರಿಸಲು ಭಾಸ್ಕರ, ಪಾನಮತ್ತನಾಗಿ ಠಾಣೆಗೆ ಬಂದಿದ್ದ. ಅಪರಾಧ ವಿಭಾಗದ ಎಸ್‌ಐ ಬುದ್ಧಿವಾದ ಹೇಳಿದರು. ಕೆಲ ಹೊತ್ತಿನಲ್ಲೇ ಆತ ಪೆಟ್ರೋಲ್ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡ. ತಕ್ಷಣವೇ ಆತನ ದೇಹಕ್ಕೆ ಬಟ್ಟೆ ಸುತ್ತಿ, ಬೆಂಕಿ ನಂದಿಸಲಾಯಿತು. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸುವುದರ ಜೊತೆಗೆ ಆತ್ಮಹತ್ಯೆಗೆ ಯತ್ನಿಸಿದ ಆರೋಪದ ಮೇಲೆ ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ಶೈಕ್ಷಣಿಕ ವರ್ಷ: ಶಿಕ್ಷಣಕ್ಕೆ ಶೇ 25 ಅನುದಾನ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮುಂದಿನ ಎರಡು ವರ್ಷಗಳನ್ನು ಶೈಕ್ಷಣಿಕ ವರ್ಷ ಎಂದು ಘೋಷಿಸಿ, ಶೇ 25ರಷ್ಟು ಅನುದಾನವನ್ನು ಶಿಕ್ಷಣಕ್ಕೇ ವೆಚ್ಚ ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಆರೋಗ್ಯ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬೇಡಿಕೆ ಇದ್ದು, ಇದಕ್ಕೆ ಒತ್ತು ನೀಡಬೇಕು. ನಿಗದಿತ ಮಾನದಂಡಗಳಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಉನ್ನತ ಶಿಕ್ಷಣದಲ್ಲಿ 41 ಮಹಿಳಾ ಪದವಿ ಕಾಲೇಜು ಆರಂಭಿಸುವುದಾಗಿ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದೆ. ಇದನ್ನು ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

ಅರಣ್ಯೀಕರಣ, ಶುದ್ಧ ಕುಡಿಯುವ ನೀರು ಮತ್ತು ಕಿಂಡಿ ಅಣೆಕಟ್ಟೆಗಳಿಗೆ ಆದ್ಯತೆ ನೀಡುವ ಮೂಲಕ ಅಂತರ್ಜಲ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಂಡು, ಕಾರ್ಯಕ್ರಮಗಳನ್ನು ರೂಪಿಸುವಂತೆ ಸಲಹೆ ನೀಡಿದರು.

'100 ಹೊಸ ತಳಿ ಅಭಿವೃದ್ಧಿಪಡಿಸಿ'

ನವದೆಹಲಿ: ನೂರು ದಿನಗಳಲ್ಲಿ ನೂರು ಬೆಳೆಗಳ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಇಲಾಖೆಯ ಅಧಿಕಾರಿಗಳಿಗೆ ಶುಕ್ರವಾರ ನಿರ್ದೇಶನ ನೀಡಿದರು.

ಕೃಷಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಚೌಹಾಣ್ ಅವರು, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನೂರು ಹೊಸ ತಂತ್ರಜ್ಞಾನಗಳಿಗೆ ಪ್ರಮಾಣೀಕರಣ ಪತ್ರ ಪಡೆಯುವಂತೆ ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ(ಐಸಿಎಆರ್) ಸೂಚನೆ ನೀಡಿದರು.

ಸಾಮಾಜಿಕ ನ್ಯಾಯ ನಾಯಕತ್ವ ತರಬೇತಿ ಶಿಬಿರದಲ್ಲಿ ನಾಗಮೋಹನದಾಸ್

ಅಸಮಾನತೆ ಅರಿಯದೆ ಸಾಮಾಜಿಕ ನ್ಯಾಯ ಗೊತ್ತಾಗದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಜಾತಿ ಅಸಮಾನತೆಯೂ ಸೇರಿ, ಎಲ್ಲ ಅಸಮಾನತೆಗಳನ್ನು ಅರ್ಥ ಮಾಡಿಕೊಂಡರಷ್ಟೆ ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಅರ್ಥವಾಗಲು ಸಾಧ್ಯ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ತಿಳಿಸಿದರು.

ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರವು ಸಮಾಜ ಕಲ್ಯಾಣ ಇಲಾಖೆ, ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ 'ಸಾಮಾಜಿಕ ನ್ಯಾಯ ನಾಯಕತ್ವ ತರಬೇತಿ' ಬಗ್ಗೆ ಹಮ್ಮಿಕೊಂಡಿರುವ ಎರಡು ದಿನಗಳ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯ ಅರ್ಥವಾದರೆ ಸಂವಿಧಾನ ಅರ್ಥವಾಗುತ್ತದೆ. ನಮ್ಮ ಸಂವಿಧಾನದಲ್ಲಿ ಬುದ್ಧನ ಧರ್ಮ ಮಾರ್ಗ, ಬಸವಣ್ಣನ ಸಮಾನತೆಯ ಮಾರ್ಗ, ಗಾಂಧೀಜಿಯವರ ಅಹಿಂಸಾ ಮಾರ್ಗ ಮತ್ತು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಮಾರ್ಗದ ಪ್ರಭಾವವಿದೆ. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗದಲ್ಲಿ ಎಲ್ಲರೂ ಸಮಾನವಾಗಿ ಭಾಗವಹಿಸುವ ಅವಕಾಶವನ್ನು ಸಂವಿಧಾನ ಕಲ್ಪಿಸಿಕೊಟ್ಟಿದೆ ಎಂದು ವಿವರಿಸಿದರು.

ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆಯ ನಿರ್ದೇಶಕ ಯು. ಚಂದ್ರನಾಯಕ್ ಮಾತನಾಡಿ, 'ಡಾ. ಬಾಬು ಜಗಜೀವನರಾಂ ಸಂಶೋಧನೆ ಸಂಸ್ಥೆ ವತಿಯಿಂದ ಈ ಸಮುದಾಯಗಳಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ವಿವಿಧ ತರಬೇತಿಗಳನ್ನು ನೀಡಿ ಉದ್ಯೋಗ ಪಡೆದುಕೊಳ್ಳುವಂತೆ ಮಾಡಲಾಗುತ್ತಿದೆ' ಎಂದು ವಿವರಿಸಿದರು.

ರಾಷ್ಟ್ರೀಯ ಕಾನೂನು ಶಾಲೆಯ ಕಾರ್ಮಿಕ ಅಧ್ಯಯನ ಕೇಂದ್ರ ನಿರ್ದೇಶಕ ಬಾಬು ಮ್ಯಾಥ್ಯೂ ಮಾತನಾಡಿ, 'ಸಂವಿಧಾನವನ್ನು ನಾಶಮಾಡಲು ಒಳ ಸಂಚುಗಳು ನಡೆಯುತ್ತಿವೆ. ಸಂವಿಧಾನ ರಕ್ಷಣೆಗಾಗಿ ಹಲವಾರು ಕಾರ್ಯಾಗಾರಗಳನ್ನು ಹಮ್ಮಿಕೊಂಡಾಗ ಸಾಮಾನ್ಯ ಜನರನ್ನು ತಲುಪಲು ಸಾಧ್ಯ' ಎಂದರು.

ಮೈಸೂರು ವಿಭಾಗದ 10 ಜಿಲ್ಲೆಗಳಿಂದ 120 ಜನ ಸಾಮಾಜಿಕ ಕಾರ್ಯಕರ್ತರು ಮತ್ತು ವಕೀಲರು ಈ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಶುಕ್ರವಾರ ನಡೆದ 'ಸಾಮಾಜಿಕ ನ್ಯಾಯ ನಾಯಕತ್ವ ತರಬೇತಿ' ಕಾರ್ಯಾಗಾರದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿದರು.

ಎನ್.ಸಿ.ಡಿ.ಎಚ್.ಆರ್‌ನ ಸಿದ್ದರಾಜು, ಎಸ್‌ಸಿಎಸ್‌ಪಿ–ಟಿಎಸ್‌ಪಿ ನೋಡಲ್ ಏಜೆನ್ಸಿ ಸಲಹೆಗಾರ ಬಿ.ಟಿ.ವೆಂಕಟೇಶ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅರುಣ್ ಚಕ್ರವರ್ತಿ, ಕಾರ್ಯಾಗಾರದ ಸಂಯೋಜಕ ಆರ್.ವಿ. ಚಂದ್ರಶೇಖರ್ ಭಾಗವಹಿಸಿದ್ದರು.

ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ತಾಂತ್ರಿಕ ಸಲಹೆಗಾರರಾಗಿ ನಾಗೇಶ್ವರ ರಾವ್ ಅವರಿಗೆ ಕೆಲಸ

‘ಗುತ್ತಿಗೆ’ ನೇಮಕ; ₹2.50 ಲಕ್ಷ ಸಂಭಾವನೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ‘ಹೊರೆ’ ಆಗುತ್ತಿರುವ ಕಾರಣ ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ನಿವೃತ್ತ ಸರ್ಕಾರಿ ನೌಕರರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ; ಹಾಗಿದ್ದರೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಂಗಳಿಗೆ ₹2.50 ಲಕ್ಷ ಸಂಭಾವನೆ ನಿಗದಿಪಡಿಸಿ ತಾಂತ್ರಿಕ ಸಲಹೆಗಾರರನ್ನು ನೇಮಿಸಿದೆ.

ಭಾರತೀಯ ತೈಲ ನಿಗಮದಲ್ಲಿ ಅಧಿಕಾರಿಯಾಗಿ ನಿವೃತ್ತಿ ಹೊಂದಿರುವ ಹೈದರಾಬಾದಿನ ಕೊಂಡಾಪುರ ನಿವಾಸಿ ನಾಗೇಶ್ವರ ರಾವ್ ನಂದಿಪಟಿ ಅವರನ್ನು ಪ್ರಾಧಿಕಾರಕ್ಕೆ ಒಂದು ವರ್ಷಕ್ಕೆ ನೇಮಿಸಿ ಕೊಳ್ಳಲಾಗಿದೆ. ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದ ಅವಧಿಯಲ್ಲಿಯೇ (ಜೂನ್ 5) ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ನೇಮಕಾತಿ ಆದೇಶ ಹೊರಡಿಸಿದೆ.

ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನಿವೃತ್ತ ಸರ್ಕಾರಿ ನೌಕರರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆ ಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯ ಕಾರ್ಯದರ್ಶಿಗೆ (ಸಿ.ಎಸ್) ಇದೇ ಜನವರಿಯಲ್ಲಿ ಮುಖ್ಯಮಂತ್ರಿ ಸೂಚಿಸಿದ್ದರು. ಅಲ್ಲದೆ, ಆ ಹುದ್ದೆಗಳಿಗೆ ಹಾಲಿ ಸರ್ಕಾರಿ ಕೆಲಸ ದಲ್ಲಿರುವ ಅಧಿಕಾರಿ, ಸಿಬ್ಬಂದಿಯನ್ನು ನಿಯೋಜನೆ ಮಾಡಬೇಕು ಎಂದೂ ಅವರು ತಿಳಿಸಿದ್ದರು. ಅದರಂತೆ, ಕೆಲವು ಇಲಾಖೆ, ನಿಗಮ, ಪ್ರಾಧಿಕಾರಗಳು ನಿವೃತ್ತ ಸರ್ಕಾರಿ ನೌಕರರನ್ನು ಕೆಲಸದಿಂದ ಬಿಡುಗಡೆ ಮಾಡಿದ್ದವು.

ಆದರೆ, ಕೇಂದ್ರ ಸರ್ಕಾರದ ಉದ್ಯೋಗದಿಂದ ನಿವೃತ್ತರಾದವರನ್ನು ತಾಂತ್ರಿಕ ಸಲಹೆಗಾರನ್ನಾಗಿ ಮುಖ್ಯಮಂತ್ರಿ ಸೂಚನೆಯನ್ನು ಬದಿಗಿಟ್ಟು ಪ್ರಾಧಿಕಾರ ನೇಮಿಸಿಕೊಂಡಿರುವುದು ಇಲಾಖೆಯ ಒಳಗೆ ಅಸಮಾಧಾನಕ್ಕೆ ಕಾರಣವಾಗಿದೆ.

‘ತೈಲ ಕೈಗಾರಿಕೆ ಕ್ಷೇತ್ರದಲ್ಲಿ 30 ವರ್ಷ ಅನುಭವ ಹೊಂದಿರುವ, 2016–2022ರವರೆಗೆ ಒಡಿಶಾ ರಾಜ್ಯದ ಕೌಶಲ ಅಭಿವೃದ್ಧಿ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವ ನಾಗೇಶ್ವರ ರಾವ್, ಕೌಶಲ ಅಭಿವೃದ್ಧಿಯ ಬೃಹತ್ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅಲ್ಲದೆ, ಅದರ ನಿರ್ವಹಣೆ ಕೆಲಸವನ್ನೂ ನೋಡಿಕೊಂಡಿರುವುದಾಗಿ ತಿಳಿಸಿದ್ದಾರೆ. ಭುವನೇಶ್ವರದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಮಾದರಿ ಕೌಶಲ ಅಕಾಡೆಮಿ ಸ್ಥಾಪಿಸುವಲ್ಲಿ ಮತ್ತು ಅದರ ನಿರ್ವಹಣೆಯಲ್ಲಿ ಯಶಸ್ವಿ ಆಗಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ಕೌಶಲ ಅಭಿವೃದ್ಧಿ ಕ್ಷೇತ್ರದಲ್ಲಿನ ಅವರ ಅಪಾರ ಅನುಭವ ಗಮನದಲ್ಲಿಟ್ಟು ಪ್ರಾಧಿಕಾರ ದಲ್ಲಿ ತಾಂತ್ರಿಕ ಸಲಹೆಗಾರರಾಗಿ ನೇಮಿಸಿ ಕೊಳ್ಳಲಾಗಿದೆ’ ಎಂದು ನೇಮಕಾತಿ ಆದೇಶದಲ್ಲಿ ವಿವರಿಸಲಾಗಿದೆ.

‘ಭಾರತೀಯ ತೈಲ ನಿಗಮದಲ್ಲಿ ಅಧಿಕಾರಿಯಾಗಿ ನಿವೃತ್ತಿ ಹೊಂದುವಾಗ ಅವರ ಒಟ್ಟು ಮಾಸಿಕ ವೇತನ ಸುಮಾರು ₹4.40 ಲಕ್ಷ. ಈ ಕಾರಣದಿಂದ ಪ್ರಾಧಿಕಾರ ದಲ್ಲಿ ಅವರಿಗೆ ಸಂಭಾವನೆಯಾಗಿ ಮಾಸಿಕ ₹2.50 ಲಕ್ಷ ನೀಡಲು ಪ್ರಾಧಿಕಾರದ ಅಧ್ಯಕ್ಷರು ಶಿಫಾರಸು ಮಾಡಿದ್ದಾರೆ. ಆರ್ಥಿಕ ಇಲಾಖೆಯು ಅವರ ನೇಮಕಾತಿಗೆ ಅನುಮತಿ ನೀಡಿದೆ’ ಎಂದೂ ಆದೇಶದಲ್ಲಿ ತಿಳಿಸಲಾಗಿದೆ. ಈ ಕುರಿತು ಪ್ರತಿಕ್ರಿಯೆ ಪಡೆಯಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್‌ಗೆ ಕರೆ ಮಾಡಿದರೂ, ಅವರು ಕರೆ ಸ್ವೀಕರಿಸಲಿಲ್ಲ.

ನಿಗದಿಪಡಿಸಿದಕ್ಕಿಂತ ‘ಇಮ್ಮಡಿ’ ವೇತನ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾಗಿದ್ದ ಹುದ್ದೆಗಳ ಪೈಕಿ, ಸಿಸ್ಟಂ ಅನಾಲಿಸ್ಟ್ ಮತ್ತು ಆಪ್ತ ಕಾರ್ಯದರ್ಶಿ (ತಲಾ 1) ಹುದ್ದೆಯನ್ನು ರದ್ದುಪಡಿಸಿ, ಎರಡು ತಾಂತ್ರಿಕ ಸಲಹೆಗಾರರ ಹುದ್ದೆಗಳನ್ನು (ವೇತನ ಶ್ರೇಣಿ ₹90,500ರಿಂದ ₹1,23,300) ಸೃಜಿಸಿ ರಾಜ್ಯ ಸರ್ಕಾರ 2023ರ ಡಿ. 18ರಂದು ಆದೇಶ ಹೊರಡಿಸಿತ್ತು. ಈ ಪೈಕಿ, ಒಂದು ಹುದ್ದೆಯನ್ನು ಈಗಾಗಲೇ ಭರ್ತಿ ಮಾಡಿಕೊಳ್ಳಲಾಗಿದೆ. ಮತ್ತೊಂದು ತಾಂತ್ರಿಕ ಸಲಹೆಗಾರ ಹುದ್ದೆಯನ್ನು ಈಗ ಭರ್ತಿ ಮಾಡಲಾಗಿದೆ. ಆದರೆ, ಸರ್ಕಾರ ಈ ಹುದ್ದೆಗೆ ನಿಗದಿ ಪಡಿಸಿದ್ದ ತಿಂಗಳ ವೇತನ ಶ್ರೇಣಿಗಿಂತ ಇಮ್ಮಡಿ ವೇತನಕ್ಕೆ ನೇಮಕ ಮಾಡಿ ಕೊಂಡಿರುವುದಕ್ಕೆ ಅಧಿಕಾರಿಗಳ ವಲಯದಲ್ಲಿಯೇ ಆಕ್ಷೇಪ ವ್ಯಕ್ತವಾಗಿದೆ.

‘ಜೀವ ಉಳಿಸಲು ರಕ್ತ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಜೀವ ಉಳಿಸಲು ರಕ್ತ ಅಗತ್ಯ. ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನದ ಮಹತ್ವ ಅರಿತು, ಇನ್ನೊಬ್ಬರಿಗೆ ನೆರವಾಗಬೇಕು’ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ತಿಳಿಸಿದರು.

ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ ಆರೋಗ್ಯ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಶನ್ ಸೊಸೈಟಿ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಜಾಗೃತಿ ಜಾಥಾಗೆ ಚಾಲನೆ ನೀಡಿ, ಮಾತನಾಡಿದರು.

‘ಒಬ್ಬರ ಜೀವ ಉಳಿಸಲು ವೈದ್ಯರೇ ಆಗಬೇಕಿಲ್ಲ. ರಕ್ತದಾನ ಮಾಡುವ ಮೂಲಕವೂ ಜೀವ ಉಳಿಸಬಹುದು. ರಕ್ತದಾನದಿಂದ ಹಲವರ ಜೀವನದಲ್ಲಿ ಬದಲಾವಣೆಯನ್ನೂ ತರಬಹುದಾಗಿದೆ. ದೇಶದಲ್ಲಿ ರಕ್ತಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದ್ದರಿಂದ ರಕ್ತದಾನಕ್ಕೆ ನಾವೆಲ್ಲರೂ ಮುಂದಾಗಬೇಕು. ರಕ್ತದಾನ ಇತರರಿಗೆ ಮರುಜನ್ಮ ನೀಡುವ ಶ್ರೇಷ್ಠ ಮತ್ತು ಸಾರ್ಥಕ ಸೇವೆ. ಯುವಜನರು ರಕ್ತದಾನದಂತಹ ಸಮಾಜಸೇವೆಗೆ ಹೆಚ್ಚಿನ ಒಲವು ತೋರಬೇಕು. ತಾವು ರಕ್ತದಾನ ಮಾಡುವುದರೊಂದಿಗೆ ಇತರರನ್ನೂ ರಕ್ತದಾನ ಮಾಡುವಂತೆ ಪ್ರೇರೇಪಿಸಬೇಕು’ ಎಂದು ಹೇಳಿದರು.

‘ರಕ್ತದಾನವು ಎಷ್ಟೋ ಜನರಿಗೆ ಜೀವ ನೀಡುವ ಮಹತ್ಕಾರ್ಯವಾಗಿದೆ. 18ರಿಂದ 65 ವರ್ಷದೊಳಗಿನ ಆರೋಗ್ಯವಂತ ವ್ಯಕ್ತಿಗಳು ರಕ್ತದಾನಕ್ಕೆ ಮುಂದೆ ಬರಬೇಕು. ದಾನಿ ನೀಡುವ ಒಂದು ಯೂನಿಟ್ ರಕ್ತವನ್ನು ನಾಲ್ಕು ಜೀವ ಉಳಿಸಲು ಬಳಸಬಹುದಾಗಿದೆ’ ಎಂದರು.

‘ಅಪಘಾತಕ್ಕೆ ಒಳಗಾದವರು, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು, ಕ್ಯಾನ್ಸರ್ ಪೀಡಿತರು, ಹಿಮೋಫಿಲಿಯಾ ರೋಗಿಗಳು ಸೇರಿ ರಕ್ತ ಸಂಬಂಧಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ನಿಯಮಿತವಾಗಿ ರಕ್ತ ಪೂರೈಸಬೇಕಾಗುತ್ತದೆ. ರಕ್ತದಾನದಿಂದ ಮಾತ್ರವೇ ರಕ್ತದ ಕೊರತೆ ನೀಗಲು ಸಾಧ್ಯ’ ಎಂದರು.

ಜಾಥಾದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ರಕ್ತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಅಡೆತಡೆಯಿಂದ ಕೆರೆ ಅಭಿವೃದ್ಧಿ ವಿಳಂಬ

ಡಿಸೆಂಬರ್ ವೇಳೆಗೆ ಕಗ್ಗದಾಸಪುರ ಕೆರೆ ಅನಾವರಣ: ಶಾಸಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ತಡೆ ಹಾಗೂ ಕಿರಿದಾದ ರಸ್ತೆಗಳಲ್ಲಿ ಬೃಹತ್ ವಾಹನಗಳು ಸಾಗಲು ಸಾಧ್ಯವಾಗದ್ದರಿಂದ ಕಗ್ಗದಾಸಪುರ ಕೆರೆ ಅಭಿವೃದ್ಧಿ ವಿಳಂಬವಾಗಿದೆ. ಡಿಸೆಂಬರ್ ವೇಳೆಗೆ ಕೆರೆ ಅಭಿವೃದ್ಧಿ ಪೂರ್ಣಗೊಳ್ಳಲಿದೆ ಎಂದು ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ರಘು ತಿಳಿಸಿದರು.

ಕಗ್ಗದಾಸಪುರ ಕೆರೆಯ ಅಭಿವೃದ್ಧಿ ಕಾರ್ಯವನ್ನು ಗುರುವಾರ ಪರಿಶೀಲಿಸಿ, ಕಾಮಗಾರಿಯನ್ನು ಶೀಘ್ರ ಮುಗಿಸುವಂತೆ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು. ‘ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಅಧಿಕಾರಿಗಳು ಭರವಸೆ ನೀಡಿದರು.

‘ಕೆರೆ ಅಭಿವೃದ್ಧಿ ಕಾಮಗಾರಿಗೆ 2019ರ ಅಂತ್ಯದಲ್ಲಿ ಕಾರ್ಯಾದೇಶ ನೀಡಿದ ಮೇಲೆ ನ್ಯಾಯಾಲಯ ತಡೆ ನೀಡಿತ್ತು. ನಂತರ ಕೋವಿಡ್ ಸಂದರ್ಭದಲ್ಲಿ ಕಾಮಗಾರಿ ನಡೆಸಲು ಸಾಧ್ಯವಾಗಲಿಲ್ಲ. 2022ರಲ್ಲಿ ಅತಿ ಹೆಚ್ಚು ಮಳೆಯಾದ್ದರಿಂದ ನೀರು ತುಂಬಿಕೊಂಡು ಯಾವುದೇ ಕಾಮಗಾರಿ ನಡೆಸಲು ಸಾಧ್ಯವಾಗಲಿಲ್ಲ. ಹೀಗಾಗಿ ಅಭಿವೃದ್ಧಿ ಕಾಮಗಾರಿ ವಿಳಂಬವಾಯಿತು. ಈ ಕಾಮಗಾರಿಗೆ ಹೆಚ್ಚುವರಿ ಹಣವನ್ನೇನೂ ಬಿಡುಗಡೆ ಮಾಡಿಲ್ಲ. ಆಗಿರುವ ಕೆಲಸಕ್ಕೆ ಟೆಂಡರ್‌ನಲ್ಲಿ ನಮೂದಿಸಿರುವ ಹಣವನ್ನಷ್ಟೆ ನೀಡಲಾಗುತ್ತಿದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

‘47 ಎಕರೆ ವಿಸ್ತೀರ್ಣದ ಕಗ್ಗದಾಸಪುರ ಕೆರೆಗೆ ₹8 ಕೋಟಿ ವೆಚ್ಚ ಮಾಡಲಾಗುತ್ತಿದೆ. ಇನ್ನಷ್ಟು ಅಭಿವೃದ್ಧಿಗೆ ಇದೀಗ ₹4 ಕೋಟಿ ವೆಚ್ಚದ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ’ ಎಂದು ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಎಸ್‌ಟಿಪಿ ವಿಳಂಬ: ಕಗ್ಗದಾಸಪುರ ಕೆರೆಗೆ ಸಂಸ್ಕರಿತ ನೀರನ್ನು ಮಾತ್ರ ಬಿಡುಗಡೆ ಮಾಡಲು 5 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆ ಘಟಕವನ್ನು ನಿರ್ಮಿಸಲಾಗುತ್ತಿದೆ. ಇದು ಡಿಸೆಂಬರ್ ಅಂತ್ಯಕ್ಕೆ ಮುಗಿಯಲಿದೆ ಎಂದು ಜಲಮಂಡಳಿ ಮುಖ್ಯ ಎಂಜಿನಿಯರ್ ಗಂಗಾಧರ್ ತಿಳಿಸಿದರು.

ಕೆರೆಯ ಅಂಗಳದಲ್ಲಿ ಸುಮಾರು ಎರಡೂವರೆ ಎಕರೆಯಷ್ಟು ಜಾಗವನ್ನು ಮೊದಲು ನಿಗದಿ ಮಾಡಿ, ಎಸ್‌ಟಿಪಿ ನಿರ್ಮಿಸಲು ಆರಂಭಿಸಲಾಗಿತ್ತು. ನ್ಯಾಯಾಲಯದಿಂದ ಇದಕ್ಕೆ ಅನುಮತಿ ಸಿಗದಿದ್ದರಿಂದ ಆ ಪ್ರದೇಶದಿಂದ ಮತ್ತೊಂದು ಬದಿಗೆ ಎಸ್‌ಟಿಪಿಯನ್ನು ಸ್ಥಳಾಂತರಿಸಲಾಯಿತು. ಸಾಮರ್ಥ್ಯ ಕಡಿಮೆಗೊಳಿಸದೆ, ಎಸ್‌ಟಿಪಿ ನಿರ್ಮಿಸಲಾಗುತ್ತಿದೆ. ಬೃಹತ್ ವಾಹನಗಳು ಇಲ್ಲಿಗೆ ಬರಲು ಸಾಧ್ಯವಿಲ್ಲ. ಹೀಗಾಗಿ ಕಾಮಗಾರಿ ವಿಳಂಬವಾಗುತ್ತಿದೆ. ಇದು ಟರ್ನ್‌ಕೀ ಯೋಜನೆಯಾಗಿದ್ದು, ಎಷ್ಟೇ ವಿಳಂಬವಾದರೂ ₹26 ಕೋಟಿಯಷ್ಟೇ ನೀಡಲಾಗುತ್ತದೆ. ಇದರಲ್ಲಿ ಜಿಎಸ್‌ಟಿ ಸೇರಿದಂತೆ ಹತ್ತು ವರ್ಷಗಳ ನಿರ್ವಹಣೆಯೂ ಗುತ್ತಿಗೆದಾರರದ್ದೇ ಆಗಿದೆ ಎಂದರು.

ಕಗ್ಗದಾಸಪುರ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಎಸ್‌. ರಘು ಅವರು ಬಿಬಿಎಂಪಿ, ಜಲಮಂಡಳಿ ಅಧಿಕಾರಿಗಳೊಂದಿಗೆ ಗುರುವಾರ ಪರಿಶೀಲಿಸಿದರು

162 ದಶಲಕ್ಷ ಲೀಟರ್ ಸಾಮರ್ಥ್ಯ

‘ಕಗ್ಗದಾಸಪುರ ಕೆರೆ ಅಭಿವೃದ್ಧಿ ಬಗ್ಗೆ ಅನಗತ್ಯವಾಗಿ ಅಪಪ್ರಚಾರ ಮಾಡಲಾಗುತ್ತಿದೆ. 47 ಎಕರೆಯ ದೊಡ್ಡ ಕೆರೆಯನ್ನು ಕಿರಿದಾದ ರಸ್ತೆಗಳ ನಡುವೆ ಅಭಿವೃದ್ಧಿ ಮಾಡುವುದೇ ಸವಾಲು. 67 ದಶಲಕ್ಷ ಲೀಟರ್ ನೀರಿನ ಸಂಗ್ರಹ ಸಾಮರ್ಥ್ಯವನ್ನು 162 ದಶಲಕ್ಷ ಲೀಟರ್‌ಗೆ ಹೆಚ್ಚಿಸಲಾಗಿದೆ. ಎಲ್ಲ ರೀತಿಯ ಒತ್ತುವರಿಯನ್ನು ತೆರವು ಮಾಡಿದ್ದು, ಸುಮಾರು ಒಂದು ಎಕರೆ ಪ್ರದೇಶದ ಒತ್ತುವರಿ ಪ್ರಕರಣ ನ್ಯಾಯಾಲಯದಲ್ಲಿದೆ’ ಎಂದು ಶಾಸಕ ರಘು ತಿಳಿಸಿದರು.

‘ಕಗ್ಗದಾಸಪುರ ಕೆರೆ ಅಭಿವೃದ್ಧಿ ವಿಳಂಬವಾಗಿದ್ದು, ಹಣ ದುರುಪಯೋಗವಾಗುತ್ತಿದೆ’ ಆಮ್ ಆದ್ಮಿ ಪಕ್ಷದವರು ದೂರಿದ್ದರು. ‘ಕೆರೆಯ ಸಾಮರ್ಥ್ಯ ಹಾಗೂ ಕಾಮಗಾರಿಯನ್ನು ಪರಿಶೀಲಿಸಿದರೆ ಎಷ್ಟು ವ್ಯಯವಾಗಿದೆ ಎಂಬುದು ಎಲ್ಲರಿಗೂ ಅರಿವಾಗುತ್ತದೆ’ ಎಂದು ರಘು ಹೇಳಿದರು.

ವಿದ್ಯುತ್ ಸ್ಪರ್ಶ: ಆನೆ ಸಾವು–ಸ್ವಯಂಪ್ರೇರಿತ ಪಿಐಎಲ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ಆನೆಗಳೂ ಸೇರಿದಂತೆ ಹಲವು ವನ್ಯಜೀವಿಗಳು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪುತ್ತಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಈ ಕುರಿತಂತೆ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿದೆ.

ಹೈಕೋರ್ಟ್ ಸುದ್ದಿ

ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಸಂಬಂಧ ಪಿಐಎಲ್ ದಾಖಲಿಸಿಕೊಂಡಿದ್ದು, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಲಿಖಿತ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದ್ದು, ವಿಚಾರಣೆಯನ್ನು ಜುಲೈ 2ಕ್ಕೆ ಮುಂದೂಡಿದೆ.

‘ಆನೆಗಳೂ ಸೇರಿದಂತೆ ವನ್ಯಜೀವಿಗಳ ಅಸ್ವಾಭಾವಿಕ ಸಾವುಗಳನ್ನು ತಡೆಯುವುದು ಮತ್ತು ಅವುಗಳಿಗೆ ರಕ್ಷಣೆಯನ್ನು ಒದಗಿಸುವ ಕುರಿತು ಕೈಗೊಂಡಿರುವ ಕ್ರಮಗಳೇನು? ಇತ್ತೀಚೆಗೆ ಬೆಳಕಿಗೆ ಬಂದ ಆನೆಗಳ ಸತತ ಸಾವುಗಳನ್ನು ತಡೆಯುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ್ಯಾವುವು? ಈ ರೀತಿಯ ಘಟನೆಗಳನ್ನು ತಡೆಯಲು ಅರಣ್ಯ ಇಲಾಖೆ ಅಳವಡಿಸಿಕೊಂಡಿರುವ ಕಾರ್ಯವಿಧಾನಗಳು ಯಾವುವು? ಈ ಸಾವುಗಳಿಗೆ ಅಧಿಕಾರಿಗಳ ಹೊಣೆಗಾರಿಕೆ ಏನು? ಈ ಕುರಿತಂತೆ ಮುಂದಿನ ವಿಚಾರಣೆ ವೇಳೆಗೆ ವಿವರಿಸಬೇಕು’ ಎಂದು ನ್ಯಾಯಪೀಠ ಸೂಚಿಸಿದೆ.

‘ರಾಜ್ಯದಲ್ಲಿ ವಿದ್ಯುತ್ ಸ್ಪರ್ಶ ಮತ್ತು ಅಸ್ವಾಭಾವಿಕ ಕಾರಣಗಳಿಂದ ವನ್ಯಜೀವಿಗಳು ಸಾವನ್ನಪ್ಪುತ್ತಿವೆ. ಇದಕ್ಕೆ ಉದಾಹರಣೆ ಎಂಬಂತೆ ಮೈಸೂರಿನಲ್ಲಿ ಅಶ್ವತ್ಥಾಮ ಹೆಸರಿನ ಆನೆ, ಚಿಕ್ಕಮಗಳೂರು ಹಾಗೂ ಮಡಿಕೇರಿಯಲ್ಲಿ ಎರಡು ಆನೆಗಳು ಸಾವಿಗೀಡಾಗಿರುವುದು ಆತಂಕದ ವಿಷಯ. ಇದಕ್ಕೆಲ್ಲಾ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ವನ್ಯಜೀವಿ ಧಾಮ ಮತ್ತು ರಕ್ಷಿತಾರಣ್ಯಗಳಲ್ಲದೆ ಇತರೆ ಭಾಗಗಳಲ್ಲಿನ ವನ್ಯಜೀವಿಗಳ ರಕ್ಷಣೆ ತುರ್ತು ಅಗತ್ಯವಾಗಿದೆ’ ಎಂದು ನ್ಯಾಯಪೀಠ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

ವಿಚ್ಛೇದನ ಕೋರಿದ್ದ ನಟ ದುನಿಯಾ ವಿಜಯ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ನಾಗರತ್ನಾ ಅವರಿಂದ ವಿಚ್ಛೇದನ ಕೋರಿ ನಟ ದುನಿಯಾ ವಿಜಯ್ ಸಲ್ಲಿಸಿದ್ದ ಅರ್ಜಿಯನ್ನು ನಗರದ ಕೌಟುಂಬಿಕ ನ್ಯಾಯಾಲಯ ವಜಾಗೊಳಿಸಿದೆ.ಈ ಸಂಬಂಧ ದುನಿಯಾ ವಿಜಯ್ ಸಲ್ಲಿಸಿದ್ದ ಅರ್ಜಿಯನ್ನು 1ನೇ ಪ್ರಧಾನ ಕೌಟುಂಬಿಕ ನ್ಯಾಯಾಲಯ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿಯಲ್ಲಿ ಪತ್ನಿ ವಿರುದ್ಧ ಮಾಡಿದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ವಿಜಯ್ ವಿಫಲವಾಗಿದ್ದಾರೆ. ಆದ್ದರಿಂದ, ಇವರ ವಿವಾಹ ರದ್ದುಪಡಿಸಿ ವಿಚ್ಛೇದನ ಮಂಜೂರು ಮಾಡಲು ಆಗದು’ ಎಂದು ನ್ಯಾಯಾಧೀಶರು ಅರ್ಜಿಯನ್ನು ವಜಾಗೊಳಿಸಿದ್ದಾರೆ.

‘ಕ್ರೌರ್ಯದ ಆಧಾರದಡಿ ಪತ್ನಿ ನಾಗರತ್ನಾ ಜೊತೆಗಿನ ತಮ್ಮ ವಿವಾಹವನ್ನು ಅನೂರ್ಜಿತಗೊಳಿಸಿ ವಿಚ್ಛೇದನ ನೀಡಬೇಕು ಎಂದು ಕೋರಿದ್ದರು.

ಕೃತಿಗಳಿಗೆ ಲೇಖಕಿಯರ ಸಂಘದ ವಿವಿಧ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2023ನೇ ಸಾಲಿನ ವಿವಿಧ ವಾರ್ಷಿಕ ದತ್ತಿ ಪ್ರಶಸ್ತಿಗಳನ್ನು ಘೋಷಿಸಿದ್ದು, ಇದೇ 23ರಂದು ಇಲ್ಲಿನ ಜೆ.ಸಿ. ರಸ್ತೆಯಲ್ಲಿರುವ ನಯನ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟಿಸಿದ್ದಾರೆ. ‘ಕಾಕೋಳು ಸರೋಜಮ್ಮ ಕಾದಂಬರಿ ಪ್ರಶಸ್ತಿ’ಗೆ ಚಂದ್ರಮತಿ ಸೋಂದಾ ಅವರ ‘ದುಪಡಿ’, ‘ಭಾಗ್ಯ ನಂಜಪ್ಪ ವಿಜ್ಞಾನ ಸಾಹಿತ್ಯ ಪ್ರಶಸ್ತಿ’ಗೆ ಬಿ. ರೇವತಿ ನಂದನ್ ಅವರ ‘ತೋಟದ ಲೋಕದ ಪಾಠಗಳು’, ‘ನಾಗರತ್ನ ಚಂದ್ರಶೇಖರ್ (ಲಲಿತ ಪ್ರಬಂಧ) ಪ್ರಶಸ್ತಿ’ಗೆ ಸರಸ್ವತಿ ಭೋಸಲೆ ಅವರ ‘ಕಾಡತಾವ ನೆನಪ’, ‘ಜಿ.ವಿ. ನಿರ್ಮಲ ಪ್ರಶಸ್ತಿ’ಗೆ ವಿಜಯಾ ಶಂಕರ ಅವರ ‘ತಲ್ಲಣಗಳ ನಡುವೆ’, ‘ತ್ರಿವೇಣಿ ಸಾಹಿತ್ಯ ಪುರಸ್ಕಾರ’ಕ್ಕೆ ಮಾಧವಿ ಭಂಡಾರಿ ಕೆರೆಕೋಣ ಅವರ ‘ಗುಲಾಬಿ ಕಂಪಿನ ರಸ್ತೆ’ ಕೃತಿ ಆಯ್ಕೆಯಾಗಿದೆ.

‘ಕಮಲಾ ರಾಮಸ್ವಾಮಿ (ಪ್ರವಾಸ ಸಾಹಿತ್ಯ) ಪ್ರಶಸ್ತಿ’ಗೆ ನೂತನ ದೋಶೆಟ್ಟಿ ಅವರ ‘ಸ್ವರ್ಗದೊಂದಿಗೆ ಅನುಸಂಧಾನ’, ‘ನುಗ್ಗೆಹಳ್ಳಿ ಪಂಕಜ (ಹಾಸ್ಯ ಕೃತಿ) ಪ್ರಶಸ್ತಿ’ಗೆ ಸುಮಾ ರಮೇಶ್ ಅವರ ‘ಹಚ್ಚೆ ದಿನ್’, ‘ಗುಣಸಾಗರಿ ನಾಗರಾಜ್ (ಮಕ್ಕಳ ಸಾಹಿತ್ಯ) ಪ್ರಶಸ್ತಿ’ಗೆ ರಾಧಾ ಕುಲಕರ್ಣಿ ಅವರ ‘ಏರಿ ರಂಗಮಂಚ, ತೋರಿ ಈ ಪ್ರಪಂಚ’, ‘ಇಂದಿರಾ ವಾಣಿರಾವ್ (ನಾಟಕ) ಪ್ರಶಸ್ತಿ’ಗೆ ಕಾವ್ಯಾ ಕಡಮೆ ಅವರ ‘ಸಂಜೀವಿನಿ ಸ್ಟೋರ್ಸ್’, ‘ಜಯಮ್ಮ ಕರಿಯಣ್ಣ (ಸಂಶೋಧನೆ) ಪ್ರಶಸ್ತಿ’ಗೆ ಲೀಲ ವಾಸುದೇವ್ ಅವರ ‘ಮೊರಸು ಒಕ್ಕಲಿಗರ ಪ್ರಧಾನ ಸಂಪ್ರದಾಯಗಳು’ ಕೃತಿ ಭಾಜನವಾಗಿದೆ.

‘ತ್ರಿವೇಣಿ ದತ್ತಿನಿಧಿ’ ಅಡಿ ಸುಧಾ ಆಡುಕಳ ಅವರ ‘ನೀಲಿ ಮತ್ತು ಸೇಬು’ ಕೃತಿ ಪ್ರಥಮ, ಫೌಝಿಯಾ ಸಲೀಂ ಅವರ ‘ನೀ ದೂರ ಹೋದಾಗ’ ಕೃತಿ ದ್ವಿತೀಯ ಹಾಗೂ ಸಿಂಧು ಚಂದ್ರ ಅವರ ‘ಚೂರು ಚಂದ್ರ ಮೂರು ಕಿರಣ’ ಕೃತಿ ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

ಉಷಾ. ಪಿ.ರೈ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಶೋಭಾ ನಾಯಕ ಅವರ ‘ಶಯ್ಯಾಗೃಹದ ಸುದ್ದಿಗಳು’, ‘ನಿರುಪಮಾ ಕಥಾ ಪ್ರಶಸ್ತಿ’ಗೆ ಡಿಜಿಟಲ್ ಮಾಧ್ಯಮದಲ್ಲಿ ಮಾಲತಿ ಹೆಗಡೆ ಅವರ ‘ಪಲ್ಲಟ’, ಮುದ್ರಣ ಮಾಧ್ಯಮದಲ್ಲಿ ಮಂಜುಳಾ ಗೋನಾಳ ಅವರ ‘ಬಿದಿರು ಮಳೆ ಸೇವೆ’ ಕಥೆಗಳು ಆಯ್ಕೆಯಾಗಿವೆ. ‘ಶೈಲಾ ನಾಗರಾಜ್ ಕಾವ್ಯ ಪ್ರಶಸ್ತಿ’ಗೆ ಕಾತ್ಯಾಯಿನಿ ಕುಂಜಿಬೆಟ್ಟು ಅವರ ‘ನಕ್ಷತ್ರ ನಕ್ಕ ರಾತ್ರಿ’, ‘ಶ್ರೀಲೇಖಾ (ಕಾವ್ಯ ಪ್ರಶಸ್ತಿ) ಪ್ರಶಸ್ತಿ’ಗೆ ದೇವಿಕಾ ನಾಗೇಶ್ ಅವರ ‘ಮೌನ ಹೊದ್ದವಳು’ ಕೃತಿ ಭಾಜನವಾಗಿದೆ.

ಸಮಗ್ರ ಸಾಧನೆಗೆ ಶಿಕ್ಷಕಿ ಅಥವಾ ಲೇಖಕಿಗೆ ನೀಡುವ ‘ಕೆ.ಟಿ. ಬನಶಂಕರಮ್ಮ ಪ್ರಶಸ್ತಿ’ಗೆ ಮಂಜುಳಾ ಹಿರೇಮಠ, ಪ್ರಕಾಶಕಿ ಅಥವಾ ಲೇಖಕಿಗೆ ನೀಡುವ ‘ಪ್ರೇಮಾಭಟ್ಟ ಮತ್ತು ಎ.ಎಸ್.ಭಟ್ಟ ಪ್ರಶಸ್ತಿ’ಗೆ ಅಕ್ಷತಾ ಹುಂಚದಕಟ್ಟೆಯವರ ಅಹರ್ನಿಶಿ ಪ್ರಕಾಶನ ಆಯ್ಕೆಯಾಗಿದೆ.

ಜಾನಪದ ಸಂಶೋಧಕ ಕೆ.ಆರ್. ಸಂಧ್ಯಾರೆಡ್ಡಿ, ಲೇಖಕಿ ಎಲ್.ಜಿ.ಮೀರಾ ಹಾಗೂ ‘ಸುಧಾ’ ವಾರ ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಚ.ಹ.ರಘುನಾಥ ಅವರನ್ನು ಒಳಗೊಂಡ ಸಮಿತಿ ಪ್ರಶಸ್ತಿಗಳಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕವಿ ಎಚ್.ಎಸ್. ಶಿವಪ್ರಕಾಶ್ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಗವರ್ನಿಂಗ್ ಅರ್ಬನ್ ಇಂಡಿಯಾ, ಪಾಲಿಸಿ ಆ್ಯಂಡ್ ಪ್ರಾಕ್ಟೀಸ್’ ಕೃತಿ ಬಿಡುಗಡೆ ಸಮಾರಂಭದಲ್ಲಿ ರವೀಂದ್ರ

‘ಅಧಿಕಾರ ವಿಕೇಂದ್ರೀಕರಣದಿಂದ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅವೈಜ್ಞಾನಿಕ ನಗರೀಕರಣದಿಂದಾಗಿ ಮೂಲಸೌಕರ್ಯ ಸೇರಿ ವಿವಿಧ ಸಮಸ್ಯೆಗಳು ಕಾಡುತ್ತಿವೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅಧಿಕಾರ ವಿಕೇಂದ್ರೀಕರಿಸಿ, ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಬೇಕು’ ಎಂದು ನಿವೃತ್ತ ಐಎಎಸ್ ಅಧಿಕಾರಿ ಎ. ರವೀಂದ್ರ ತಿಳಿಸಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಸೆಟ್ಲ್‌ಮೆಂಟ್ಸ್ (ಐಐಎಚ್‌ಎಸ್) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ ‘ಗವರ್ನಿಂಗ್ ಅರ್ಬನ್ ಇಂಡಿಯಾ, ಪಾಲಿಸಿ ಆ್ಯಂಡ್ ಪ್ರಾಕ್ಟೀಸ್’ ಕೃತಿ ಬಿಡುಗಡೆಯಾಯಿತು. ಬಳಿಕ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ‘ದೇಶ ಹಾಗೂ ರಾಜ್ಯದಲ್ಲಿ ನಗರೀಕರಣ ಹೆಚ್ಚಾಗುತ್ತಿದೆ. ಇದರ ಜತೆಗೆ ನಗರದ ಸಮಸ್ಯೆಗಳು ಜಾಸ್ತಿ ಆಗುತ್ತಿವೆ. ನಗರಗಳ ಹೊರವಲಯದಲ್ಲಿನ ಹಳ್ಳಿಗಳು ನಗರವಾಗಿ ಪರಿವರ್ತನೆಯಾಗುತ್ತಿವೆ. ಇದರಿಂದಾಗಿ ರಸ್ತೆ, ನೀರು, ಸಾರಿಗೆ ಸೇರಿ ವಿವಿಧ ಮೂಲ ಸೌಕರ್ಯಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಆ ಬೇಡಿಕೆಯನ್ನು ಈಗಿನ ವ್ಯವಸ್ಥೆಯಲ್ಲಿ ಪೂರೈಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ವ್ಯವಸ್ಥೆಯೇ ಮುಖ್ಯ ಕಾರಣ’ ಎಂದರು.

‘ಆರ್ಥಿಕ ಸಂಪನ್ಮೂಲದ ಕೊರತೆಯಿಂದಾಗಿ ಸ್ಥಳೀಯ ಸಂಸ್ಥೆಗಳಿಗೆ ಮೂಲಸೌಕರ್ಯ ವೃದ್ಧಿ ಸಾಧ್ಯವಾಗುತ್ತಿಲ್ಲ. ಆಸ್ತಿ ತೆರಿಗೆ ಮಾತ್ರ ಆದಾಯವಾಗಿದೆ. ಸ್ಥಳೀಯ ಸಂಸ್ಥೆಗಳನ್ನು ಸರ್ಕಾರಗಳೇ ನಿಯಂತ್ರಿಸುತ್ತಿವೆ. ಆದ್ದರಿಂದ ಅಧಿಕಾರ ವಿಕೇಂದ್ರೀಕರಿಸಿ, ಹೆಚ್ಚಿನ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು. ನಗರ ಆಡಳಿತ ಸುಧಾರಣೆಗೆ ಕಾಲಕಾಲಕ್ಕೆ ಚುನಾವಣೆ ನಡೆಸಿ, ಮಹಾಪೌರರಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು. ಚೀನಾದಲ್ಲಿ ಮೇಯರ್‌ಗಳಿಗೆ ಹೆಚ್ಚಿನ ಅಧಿಕಾರವಿದ್ದು, ಹೂಡಿಕೆದಾರರ ಸಮಾವೇಶಗಳನ್ನು ನಡೆಸುತ್ತಿದ್ದಾರೆ. ಇದರಿಂದ ಚೀನಾದ ನಗರಗಳು ಉತ್ತಮವಾಗಿ ಬೆಳವಣಿಗೆ ಹೊಂದುತ್ತಿವೆ’ ಎಂದು ಅವರು ಹೇಳಿದರು.

‘ನಗರ ಆರ್ಥಿಕವಾಗಿ ಮುನ್ನಡೆಯಬೇಕು. ಉದ್ಯೋಗಾವಕಾಶಗಳ ಸೃಷ್ಟಿಯೂ ಮುಖ್ಯ. ಆದ್ದರಿಂದ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು. ವಿವಿಧ ದೇಶಗಳ ನಗರಗಳ ಆಡಳಿತ ವ್ಯವಸ್ಥೆ ಹಾಗೂ ಅವು ಹೊಂದಿದ ಬೆಳವಣಿಗೆಯ ಬಗ್ಗೆ ಅಧ್ಯಯನ ನಡೆಸಿ, ಈ ಪುಸ್ತಕ ಬರೆಯಲಾಗಿದೆ. ಇಲ್ಲಿನ ಆಡಳಿತ ಅನುಭವವು ಇದಕ್ಕೆ ನೆರವಾಗಿದೆ’ ಎಂದು ವಿವರಿಸಿದರು.

ಆರ್ಥಿಕ ತಜ್ಞ ವಿಜಯ್ ಕೇಳ್ಕರ್, ‘ಯೋಜನಾಬದ್ಧ ನಗರಗಳ ನಿರ್ಮಾಣಕ್ಕೆ ಆರ್ಥಿಕ ಬೆಂಬಲ ಅಗತ್ಯ. ಮೂಲಸೌಕರ್ಯ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಕಡಿಮೆ ಮಾಡಬೇಕಿದೆ. ಇದಕ್ಕೆ ಹಣಕಾಸಿನ ಬೆಂಬಲ ಅಗತ್ಯ. ಸಂಗ್ರಹಿಸಲಾಗುತ್ತಿರುವ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಸ್ಥಳೀಯ ಸಂಸ್ಥೆಗಳಿಗೂ ಹಂಚಿಕೆ ಮಾಡಿದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಬಹುದು’ ಎಂದು ಅವರು ಹೇಳಿದರು.

ಐಐಎಚ್‌ಎಸ್ ನಿರ್ದೇಶಕ ಅರೋಮರ್ ರೇವಿ ಸಂವಾದ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ‘ಗವರ್ನಿಂಗ್ ಅರ್ಬನ್ ಇಂಡಿಯಾ, ಪಾಲಿಸಿ ಆ್ಯಂಡ್ ಪ್ರಾಕ್ಟೀಸ್’ ಕೃತಿಯನ್ನು ವಿಜಯ್ ಕೇಳ್ಕರ್ ಬಿಡುಗಡೆ ಮಾಡಿದರು. ಆರೋಮರ್ ರೇವಿ ಮತ್ತು ಎ. ರವೀಂದ್ರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಜೂ.16 ಫಾದರ್ಸ್ ಡೇ

ಹೆಣ್ಣುಮಕ್ಕಳ ಪಾಲಿಗೆ ಮೊದಲ ಹೀರೊ ಎಂದರೆ ಅಪ್ಪನೇ. ಬದುಕಿನ ಓರೆ ಕೋರೆಗಳನ್ನು ದಾಟಿ ಮುನ್ನಡೆಯುವಾಗ ಅಪ್ಪನ ಕಿರುಬೆರಳೇ ಕಲ್ಪವೃಕ್ಷ. ಹೆಗಲ ಮೇಲೆ ಕೂರಿಸಿ ಜಗವ ತೋರಿಸುವ ಅಪ್ಪನ ಪ್ರತಿ ನಡೆಯೂ ಮಕ್ಕಳ ಪಾಲಿನ ಪಥ್ಯ. ಕಾಠಿಣ್ಯ ಮತ್ತು ಮೃದುತ್ವ ಎರಡನ್ನೂ ಒಡಲಲ್ಲಿಟ್ಟುಕೊಂಡೇ ಶಿಸ್ತು, ಸಂಯಮ ಕಲಿಸುವ, ಪ್ರೀತಿಯಿಂದ ಗದರುತ್ತಲೇ ದಿಕ್ಕು ತೋರುವ ಅಪ್ಪನ ಅಸೀಮ ಪ್ರೀತಿಗೆ ಶರಣೆನ್ನೋಣ. ನಿರೂಪಣೆ: ರೂಪಾ ಕೆ.ಎಂ.

ಅಪ್ಪನ ನೆರಳಲ್ಲಿ...

ಬಿ.ಎಂ.ಕುಮಾರಸ್ವಾಮಿ ಜತೆ ದೀಪಾ ರವಿಶಂಕರ್

ಹಾಸ್ಯಪ್ರಜ್ಞೆಯಿರುವ ಧೀಮಂತ

ಬದುಕಿನಲ್ಲಿ ಕುಗ್ಗಿದಾಗ ಅದನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಅಣ್ಣ (ಅಪ್ಪ) ಖುದ್ದು ಹೇಳಿಕೊಡಲಿಲ್ಲ. ಆದರೆ ಸ್ವತಃ ಹಾಗೆ ಬದುಕಿ ತೋರಿಸಿದ್ದಾರೆ. ಕುಗ್ಗಿದಾಗ, ಸೋತಾಗ, ಅವಮಾನಗೊಂಡಾಗ ನಮ್ಮ ಸ್ಥಿತಿಯನ್ನು ನಾವೇ ನೋಡಿ ನಗುವ ಬಗೆಯನ್ನು ಕಲಿಸಿಕೊಟ್ಟಿದ್ದಾರೆ. ಹಾಗೆ ಮಾಡುವುದರಿಂದ ಸಮಸ್ಯೆ ಎಂಥದ್ದೇ ಆಗಿರಲಿ; ಎಷ್ಟೇ ಬಿಗುವಿನ ಸ್ಥಿತಿ ಇರಲಿ ಅದಕ್ಕೊಂದು ತಿಳಿಯಾದ ಚೌಕಟ್ಟು ದಕ್ಕಿಬಿಡುತ್ತದೆ. ಕಠಿಣ ಪರಿಸ್ಥಿತಿಯಲ್ಲಿ ಮನಸ್ಸನ್ನು ತಿಳಿಯಾಗಿಟ್ಟುಕೊಂಡಷ್ಟು ನಮ್ಮ ತಪ್ಪನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಿಚಾರದಲ್ಲಿ ಅಣ್ಣ ನಂಬಿಕೆ ಇಟ್ಟವರು. ನಮ್ಮ ಜೀವನದಲ್ಲಿ ಸೋಲು, ನೋವು, ದುಃಖ ಹೀಗೆ ಎಂಥ ಪರಿಸ್ಥಿತಿಯೇ ಬರಲಿ; ಅದನ್ನು ನಮಗಿಂತ ಚಂದಕ್ಕೆ ಅರ್ಥಮಾಡಿಕೊಳ್ಳುವ ಜೀವವೊಂದಿದ್ದರೆ ಅದು ನನ್ನ ಅಣ್ಣ. ಏರಿಳಿತಗಳೆಲ್ಲಲ್ಲ ಅಣ್ಣ ಹೆಗಲು ಕೊಟ್ಟೇ ಕೊಡುತ್ತಾರೆ ಎಂಬ ನಂಬಿಕೆಯಂತೂ ನಿಚ್ಚಳವಾಗಿದೆ.

ಅಣ್ಣ ಪ್ರೊ. ಬಿ.ಎಂ.ಕುಮಾರಸ್ವಾಮಿ ರಾಜ್ಯ ಕಂಡ ಪ್ರಸಿದ್ಧ ಪರಿಸರವಾದಿ, ಆರ್ಥಿಕತಜ್ಞರು. ಹಲವಾರು ಸಂಘಟನೆಗಳಲ್ಲಿ ತೊಡಗಿಸಿಕೊಂಡವರು. ಆಯಾಯ ಕಾಲಕ್ಕೆ ಸಮಾಜದ ಅಗತ್ಯವನ್ನು ಮನಗಂಡು ಅದಕ್ಕಾಗಿ ಹೋರಾಟ ನಡೆಸಿದವರು. ಆದರೆ ಅವರೆಂದೂ ಬದುಕನ್ನು ವ್ರತದಂತೆ ಅವುಡುಗಚ್ಚಿ ಬದುಕಲಿಲ್ಲ. ಎಲ್ಲರನ್ನೂ ಪ್ರೀತಿಸುತ್ತಾ, ತಮಾಷೆ ಮಾಡುತ್ತಾ, ರೇಗಿಸುತ್ತಾ ತನ್ನ ಸುತ್ತ ಪ್ರಭಾವಳಿಯನ್ನು ಸೃಷ್ಟಿಸಿಕೊಂಡವರು. ನಿರ್ಣಾಯಕ ಸ್ಥಳಗಳಲ್ಲಿ ಖಡಕ್ ಧೋರಣೆಯನ್ನು ಅನುಸರಿಸಿಯೂ ಹಾಸ್ಯಪ್ರಜ್ಞೆಯನ್ನು ಮೆರೆದವರು. ಈ ಗುಣವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಅಧ್ಯಯನಶೀಲ ಗುಣದಿಂದಾಗಿ 80ರ ವಯಸ್ಸಿನಲ್ಲಿಯೂ ಅಣ್ಣ ತಮ್ಮನ್ನು ಪ್ರಸ್ತುತವಾಗಿಟ್ಟುಕೊಂಡಿದ್ದಾರೆ. ನನ್ನ ಒಟ್ಟು ವ್ಯಕ್ತಿತ್ವದಲ್ಲಿ ಒಳಿತು ಕಂಡರೆ ಅವೆಲ್ಲವೂ ಅಣ್ಣ ಮತ್ತು ಅಮ್ಮನ ಕಾಣ್ಕೆಗಳು.

ದೀಪಾ ರವಿಶಂಕರ್, ಕಿರುತೆರೆ ಕಲಾವಿದೆ

ಪಿ.ವಿ. ರಮಣ ಅವರೊಂದಿಗೆ ಪಿ.ವಿ.ಸಿಂಧು

ಅಪ್ಪನ ಮಗಳು ಸಿಂಧು...!

ಗಿರೀಶ್ ದೊಡ್ಡಮನಿ

ಭಾರತದ ಕ್ರೀಡಾ ಇತಿಹಾಸದ ಪುಸ್ತಕದ ಪುಟಗಳನ್ನು ತಿರುವಿಹಾಕಿದರೆ, ಕಳೆದೊಂದು ದಶಕದ ಸಾಧನೆಗಳು ಸುವರ್ಣಸದೃಶ. ಅದರಲ್ಲಿ ಮಹಿಳಾ ಕ್ರೀಡಾಪಟುಗಳ ಸಾಧನೆಗಳೇ ಸಿಂಹಪಾಲು. ಅದರಲ್ಲೂ ಪ್ರಮುಖವಾಗಿ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರದ್ದು ಆಗಸದೆತ್ತರದ ಸಾಧನೆ.

ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ, ಎರಡು ಬೆಳ್ಳಿ ಹಾಗೂ ಎರಡು ಕಂಚು ಸೇರಿದಂತೆ ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳು ಅವರ ಮನೆಯ ವಿಶಾಲವಾದ ಪ್ರಶಸ್ತಿ ಸಂಗ್ರಹಾಲಯದಲ್ಲಿವೆ. ಅವುಗಳ ಹಿಂದೆ ಸಿಂಧು ಅವರ ಪರಿಶ್ರಮ, ಛಲ ಮತ್ತು ಪ್ರತಿಭೆಯಷ್ಟೇ ಇಲ್ಲ. ಅವರ ಅಪ್ಪ ಪಿ.ವಿ. ರಮಣ ಅವರ ನಿರಂತರ ಬೆಂಬಲವೂ ಇದೆ. 11ನೇ ವಯಸ್ಸಿನಲ್ಲಿ ಮೊದಲ ಬಾರಿ ಸಿಂಧು ಬ್ಯಾಡ್ಮಿಂಟನ್ ರೆಕೆಟ್ ಹಿಡಿದು ಅಂಕಣಕ್ಕೆ ಕಾಲಿಟ್ಟ ದಿನದಿಂದ ಇಲ್ಲಿಯವರೆಗೆ ರಮಣ ಅವರು ಸಿಂಧುಗೆ ನೆರಳಿನಂತೆ ಇದ್ದಾರೆ.

ಸ್ವತಃ ವಾಲಿಬಾಲ್ ಆಟಗಾರರಾಗಿದ್ದ ರಮಣ ತಮ್ಮ ಮಗಳ ಸೋಲು, ಗೆಲುವು, ನೋವು, ನಲಿವುಗಳಲ್ಲಿ ಗಟ್ಟಿಯಾಗಿ ನಿಂತಿದ್ದಾರೆ. ತಾನು ವಿಶ್ವಮಟ್ಟದ ತಾರಾ ಕ್ರೀಡಾಪಟು ಎಂಬ ಅಹಂಕಾರವನ್ನು ಸಿಂಧು ತಮ್ಮ ಬಳಿ ಬಿಟ್ಟುಕೊಂಡಿಲ್ಲ.

‘ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಬರುವ ಯಶಸ್ಸು, ಅದನ್ನು ಹಿಂಬಾಲಿಸಿ ಬರುವ ಸಂಪತ್ತುಗಳನ್ನು ನಿಭಾಯಿಸುವುದು ಸುಲಭವಲ್ಲ. ಅಹಂಕಾರವು ದಾರಿ ತಪ್ಪಿಸುವ ಅಪಾಯ ಇರುತ್ತದೆ. ಆದರೆ ಅದೆಲ್ಲವನ್ನೂ ನಿಭಾಯಿಸುವ ಮತ್ತು ಸೋಲು, ದುಃಖ, ಒತ್ತಡಗಳನ್ನು ಮೀರಿ ನಿಲ್ಲುವುದನ್ನು ಕಲಿತದ್ದು ಮನೆಯ ವಾತಾವರಣದಿಂದಲೇ. ಅದೆಷ್ಟೋ ಬಾರಿ ಅಪ್ಪನ ಮಾತುಗಳು ನನಗೆ ಹೊಸ ದಿಕ್ಕು ತೋರಿವೆ. ಅವರೇ ನನ್ನ ಆದರ್ಶ’ ಎಂದು ಸಿಂಧು ಹೇಳುತ್ತಾರೆ.

ಇವತ್ತಿನ ಡಿಜಿಟಲ್ ಯುಗದಲ್ಲಿ ಮಕ್ಕಳ ಏಕಾಗ್ರತೆಯನ್ನು ಭಂಗಗೊಳಿಸುವ ಹಲವು ದಾರಿಗಳು ಇವೆ. ಮೊಬೈಲ್ ಗೀಳಿಗೆ ಮಕ್ಕಳು ಬೀಳುತ್ತಿದ್ದಾರೆ. ಮಕ್ಕಳಲ್ಲಿ ಈ ಗೀಳು ಬೆಳೆಯದಂತೆ ಉತ್ತಮ ಹವ್ಯಾಸಗಳನ್ನು ರೂಢಿಸುವುದು ಪಾಲಕರದ್ದೇ ಜವಾಬ್ದಾರಿ ಎನ್ನುತ್ತಾರೆ ರಮಣ.

‘ಸಿಂಧು ಈ ಹಂತಕ್ಕೆ ಬರಲು ಬಹಳಷ್ಟು ಶ್ರಮಪಟ್ಟಿದ್ದಾರೆ. ಅವರಲ್ಲಿ ಪ್ರತಿಭೆ ಇತ್ತು ನಿಜ. ಆದರೆ ಅದನ್ನು ತೋರಿಸಿಕೊಡಬೇಕಾಗಿದ್ದು ನಮ್ಮ ಕರ್ತವ್ಯವಾಗಿತ್ತು. ಅವರನ್ನು ಸರಿದಾರಿಯಲ್ಲಿ ನಡೆಸಲು ನಾವೂ ಶ್ರಮಪಡಬೇಕಾಯಿತು. ಬೆಳಗಿನ ಜಾವ 3.30ಕ್ಕೆ ನಾವು ಮೊದಲು ಎದ್ದು ಮಕ್ಕಳನ್ನು ಎಬ್ಬಿಸಬೇಕಿತ್ತು. ಅವರ ಜೀವನಶೈಲಿಗೆ ತಕ್ಕಂತೆ ನಮ್ಮದೂ ಇರಬೇಕಿತ್ತು. ನಮ್ಮ ವೃತ್ತಿಯ ಜೊತೆಗೆ ಆಕೆಯ ಸಾಧನೆಗೂ ನಾವು ಒತ್ತಾಸೆಯಾಗಿ ನಿಲ್ಲುವುದು ಕಠಿಣ ಸವಾಲಾಗಿತ್ತು. ಆದರೆ ಒಂದಂತೂ ನಿಜ. ಮಕ್ಕಳು ಯಾವಾಗಲೂ ಅಪ್ಪ, ಅಮ್ಮನನ್ನು ಅನುಕರಿಸುವುದು ಹೆಚ್ಚು. ಬುದ್ಧಿವಾದ, ಉಪದೇಶಗಳನ್ನು ಮಕ್ಕಳು ಇಷ್ಟಪಡುವುದಿಲ್ಲ. ಆದ್ದರಿಂದ ನಾವು ಪ್ರಾಕ್ಟಿಕಲ್ ಆಗಿ ಮಾಡಿ ತೋರಿದಾಗ ಅವರೂ ಮಾಡುತ್ತಾರೆ‘ ಎಂದು ರಮಣ ಹೇಳುವ ಮಾತುಗಳು ಎಷ್ಟೊಂದು ಅರ್ಥಗರ್ಭಿತವಲ್ಲವೇ?

ಧೈರ್ಯದ ನೆರಳು

ನನ್ನ ಕುಟುಂಬಕ್ಕೆ ಶಿಲ್ಪಕಲೆಯೆಂಬುದು ಪಾರಂಪರಿಕವಾಗಿ ಬಂದಿತ್ತು. ನನ್ನನ್ನೂ ಸೇರಿಸಿ ಏಳು ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗನಿರುವ ಕುಟುಂಬ ನಮ್ಮದು. ಅಣ್ಣ ಶಿಲ್ಪಕಲೆಯಲ್ಲಿ ಪರಿಣತಿ ಪಡೆದಿದ್ದಾನೆ. ಹೆಣ್ಣುಮಕ್ಕಳಲ್ಲಿ ನಾನು ಒಬ್ಬಳೇ. ಆರಂಭದಲ್ಲಿ ಅಪ್ಪಾಜಿಗೆ ಅಳುಕಿತ್ತು. ಶಿಲ್ಪಿಯಾಗುವುದು ಹೆಣ್ಣಿಗೆ ತುಸು ಕಷ್ಟ. ಶಿಲೆಗೆ ಉಳಿ ಪೆಟ್ಟು ನೀಡುವಾಗ, ಶಿಲ್ಪಿಯ ಮೈ-ಕೈಗೂ ಪೆಟ್ಟಾಗುವುದು ಸಹಜ. ನಾಜೂಕಿನ ಹೆಣ್ಣುಮಕ್ಕಳಿಗೆ ಇದು ಸಾಧ್ಯವೇ? ಎಂಬ ಪ್ರಶ್ನೆ ಇತ್ತು. ಆದರೆ, ಇಡೀ ಸೃಷ್ಟಿಯಲ್ಲಿ ಹೆಣ್ಣು ಮಹತ್ತರದ ಪಾತ್ರವನ್ನು ವಹಿಸುವಾಗ, ಶಿಲ್ಪಕಲೆಯಲ್ಲಿ ಯಾಕೆ ಹಿಂದುಳಿಯಬೇಕು ಎನ್ನುವ ಛಲದಿಂದಲೇ ನಾನು ಈ ಕ್ಷೇತ್ರಕ್ಕೆ ಬಂದೆ. ನನ್ನ ಧೈರ್ಯ ನೋಡಿ ಅಪ್ಪಾಜಿ ಹೇಳಿದಿಷ್ಟು, ‘ನಿನ್ನ ದೃಢ ಸಂಕಲ್ಪದಿಂದ ಗೆದ್ದಿದ್ದಿಯಮ್ಮ. ಇನ್ನು ಸ್ವಪ್ರಯತ್ನದಿಂದ ಮುಂದುವರಿ’ ಈ ಮಾತು ಸೋತಾಗೆಲ್ಲ ಕೈಹಿಡಿಯುತ್ತದೆ.

ಅಪ್ಪಾಜಿ ಜತೆ ಇದ್ದು 10 ವರ್ಷ ತರಬೇತಿ ಪಡೆದೆ. ಈಗ ಹತ್ತು ವರ್ಷಗಳಿಂದೀಚೆಗೆ ನಾನೇ ಶಿಲ್ಪಗಳನ್ನು ತಯಾರಿಸಿ ಮಾರಾಟ ಮಾಡುವಷ್ಟು ಪರಿಣತಿ ಸಾಧಿಸಿದ್ದೇನೆ. ಅಪ್ಪಾಜಿಗೆ 85ವರ್ಷ. ಈ ವಯಸ್ಸಿನಲ್ಲಿಯೂ ಅವರು ಕೆಲಸದಲ್ಲಿ ತೋರಿಸುವ ಬದ್ಧತೆ, ಉತ್ಸಾಹ ನನ್ನನ್ನು ಇನ್ನಷ್ಟು ಕೆಲಸ ಮಾಡುವಂತೆ ಪ್ರೇರಣೆ ನೀಡುತ್ತದೆ. ನಿರಾಸಕ್ತಿ ಎಂಬ ಪದಕ್ಕೆ ಅಪ್ಪನ ಶಬ್ದಕೋಶದಲ್ಲಿ ಅವಕಾಶವೇ ಇಲ್ಲ. ಅಪ್ಪಾ ಉಳಿ ಪೆಟ್ಟು ಕೊಡುವುದರಲ್ಲಿ ಮಾತ್ರ ಪರಿಣತರಲ್ಲ. ಖುದ್ದು ಉಳಿಯನ್ನು ತಯಾರಿಸುವ ಕಮ್ಮಾರಿಕೆಯನ್ನು ಕಲಿತಿದ್ದಾರೆ. ಹೊಸತನ್ನು ಕಲಿಯಲು ಅವರು ಸದಾ ಮುಂದಿರುತ್ತಾರೆ.

ಸುಮಲತಾ ವೀರಭದ್ರಪ್ಪ, ಶಿಲ್ಪಿ



ವೀರಭದ್ರಪ್ಪ ಕಾಳಪ್ಪ ಕವಲೂರ ಅವರೊಂದಿಗೆ ಸುಮಲತಾ

ಶ್ರೀಪತಿ ನಾಯಕ್ ಆಜೇರು ಜತೆ ಕಾವ್ಯಶ್ರೀ ನಾಯಕ್ ಆಜೇರು

ಸೃಜನಶೀಲತೆಯ ಸಾಕಾರಮೂರ್ತಿ

ನಾನು ಭಾಗವತ ಕ್ಷೇತ್ರಕ್ಕೆ ಬಂದಿದ್ದೇ ಆಕಸ್ಮಿಕ. ಭಾಗವತಿಕೆ ಕಲಿಯಬೇಕು ಎಂದು ಅಪ್ಪ ತರಗತಿಗೆ ಹೋಗುತ್ತಿದ್ದರು. ಆದರೆ, ಅವರ ಗುರುಗಳು ‘ಮಗಳಿಗೆ ಕಲಿಸುವ’ ಎಂದು ಸಲಹೆ ಕೊಟ್ಟಾಗ ಅಪ್ಪ ಅದಕ್ಕೆ ಪ್ರೋತ್ಸಾಹ ಕೊಟ್ಟರು. ಹಿಮ್ಮೇಳ ಕಲಾವಿದರಾಗಿರುವ ಅಪ್ಪ ಭಾಗವತಿಕೆಯನ್ನು ಮುಂದುವರಿಸಿದ್ದರೆ ಈ ಕ್ಷೇತ್ರದಲ್ಲಿ ಅವರಿಗೆ ದೊಡ್ಡ ಭವಿಷ್ಯವೇ ಇತ್ತು. ಆದರೆ, ಅದನ್ನೆಲ್ಲ ಬದಿಗೊತ್ತಿ ನನ್ನ ಏಳಿಗೆಗಾಗಿ ದುಡಿದರು. ನಾಲ್ಕು ಜನ ಗುರುತಿಸುವ ಮಟ್ಟಿಗೆ ಸಾಧಿಸಲು ಸಾಧ್ಯವಾಗಿದ್ದರೆ ಅದು ಅಪ್ಪನ ಸಮರ್ಪಣಾ ಭಾವದಿಂದಲೇ.

ಆರಂಭದಲ್ಲಿ ಭಾಗವತ ತರಗತಿಯಲ್ಲಿ ಹೇಳಿಕೊಟ್ಟಿದ್ದನ್ನು ಮನೆಯಲ್ಲಿ ತಾಲೀಮು ನಡೆಸುತ್ತಿದ್ದೆ. ತಾಲೀಮು ನಡೆಸುವಾಗ ಅಂದುಕೊಂಡ ಹಾಗೆ ಹಾಡಲು ಆಗಲಿಲ್ಲ. ಇದು ನನ್ನನ್ನು ಕುಗ್ಗಿಸಿತು. ‘ಆಗದು‘ ಎಂದು ಕೈಚೆಲ್ಲಿ ಕೂತೆ. ಆದರೆ, ಛಲ ಬಿಡದ ಅಪ್ಪ, ‘ಏನಾಗ್ತದೆ ನೋಡುವ’ ಎಂದು ರಾತ್ರಿ 10ರವರೆಗೆ ಹಾಡಿಸಿದ್ದರು. ಅಂದು ನಾನು ಹಾಡುತ್ತ ಮಾಡಿದ ಪ್ರಯತ್ನಗಳೆಲ್ಲವೂ ನನ್ನೊಳಗೆ ಇಂಚಿಂಚು ಆತ್ಮವಿಶ್ವಾಸವನ್ನು ಮೊಗೆದು ಕೊಟ್ಟವು. ಮಗಳಿಗೆ ಕಲಿಸಬೇಕೆಂಬ ಅಪ್ಪನ ಈ ಹಠವೇ ನನ್ನನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದೆ.

ಅವರು ಶಾಲೆಯ ಶಿಕ್ಷಕ. ಬೈದು ಪಾಠ ಹೇಳುವ ಥರದವರಲ್ಲ. ನಗು ನಗುತ್ತಾ, ಮಕ್ಕಳಿಗೆ ಪಾಠ ಕಲಿಸುವ ‘ಭಾಳ ಒಳ್ಳೆ ನಮ್ಮ ಮೇಷ್ಟ್ರು’ ಪೈಕಿಯವರು. ‘ಯಾರು ಏನೇ ಹೇಳಿದರೂ ಅದರಲ್ಲಿರುವ ಸಕಾರಾತ್ಮಕ ಅಂಶವನ್ನು ಮಾತ್ರ ತೆಗೆದುಕೊಳ್ಳಬೇಕು. ಇಷ್ಟವಿಲ್ಲ ಎಂದರೆ ಸುಮ್ಮನಾಗಿಡಬೇಕೆ ಹೊರತು ನಕಾರಾತ್ಮಕವಾಗಿ ಜವಾಬು ಕೊಡಬಾರದು’ ಎಂಬುದನ್ನು ಯಾವಾಗಲೂ ಹೇಳುತ್ತಾರೆ. ಇದನ್ನು ಸಾಧ್ಯವಾದಷ್ಟು ಪಾಲಿಸಲು ಪ್ರಯತ್ನಿಸುತ್ತಿದ್ದೇನೆ. ಅವರಿಗಿರುವ ತಾಳ್ಮೆ, ಸೃಜನಶೀಲತೆಯನ್ನು ಮೈಗೂಡಿಸಿಕೊಳ್ಳುವ ಹಾದಿಯಲ್ಲಿದ್ದೇನೆ. ನನ್ನ ಪ್ರತಿ ಹೆಜ್ಜೆಯಲ್ಲಿಯೂ ಅಪ್ಪನ ನೆರಳಿದೆ.

ಕಾವ್ಯಶ್ರೀ ನಾಯಕ್ ಆಜೇರು, ಭಾಗವತರು

ಸುಂದರ್‌ರಾಜ್ ಅವರೊಂದಿಗೆ ಲತಾ

ಸ್ವಾಭಿಮಾನವೇ ಸ್ವತ್ತು

ನನ್ನ ತಂದೆ ಸುಂದರ್‌ರಾಜ್ ಎನ್. ಬಹಳ ಸರಳ ಹಾಗೂ ಸ್ವಾಭಿಮಾನಿ. ಸ್ವತಃ ಉದ್ಯಮಿಯಾಗಿದ್ದರೂ ನಾನು ಉದ್ಯಮ ಕ್ಷೇತ್ರಕ್ಕೆ ಕಾಲಿಡಲು ನಿರಂತರವಾಗಿ ಅವರು ಕೊಟ್ಟ ಪ್ರೋತ್ಸಾಹವೇ ಕಾರಣ.

ಎಷ್ಟೇ ಕಷ್ಟ ಬರಲಿ, ಬೇರೆಯವರ ಹತ್ತಿರ ಕೈ ಚಾಚದೇ ಬದುಕು ಕಟ್ಟಿಕೊಳ್ಳಬೇಕು. ಏಕಾಂಗಿಯಾಗಿಯೇ ಹೋರಾಟ ಮಾಡಬೇಕು ಎನ್ನುವುದು ಅಪ್ಪನಿಂದ ಪಡೆದ ಸ್ಫೂರ್ತಿಯ ಮಾತುಗಳು. ಮೊದಲಿನಿಂದಲೂ ಪೇಂಟಿಂಗ್‌ನಲ್ಲಿ ಆಸಕ್ತಿ ಇತ್ತು. ಅದನ್ನೇ ಬಂಡವಾಳವಾಗಿಸಿಕೊಂಡು ಮಣ್ಣಿನ ದೀಪಗಳಿಗೆ ಪೇಂಟಿಂಗ್ ಮಾಡಿದೆ. ರುಡ್‌ಸೆಟ್ ಸಂಸ್ಥೆಯಲ್ಲಿ ತರಬೇತಿ ಪಡೆದು, ಕೇವಲ ₹ 150 ಬಂಡವಾಳದಲ್ಲಿ ಮಣ್ಣಿನ ದೀಪಗಳನ್ನು ತಯಾರಿಸುವ ಕೆಲಸ ಆರಂಭಿಸಿದೆ. ಅದು ಈಗ ಕಿರು ಉದ್ಯಮವಾಗಿ 10 ಮಂದಿ ಮಹಿಳೆಯರಿಗೆ ಕೆಲಸ ನೀಡುತ್ತಿರುವ ಸಂಸ್ಥೆಯಾಗಿ ರೂಪುಗೊಂಡಿದೆ.

ಬೆಂಗಳೂರಲ್ಲಿ ಹುಟ್ಟಿ ಬೆಳೆದಿದ್ದರೂ, ಮದುವೆಯಾಗಿ ಮೈಸೂರಿಗೆ ಹೋದೆ. ಸಾಂಸಾರಿಕ ಜಂಜಾಟಗಳ ನಡುವೆ ಅಪ್ಪನ ಬದುಕನ್ನೇ ಆದರ್ಶವಾಗಿಟ್ಟುಕೊಂಡು ಅವರಂತೆ ಸ್ವಾಭಿಮಾನಿಯಾಗಿ ಬದುಕು ಕಟ್ಟಿಕೊಂಡಿರುವುದಕ್ಕೆ ಹೆಮ್ಮೆ ಮತ್ತು ಖುಷಿ ಇದೆ. ಆರಂಭಿಕ ಹಂತದಲ್ಲಿ ಮಣ್ಣಿನ ದೀಪಗಳ ಬಗ್ಗೆ ಮಾರ್ಕೆಟಿಂಗ್ ಮಾಡಲು ಹೋಗುವಾಗೆಲ್ಲ ಅಪ್ಪ ನನ್ನ ಜತೆ ಬರುತ್ತಿದ್ದರು. ಅಷ್ಟೇ ಏಕೆ, ಅಪ್ಪ ಈಚಿನ ದಿನಗಳಲ್ಲಿ ನಮ್ಮನ್ನು ಬಿಟ್ಟು ಅಗಲುವವರೆಗೂ ನನ್ನ ಜತೆ ಉದ್ಯಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಶ್ರೀಮಂತ ಕುಟುಂಬದಲ್ಲಿ ಬೆಳೆದಿದ್ದರೂ ಅಪ್ಪ ಅವರ ಪೋಷಕರಿಂದ ಬಿಡಿಗಾಸು ಪಡೆಯದೇ ಬದುಕು ಕಟ್ಟಿಕೊಂಡಿದ್ದರು. ಅವರ ಒಟ್ಟಂದದ ಬದುಕು ನಮಗೂ ಪ್ರೇರಣೆ.

ಲತಾ ದುಷ್ಯಂತ್ ಕುಮಾರ್, ಉದ್ಯಮಿ

ಪ್ರಕಾಶ ಕಡಮೆ ಜತೆ ಕಾವ್ಯಾ ಕಡಮೆ

ಸ್ನೇಹ ಸಂಪಾದಿಸುವ ಔದಾರ್ಯ

ಪಿಯುಸಿಯಲ್ಲಿದ್ದಾಗೊಮ್ಮೆ ಪಿ.ಬಿ ರಸ್ತೆಯಲ್ಲಿ ರಾಂಗ್ ಸೈಡಲ್ಲಿ ಸ್ಕೂಟಿ ಪೆಪ್ ಪ್ಲಸ್ ಓಡಿಸಿ ಗಾಡಿ ನಜ್ಜುಗುಜ್ಜಾಗಿತ್ತು. ಅವರು ಪ್ರೀತಿಯಿಂದ ಕೊಡಿಸಿದ್ದ ಸ್ಕೂಟಿ ಅದು. ಆದರೆ, ಆ ಸ್ಕೂಟಿಯು ನನ್ನ ಮೈಮೇಲೆ ಒಂದು ಗಾಯವೂ ಗೀಚದೆ, ಎಲ್ಲ ನೋವನ್ನು ತಾನೇ ತೆಗೆದುಕೊಂಡಿತ್ತು. ಓಡಿಸುತ್ತಿದ್ದವರು ಬದುಕುಳಿಯುವ ಸಾಧ್ಯತೆ ಕಡಿಮೆ ಎಂದು ಹೇಳುವಷ್ಟು ಆ ಸ್ಕೂಟಿ ‘ಅಜ್ಜಪ್ಪಿ’ಯಾಗಿತ್ತು. ಆದರೆ, ಅಪ್ಪಾ ಏನೊಂದು ಮಾತು ಹೇಳದೇ ಆ ಸಂಜೆ ಬಹಳ ಹೊತ್ತಿನ ತನಕ ತನ್ನ ಕಾಲ ಮೇಲೆ ತಲೆ ಇರಿಸಿಕೊಂಡು ನನ್ನ ಹೆಗಲು ತಿಕ್ಕುತ್ತ ಹನಿಗಣ್ಣಾಗಿದ್ದರು. ಇದು ನನ್ನ ಅಪ್ಪ. ಕುಗ್ಗಿದಾಗ ಸಂತೈಸುವ ಪರಿಯೇ ಅಂಥದ್ದು.

ಅಪ್ಪ ನನಗೆ ಕಾಗುಣಿತ ಹೇಳಿಕೊಟ್ಟವರು. ಕೆಲಸದ ನಿಮಿತ್ತ ದೂರದೂರುಗಳಿಗೆ ಪ್ರಯಾಣ ಮಾಡುತ್ತಿದ್ದ ಅವರಿಗೆ ಭಾನುವಾರ ಮಾತ್ರ ಬಿಡುವಿರುತ್ತಿತ್ತು. ಬೆಳಗಿನ ತಿಂಡಿಯ ನಂತರ ‘ಪಟ್ಟಿ ತಗಂಡ್ ಬಾ’ ಅಂತ ಮುಂದೆ ಕೂರಿಸಿಕೊಂಡು, ‘ಆಶೀರ್ವಾದ ಬರೀ ನೋಡ್ವಾ, ಸುಬ್ರಹ್ಮಣ್ಯ ಬರೀ ನೋಡುವಾ, ಕರತಲಾಮಲಕ ಅಂದ್ರೇನು ಹೇಳು? ಅದನ್ನು ವಾಕ್ಯದಲ್ಲಿ ಬಳಸು’ ಅಂತ ‘ಪ್ರಾಣ’ ತಿಂತಿದ್ದದ್ದು ನೆನಪಿದೆ. ಅವೆಲ್ಲ ಈಗ ನನ್ನ ಬರಹ ಬದುಕಿನ ಅಡಿಪಾಯಗಳಾಗಿವೆ.

ಅವರ ಸ್ನೇಹವಲಯ ದೊಡ್ಡದು. ನಾನು ಅದಕ್ಕೆ ತದ್ವಿರುದ್ಧ. ನನಗಿರುವುದು ಅತಿ ವಿರಳ ಸ್ನೇಹಿತರು. ಅವರ ಹಾಗೆ ಯಾರನ್ನಾದರೂ ಮಾತನಾಡಿಸಿ, ಸ್ನೇಹ ಸಂಪಾದಿಸುವ ಔದಾರ್ಯವಿದ್ದರೆ ಎಷ್ಟೊಂದು ಚೆನ್ನಾಗಿ ಬರೀಬಹುದಿತ್ತಲ್ಲ ಎಂದು ಆಗಾಗ ಅನಿಸುತ್ತಿರುತ್ತದೆ.

ಮಕ್ಕಳ ಸಲುವಾಗಿ ಎಲ್ಲ ಖುಷಿಗಳನ್ನು ಕೆಲ ವರ್ಷಗಳ ಕಾಲ ತಡೆ ಹಿಡಿದು, ನಿಸ್ವಾರ್ಥವಾಗಿ ಮಕ್ಕಳ ಸೇವೆಗೆ ನಿಲ್ಲುವವರೇ ಅಪ್ಪ, ಅಮ್ಮ. ಅಂಥವರು ಸಿಗೋದು ಮಕ್ಕಳ ಪುಣ್ಯ. ನನ್ನ ಹೆತ್ತವರೂ ಅದನ್ನೇ ಮಾಡಿದರು. ಅವರಿಲ್ಲದೇ ನಾನಿಲ್ಲ ಅನ್ನುವುದನ್ನು ಮಾತ್ರ ಧನ್ಯತೆಯಿಂದ ವೇದ್ಯ ಮಾಡಿಕೊಂಡಿರುವ ಸತ್ಯ.

ಕಾವ್ಯಾ ಕಡಮೆ, ಕಥೆಗಾರ್ತಿ

ಸ್ತನದತೊಟ್ಟಿನಲ್ಲಿ ಸ್ರಾವ ಅಪಾಯದ ಸೂಚನೆಯೇ?

• ನನಗೆ ಎರಡು ಮಕ್ಕಳಿವೆ, ಮಕ್ಕಳಾಗದ ಹಾಗೇ ಟುಬೆಕ್ಟಮಿಯೂ ಆಗಿದೆ. ಇಬ್ಬರು ಮಕ್ಕಳಿಗೂ ಎರಡು ವರ್ಷ ಹಾಲುಣಿಸಿದ್ದೇನೆ, ಎರಡನೇ ಮಗಳಿಗೀಗ 4ವರ್ಷಗಳು ನನಗೆ ಈಗಲು ಎರಡು ಎದೆತೊಟ್ಟಿನಲೂ ನೀರಿನಂತಹ, ಕೆಲವೊಮ್ಮೆ ಬಿಳಿಯಾದ ದ್ರವಬರುತ್ತಿದೆ. ನನ್ನ ಹೆರಿಗೆ ಮಾಡಿಸಿದ ವೈದ್ಯರು ಭಯವೇನಿಲ್ಲ ಎಂದು ಹೇಳಿದ್ದಾರೆ. ನನಗೆ ಕ್ಯಾನ್ಸರ್ ಭಯ.

ಮಮತ ಶಿಕ್ಷಕಿ, ಬೆಂಗಳೂರು

ಸ್ಪಂದನ

ಡಾ. ವೀಣಾ ಎಸ್. ಭಟ್

ಹೆರಿಗೆಯಾಗಿ 4ವರ್ಷಗಳಾಗಿರುವುದರಿಂದ, ಸ್ತನ್ಯಪಾನವನ್ನು ನಿಲ್ಲಿಸಿರುವುದರಿಂದ ಈ ದ್ರವಸ್ರಾವವು ಅಸಹಜ ಎನಿಸುತ್ತಿದೆ. ಆಗಾಗ್ಗೆ ಎದೆಯಲ್ಲಿ ನೀರಿನಂತಹ/ ಬಿಳಿಯಾದ ಸ್ರಾವವಾಗುವುದು ಕಾಯಿಲೆಯಲ್ಲ, ಕೆಲವೊಮ್ಮೆ ಕಾಯಿಲೆಯ ಲಕ್ಷಣವಿರಬಹುದು. ಹಾಲುಸ್ರವಿಕೆ ಗರ್ಭಧಾರಣೆಯಲ್ಲಿ ಮತ್ತು ಎದೆಹಾಲುಣಿಸುವಾಗ ಸಹಜವಾದರೂ ಬೇರೆ ಸಮಯದಲ್ಲಿ ಕೂಡಾ ಆಗಬಹುದು.

ನೀವೇನಾದರೂ ಕೆಲವು ಖಿನ್ನತೆ ನಿವಾರಕ ಮಾತ್ರೆಗಳನ್ನು ಸೇವಿಸುವುದರಿಂದ, ವಾಂತಿಯಾಗದ ಹಾಗೆ ಸೇವಿಸುವ ಮೇಟಕ್ಲೋಪ್ರಮೇಡ್ ಮಾತ್ರೆ, ಹೊಟ್ಟೆಯ ಅಲ್ಸರ್ ಚಿಕಿತ್ಸೆಗೆ ತೆಗೆದುಕೊಳ್ಳುವ ರ್‍ಯಾನಿಟಿಡಿನ್ ಮಾತ್ರೆ ಇತ್ಯಾದಿಗಳಿಂದಲೂ ಹಾಲಿನಂತಹ ಸ್ರಾವ ಉಂಟಾಗಬಹುದು. ಪ್ರೊಲ್ಯಾಕ್ಟಿನ್ ಎಂಬ ಹಾರ್ಮೋನಿನ ಅಸಹಜ ಸ್ರಾವದಿಂದಲೂ ಹಾಲಿನಂಥ ಸ್ರಾವ ಉಂಟಾಗಬಹುದು. ಅತಿಯಾಗಿ ಎದೆತೊಟ್ಟು ಉತ್ತೇಜಿಸುವುದರಿಂದ, ಕೆಲವೊಮ್ಮೆ ಥೈರಾಯ್ಡ್ ಗ್ರಂಥಿಯ ಸ್ರಾವ ಕಡಿಮೆಯಿದ್ದಾಗಲೂ, ಪಿಟ್ಯೂಟರಿಯ ಗ್ರಂಥಿಯ ಗಡ್ಡೆಗಳಿದ್ದಾಗಲೂ, ಹರ್ಪಿಸ್‌ಸೋಂಕಿನ ನಂತರವೂ ಈ ರೀತಿಯ ಸ್ರಾವ ಉಂಟಾಗಬಹುದು.

ನೀರಿನಂತಹ ದ್ರವದ ಸ್ರಾವವು ಎದೆತೊಟ್ಟಿನಲ್ಲಿ ಹಾಲಿನ ನಾಳದಲ್ಲಿ ಗಂಟುಗಳಿದ್ದಾಗ ಮತ್ತು ಹಾಲಿನನಾಳದಲ್ಲಿ ಬದಲಾವಣೆಗಳಿದ್ದಾಗ (ಡಕ್ಟ್ ಎಕ್ಟೇಸಿಯಾ), ಸ್ತನದಲ್ಲಿ ಫೈಬ್ರೋಸಿಸ್ಟಿಕ್ ಬದಲಾವಣೆಗಳಾದಾಗ ದ್ರವರೂಪದ ಸ್ರಾವವಾಗಬಹುದು. ಇಂತಹ ಸ್ರಾವ ಸಾಮಾನ್ಯವಾಗಿ ಎರಡೂ ಎದೆತೊಟ್ಟಿನಲ್ಲಿ ಕಂಡುಬರಬಹುದು.

ನೀವು ಇನ್ನೊಮ್ಮೆ ತಜ್ಞವೈದ್ಯರಿಂದ ಸೂಕ್ತ ತಪಾಸಣೆಗೊಳಗಾಗಿರಿ. ಸಾಮಾನ್ಯವಾಗಿ ಸ್ತನದ ತೊಟ್ಟಿನಲ್ಲಿ ಸ್ರಾವವಾದಾಗ ಒಮ್ಮೆಲೇ ಆರಂಭವಾದರೆ ಮತ್ತು ದೀರ್ಘಾವದಿಯವರೆಗೆ ಹಾಗೇ ಇದ್ದರೆ ಎದೆತೊಟ್ಟಿನ ಸ್ರಾವದ ಜೊತೆಗೆ ಎದೆಯಲ್ಲಿ ಗಂಟುಗಳೂ ಇದ್ದರೆ ಸ್ರಾವ ರಕ್ತ ಮಿಶ್ರಿತವಾಗಿದ್ದರೆ, ಎದೆತೊಟ್ಟಿನ ಆಕಾರದಲ್ಲಿ ವ್ಯತ್ಯಾಸವಾಗಿದ್ದರೆ ಇವೆಲ್ಲಾ ಅಪಾಯದ ಚಿಹ್ನೆಗಳಾಗಿರಬಹುದು (ರೆಡ್ ಫ್ಲಾಗ್ ಸೈನ್ಸ್) ಇಂತಹ ಸಂದರ್ಭಗಳಲ್ಲಿ ನಿರ್ಲಕ್ಷಿಸದೇ ವೈದ್ಯರು ಸೂಚಿಸಿದ ಪರೀಕ್ಷೆಗಳಿಗೊಳಗಾಲೇ ಬೇಕು.

ಅಪಾಯದ ಚಿಹ್ನೆಗಳಿಲ್ಲದಿದ್ದರೂ ವೈದ್ಯರಿಂದ ಸೂಕ್ತ ತಪಾಸಣೆಗೊಳಗಾಗಿ ಥೈರಾಯ್ಡ್‌ಪರೀಕ್ಷೆ, ರಕ್ತದಲ್ಲಿ ಪ್ರೊಲ್ಯಾಕ್ಟಿನ್ ಪರೀಕ್ಷೆ ಮಾಡಿಕೊಳ್ಳುವುದು, ಅವಶ್ಯಬಂದಲ್ಲಿ ಪಿ ಟ್ಯೂಟರಿಗ್ರಂಥಿಯ ಗಡ್ಡೆಗಳಿದೆಯೇ ಎಂದು ಪರೀಕ್ಷಿಸಲು ಎಂ.ಆರ್.ಐ ಸ್ಕ್ಯಾನಿಂಗ್, ಡಕ್ಟೋಸ್ಕೋಫಿ, ಸ್ರಾವವನ್ನ ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆಮಾಡುವುದು, ಬಯಾಪ್ಸಿ ಇತ್ಯಾದಿ ಸಂದರ್ಭ ಬಂದಲ್ಲಿ ವೈದ್ಯರ ಸಲಹೆಯಮೇರೆಗೆ ಮಾಡಬೇಕಾಗುತ್ತದೆ.

ನೀವು ಹೇಳುತ್ತಿರುವ ರೀತಿನೋಡಿದರೆ ನಿಮಗೆ ಬಹುಶಃ ಅತಿಸಾಮಾನ್ಯ ಹಾನಿಕಾರಕವಲ್ಲದ ಸ್ತನದ ಸಮಸ್ಯೆಯಾದ ಫೈಬ್ರೋಸಿಸ್ಟಿಕ್ ಸಮಸ್ಯೆ ಇರುವ ಹಾಗೇ ಅನಿಸುತ್ತದೆ. ಇದು ಸಾಮಾನ್ಯವಾಗಿ ಈಸ್ಟ್ರೋಜನ್ ಹಾರ್ಮೋನುಗಳ ಹೆಚ್ಚಳದಿಂದಾಗುತ್ತದೆ. ಇದು ಮುಟ್ಟಿನ ದಿನಗಳು ಹತ್ತಿರ ಬಂದಾಗ ಹೆಚ್ಚಾಗಬಹುದು. ಇದನ್ನ ಸೂಕ್ತವಾದ ಬ್ರಾಗಳನ್ನು ಧರಿಸುವುದರಿಂದ, ಅತಿಯಾಗಿ ಉಪ್ಪು, ಅತಿಯಾದ ಕೊಬ್ಬಿನ ಸೇವನೆ ಇತ್ಯಾದಿಗಳನ್ನ ತ್ಯಜಿಸಿ, ನಿಯಮಿತ ವ್ಯಾಯಾಮ ಮಾಡುವುದರಿಂದ ಮತ್ತು ವೈದ್ಯರ ಸಲಹೆಯಮೇರೆಗೆ ಪಿರಿಡಾಕ್ಷಿನ್ (ಬಿ6) ಮತ್ತು ವಿಟಮಿನ್ ಇ ಮಾತ್ರೆಗಳನ್ನು ಕೆಲವುಕಾಲ ಸೇವಿಸಿದಾಗ ನಿಯಂತ್ರಿಸಬಹುದು. ನೀವು ಕ್ಯಾನ್ಸರ್ ಭಯವನ್ನ ಬಿಟ್ಟು ಮುಂಜಾಗ್ರತೆಗಾಗಿ ವೈದ್ಯರಿಂದ ತಪಾಸಣೆಗೊಳಗಾಗಿ ಸೂಕ್ತಚಿಕಿತ್ಸೆ ಪಡೆಯಿರಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಗೆಣಸಿನ ಉಂಡೆ

ಕೆ.ವಿ.ರಾಜಲಕ್ಷ್ಮಿ

ರಸಾಸ್ವಾದ

ಸಂಜೆಯ ಕುರುಕಲು ತಿಂಡಿಗೆ ಏನು ಮಾಡುವುದು ಎಂದು ಯೋಚಿಸುತ್ತಿದ್ದರೆ, ಫಟಾಫಟ್ ಎಂದು ಈ ರೆಸಿಪಿ ಮಾಡಲು ಪ್ರಯತ್ನಿಸಿ.

ಬೇಕಾಗುವ ಸಾಮಗ್ರಿ: ಸಿಪ್ಪೆ ತೆಗೆದು ಬೇಯಿಸಿದ ಗೆಣಸು 1, ಹೆಸರುಬೇಳೆ 1 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಹೆಸರುಬೇಳೆಯನ್ನು ಅರ್ಧಗಂಟೆ ನೆನೆಸಿ ನೀರು ಬಸಿದು ನುಣ್ಣಗೆ ರುಬ್ಬಿಕೊಳ್ಳಿ. ಇದಕ್ಕೆ ಬೇಯಿಸಿದ ಗೆಣಸು, ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಸಾಸಿವೆ ಒಗ್ಗರಣೆ ಕೊಟ್ಟು, ಮತ್ತೊಮ್ಮೆ ಕಲೆಸಿ. ನಂತರ ಉಂಡೆಹಿಡಿದು ಹಬೆಯಲ್ಲಿ ಬೇಯಿಸಿ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ: 'ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್' ವತಿಯಿಂದ 2024-25ನೇ ಸಾಲಿಗೆ ರಾಜ್ಯದ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಟ್ರಸ್ಟ್ ವತಿಯಿಂದ 12 ವರ್ಷಗಳಿಂದ ವಿದ್ಯಾರ್ಥಿವೇತನ ನೀಡಲಾಗುತ್ತಿದ್ದು, ಹಿಂದಿನ ವರ್ಷ ಸುಮಾರು 900 ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಈ ಬಾರಿ ಬಿಇ, ಡಿಪ್ಲೊಮಾ, ಪದವಿ, ವೃತ್ತಿ ಶಿಕ್ಷಣ ಕೋರ್ಸ್, ಕಾನೂನು ಪದವಿ, ಮ್ಯಾನೇಜ್‌ಮೆಂಟ್ ಮತ್ತು ಇತರ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ 2024-25ರ ಶೈಕ್ಷಣಿಕ ಅವಧಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆಯಾ ಕಾಲೇಜುಗಳ ವಾರ್ಷಿಕ ಶುಲ್ಕಕ್ಕೆ ಅನುಗುಣವಾಗಿ ವಿದ್ಯಾರ್ಥಿ ವೇತನ ನೀಡಲಾಗುವುದು.

ವಿದ್ಯಾರ್ಥಿವೇತನವನ್ನು ನಿರೀಕ್ಷಿಸುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳು ಆಯಾ ಶಾಲೆ- ಕಾಲೇಜುಗಳ ಮುಖ್ಯಸ್ಥರ ಮೂಲಕ ಪ್ರಮಾಣಪತ್ರಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಮತ್ತು ವಿವರಗಳಿಗಾಗಿ ಟ್ರಸ್ಟ್‌ನ ವೆಬ್‌ಸೈಟ್ www.ssjanakalyantrust.org ಸಂಪರ್ಕಿಸಿ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 31 ಕಡೆಯ ದಿನ ಎಂದು ಟ್ರಸ್ಟ್ ಕಾರ್ಯದರ್ಶಿ ಅಥಣಿ ವೀರಣ್ಣ ತಿಳಿಸಿದ್ದಾರೆ.

ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಸ್ವಾಮೀಜಿ ಸಮಾರಂಭದಲ್ಲಿ ಮಾತನಾಡಿದರು. ಶಾಸಕ ಎಂ.ಆರ್ ಪಾಟೀಲ, ಸಚಿವ ಎಂ.ಬಿ.ಪಾಟೀಲ, ಮುಂಡರಗಿಯ ತೋಂಟದಾರ್ಯ ಮಠದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಇಳಕಲ್ಲದ ವಿಜಯಮಹಾಂತೇಶ್ವರ ಮಠದ ಗುರುಮಹಾಂತ ಸ್ವಾಮೀಜಿ ಪಾಲ್ಗೊಂಡಿದ್ದರು

'ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಮುಂದುವರಿಸಿ'

ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕರೆ

ಪ್ರಜಾವಾಣಿ ವಾರ್ತೆ

ಧಾರವಾಡ: 'ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವಾಗಿ ಘೋಷಿಸುವಂತೆ ಕೈಗೊಂಡಿದ್ದ ಹೋರಾಟ ರಾಜಕೀಯ ಸ್ಥಿತ್ಯಂತರದಿಂದ ಸ್ಥಗಿತವಾಗಿತ್ತು, ಅದನ್ನು ಮತ್ತೆ ಮುಂದುವರಿಸುವ ಪ್ರಾಮಾಣಿಕ ಪ್ರಯತ್ನವನ್ನು ನೇತಾರರು ಮಾಡಬೇಕು' ಎಂದು ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದಲ್ಲಿ ಶುಕ್ರವಾರ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಚಿಂತನಾ ಸಪ್ತ ಹಾಗೂ ಶಿರಸಂಗಿ ಲಿಂಗರಾಜ ದೇಸಾಯಿ ಸಭಾಭವನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಬಸವಣ್ಣ ಸ್ವಾಮಿದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಸ್ಥಾನಮಾನ ತಂದುಕೊಡಲು ಈ ಹಿಂದೆ ಹೋರಾಟ ನಡೆಸಿತ್ತು' ಎಂದರು.

'ಸರ್ಕಾರವು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಸ್ವಾಗತಾರ್ಹ. ಸಾಂಸ್ಕೃತಿಕ ನಾಯಕರ ತತ್ವಗಳನ್ನು ಪಠ್ಯಗಳಲ್ಲಿ ಅಳವಡಿಸಿ ಶಾಲಾ ಮಕ್ಕಳಿಗೆ ತಲುಪಿಸಬೇಕು. ಪ್ರತಿ ಜಿಲ್ಲೆಯಲ್ಲೂ ಬಸವ ಭವನ ನಿರ್ಮಿಸಬೇಕು. ಅಲ್ಲಿ ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮ ನಿರಂತರವಾಗಿ ನಡೆಸಲು ವ್ಯವಸ್ಥೆ ಮಾಡಬೇಕು' ಎಂದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, 'ಜಾತಿರಹಿತ ಲಿಂಗಾಯತ ಧರ್ಮವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಬಸವ ತತ್ವ ಜಾಗತಿಕ ಧರ್ಮವಾಗಬೇಕು, ಬಸವ ಸಂಸ್ಕೃತಿ ಜಾಗತಿಕ ಸಂಸ್ಕೃತಿಯಾಗಬೇಕು' ಎಂದರು.

'ಸಮಾಜದ ಎಲ್ಲ ಪಂಗಡಗಳು ಒಗ್ಗೂಡಬೇಕು ಎಂಬುದು ವೀರಶೈವ ಮಹಾಸಭಾ ಉದ್ದೇಶ. ಧರ್ಮ ಕಾಲಂನಲ್ಲಿ ಲಿಂಗಾಯತ ಅಥವಾ ವೀರಶೈವ ಎಂದು, ಜಾತಿ ಕಾಲಂನಲ್ಲಿ ಅವರ ಜಾತಿ ನಮೂದಿಸಬೇಕು ಎಂದು ದಾವಣಗೆರೆಯಲ್ಲಿ ನಡೆದ ವೀರಶೈವ ಮಹಾಧಿವೇಶನದಲ್ಲಿ ನಿರ್ಣಯಿಸಿದ್ದು ಸಂತಸದ ಸಂಗತಿ. ಕುಂಬಾರ, ಹೂಗಾರ ಮೊದಲಾದ ಎಲ್ಲ ಲಿಂಗಾಯತ ಸಣ್ಣ ಪಂಗಡಗಳು, ಉತ್ತರ, ಮಧ್ಯ, ದಕ್ಷಿಣ ಕರ್ನಾಟಕದ ಎಲ್ಲರೂ ಒಗ್ಗೂಡಬೇಕು. ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ಹೇಳಿದರು.

ಭವಾನಿ ರೇವಣ್ಣ ಅರ್ಜಿ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಕ್ಕೆ ಗುರಿಯಾಗಿ ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ತಾಯಿ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಪೂರ್ಣಗೊಳಿಸಿದ್ದು, ಆದೇಶ ಕಾಯ್ದಿರಿಸಿದೆ.

ಏತನ್ಮಧ್ಯೆ, 'ತೀರ್ಪು ಪ್ರಕಟವಾಗುವ ತನಕ ಭವಾನಿ ಅವರಿಗೆ ನೀಡಲಾಗಿರುವ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ಮುಂದುವರಿಯಲಿದೆ' ಎಂದು ಆದೇಶಿಸಿದೆ.

ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪೂರ್ಣಗೊಳಿಸಿತು. ಪ್ರಾಸಿಕ್ಯೂಷನ್ ಪರ ಹಿರಿಯ ವಕೀಲ ರವಿವರ್ಮಕುಮಾರ್ ವಾದ ಮಂಡಿಸಿದರು.

ನಕಲಿ ವೈದ್ಯನ ವಿರುದ್ಧ ಪ್ರಕರಣ ದಾಖಲು

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಶಿಶು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಬೆಳಗಾವಿ ಪೊಲೀಸರಿಂದ ಬಂಧಿತನಾಗಿರುವ ಇಲ್ಲಿಯ ಸೋಮವಾರಪೇಟೆಯ ಅಬ್ದುಲ್ ಗಫಾರ್ ಲಾಡಖಾನ್ ವಿರುದ್ಧ ಕಿತ್ತೂರು ಪೊಲೀಸ್ ಠಾಣೆಯಲ್ಲೂ ಗುರುವಾರ ಪ್ರಕರಣ ದಾಖಲಾಗಿದೆ.

'ಅಧಿಕೃತ ವೈದ್ಯಕೀಯ ಪದವಿ ದಾಖಲಾತಿ ಪಡೆಯದೆ ಅಲೋಪತಿ ವೈದ್ಯ ಪದ್ಧತಿ ಪ್ರಕಾರ ವೈದ್ಯ ವೃತ್ತಿ ಮಾಡುತ್ತಿದ್ದ, ತನ್ನ ಬೆಂಬಲಿಗರ ಜತೆ ಸೇರಿ ಅಕ್ರಮವಾಗಿ ಗರ್ಭಪಾತ ಮಾಡಿಸುತ್ತಿದ್ದ, ಅದನ್ನು ಕಿತ್ತೂರು-ಹಿಂಡೊಳ್ಳಿ ಮಾರ್ಗದಲ್ಲಿ ಬರುವ ತೋಟದಲ್ಲಿ ಮುಚ್ಚಿ ಹಾಕಿ ನಾಶ ಪಡಿಸುತ್ತಿದ್ದ' ಎಂದು ಆರೋಪಿಸಿ ತಾಲ್ಲೂಕು ವೈದ್ಯಾಧಿಕಾರಿ ಸಂಜಯ ಸಿದ್ದಣ್ಣವರ ಕಿತ್ತೂರು ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ.

TUNGABHADRA BOARD: TB DAM

e-Procurement Long Term Tender Notice IFB Nos.94/2024-25 Dt.14.06.2024 Tender for the work of "Expression of Interest (EOI) for Lease - Develop - Operate-Transfer basis of Fish Farm, Ice plant, and Fisheries rights of Tungabhadra Reservoir" is invited in respect of Fisheries Wing, TB Board, TB Dam through `e-Procurement'.

Bid Document downloading Start Date & Time:	15.06.2024 at 11:00 AM
Bid Document downloading End Date & Time:	01.07.2024 at 3:00 PM
Bid Submission End Date & Time:	01.07.2024 at 5:30 PM
Pre Bid Meeting:	20.06.2024 at 11.00 AM
Date of opening of PQ Stage:	02.07.2024 at 11:00 AM
Date of opening of Commercial Stage*:	04.07.2024 at 11:00 AM
Date of opening of Commercial Stage:	04.07.2024 at 3:00 PM

Further details can be seen @ https://tender.apeprocurement.gov.in
*Commencement of E-AuctionPre Bid Meeting Venue : O/o SE, IB., TB Board, TB Dam
08394 - 259114
Fax 08394 - 259167
Superintending Engineer
I.B, TB Board, TB Dam

ಕರ್ನಾಟಕ ಸರ್ಕಾರ ಕೃಷಿ ಇಲಾಖೆ
ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ–577501
ಇ–ಮೇಲ್ ವಿಳಾಸ : jdagricta@yahoo.co.in, ದೂರವಾಣಿ: 08194–222406.
ಸಂ:ಜಕೃನಿ/ಚಿ/ಆಡಳಿತ/ಹೊ.ಗು.ಸೌ/ಟೆಂಡರ್/2024–25 ದಿನಾಂಕ:06–06–2024
ಟೆಂಡರ್ ಪ್ರಕಟಣೆ
2024–25ನೇ ಸಾಲಿಗೆ ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಕಛೇರಿ & ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ–ಟೆಂಡ್ ಕರೆಯಲಾಗಿದೆ. ವಿವರಗಳನ್ನು ಇ–ಪ್ರಕ್ಯೂಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.
ಟೆಂಡರಿಗಿಟ್ಟ ಮೊತ್ತ ಲಕ್ಷ ರೂ.ಗಳಲ್ಲಿ:– ರೂ. 2,17,57,000/– (ರೂ.ಎರಡು ಕೋಟಿ ಹದಿನೇಳು ಲಕ್ಷದ ಐವತ್ತೇಳು ಸಾವಿರಗಳು ಮಾತ್ರ) ಇ.ಎಂ.ಡಿ ಮೊತ್ತ ರೂ.4,35,140/– (ರೂ. ನಾಲ್ಕು ಲಕ್ಷದ ಮೂವತ್ತೈದು ಸಾವಿರದ ಒಂದು ನೂರಾ ನಲವತ್ತು ಮಾತ್ರ) (1) ಟೆಂಡರ್ ಮಾಹಿತಿ ಇ–ಪ್ರಕ್ಯೂಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. (2) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 06.07.2024 ರಂದು ಸಂಜೆ 4.00 ಘಂಟೆ. (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ:08.07.2024 ರಂದು ಬೆಳಿಗ್ಗೆ 11:00 ಘಂಟೆಗೆ ತೆರೆಯಲಾಗುವುದು.
ಷರತ್ತುಗಳು:– ಷರತ್ತುಗಳನ್ನು ಇ– ಪ್ರಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
ವೆಬ್‌ಸೈಟ್ ವಿಳಾಸ : www.kppp.karnataka.gov.in
DIPR/CTA/KSMCA/35/2024-25
ಸಹಿ/– ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029. ದೂ.: 080–29753350
ಇ–ಮೇಲ್: karbuildworkerswelfare@gmail.com
ಸಂಖ್ಯೆ: KBOCWWB/E-Auction/FD-2/CR-04/2024-25 ದಿನಾಂಕ: 14.06.2024
ಇ–ಆಕ್ಷನ್ ಪ್ರಕಟಣೆ
ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non- Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.
ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ ಮೊತ್ತ ರೂ. 600.00 ರಿಂದ 700.00 ಕೋಟಿ (ರೂಪಾಯಿ ಆರು ರಿಂದ ಏಳು ನೂರು ಕೋಟಿ ಮಾತ್ರ) ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable ನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ KPPP ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.
ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 26.06.2024 ಸಂಜೆ 4.00 ರೊಳಗಾಗಿ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಲೆಕ್ಕಾಧಿಕಾರಿ, ಫೋನ್: 080–29753350/54/56, ಫೋನ್: 9164759606 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಜಂಟಿ ಕಾರ್ಯದರ್ಶಿ
ಕ.ಕ.&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಎಲ್‌ಸಿ/346/2024–25

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಸಕಾಅ–1/ಟೆಂಡರ್–07/2024–25 ದಿನಾಂಕ: 13.06.2024
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ಅಂಬೇಡ್ಕರ್ ಭವನದ ಡೈನಿಂಗ್ ಹಾಲ್ ನವೀಕರಣ ಕಾಮಗಾರಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಜಿಲ್ಲೆಗಳಲ್ಲಿ ಕೊಳವೆಬಾವಿ ಅಳವಡಿಸುವ/ದುರಸ್ತಿ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 183, 230/call-2, 222/call-2, 242/call-2, 244/call-2, 227/call-2, 224/call-2, 280, 286, 283, 281, 284, 285, 257, 258, 256, 253, 252, 260, 261, 262, 263, 264, 265, 173, 250, 248, 249, 251, 254, 287, 288, 293, 295, 294, 296, 298, 297, 313, 314, 305, 304, 269, 268, 267, 272, 270, 273 ಹಾಗೂ 274) ಇ–ಪೋರ್ಟಲ್ ಮುಖಾಂತರ ದಿನಾಂಕ: 13.06.2024 ರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 27.06.2024 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು–1
ಕ.ವ.ಶಿ.ಸಂ.ಸಂಘ
DIPR/CP/YC/340/2024-25

ಕಲಬುರಗಿ, ಯಾದಗಿರಿಯಲ್ಲಿ ಮಳೆ



ಸತತ ಮಳೆಯಿಂದಾಗಿ ಭರ್ತಿ ಹಂತ ತಲುಪಿರುವ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಶುಕ್ರವಾರ ಉತ್ತಮ ಮಳೆ ಸುರಿದಿದ್ದು, ಜಿಲ್ಲೆಯ ಜಲಾಶಯಗಳು ಭರ್ತಿಯಾಗುವ ಹಂತಕ್ಕೆ ತಲುಪಿವೆ.

ಕಲಬುರಗಿಯಲ್ಲಿ ಸಂಜೆ ಸುಮಾರು ಅರ್ಧಗಂಟೆ ಬಿರುಸಿನ ಮಳೆಯಾಯಿತು. ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯಕ್ಕೆ 1,500 ಕ್ಯುಸೆಕ್ ಒಳ ಹರಿವು ಇದ್ದು, ಭರ್ತಿಯಾಗಲು ಒಂದು ಮೀಟರ್ ಮಾತ್ರ ಬಾಕಿ ಇದೆ. ಇದೇ ಪ್ರಮಾಣದಲ್ಲಿ ಒಳಹರಿವು ಇದ್ದರೆ ಶನಿವಾರ ಸಂಜೆ ವೇಳೆಗೆ ಜಲಾಶಯದಿಂದ ನೀರನ್ನು ನದಿಗೆ ಹರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ, ಸುರಪುರ, ಸೈದಾಪುರ, ಯರಗೋಳ, ಕೆಂಭಾವಿಯಲ್ಲಿ ಉತ್ತಮ ಮಳೆಯಾಗಿದೆ.

ರಾಯಚೂರು ಜಿಲ್ಲೆಯ ಕವಿತಾಳ, ಸಿರಿವಾರ, ಮಾನ್ವಿ, ಮಸ್ಕಿ ಹಾಗೂ ಹಟ್ಟಿ ಚಿನ್ನದಗಣಿ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: 1) No: EE/ UTP/PB-3/2024-25/426 Dated: 13-06-2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ (KPPP ಪೋರ್ಟಲ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPPP–ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರ (1) ರನ್ವಯ ಒಟ್ಟು ರೂ 99.70ಲಕ್ಷ (ಜಿಎಸ್‌ಟಿ ಹೊರತುಪಡಿಸಿ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:14–06–2024 to 24–06–2024 ರ ಸಂಜೆ 4.30 ರ ವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 19–06–2024ಸಂಜೆ 5.00ರ ವರೆಗೆ ಇರುತ್ತದೆ. ದಿನಾಂಕ 25–06–2024ರಂದು ಸಂಜೆ 5.00 ಗಂಟೆಗೆ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPPP–ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
99

ಆ.30ರಿಂದ ರಿಚ್ಮಂಡ್ ನಗರದಲ್ಲಿ 'ಅಕ್ಕ' ಸಮ್ಮೇಳನ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ವರ್ಷದ ಬಳಿಕ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನವು ಅಮೆರಿಕದ ವರ್ಜೀನಿಯಾ ರಾಜ್ಯದ ರಿಚ್ಮಂಡ್ ನಗರದಲ್ಲಿ ಆಗಸ್ಟ್ 30, 31 ಹಾಗೂ ಸೆಪ್ಟೆಂಬರ್ 1ರಂದು ನಡೆಯಲಿದೆ.

42 ಅಮೆರಿಕದ ಕನ್ನಡ ಸಂಘಗಳು ಸೇರಿ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿವೆ ಎಂದು 'ಅಮೆರಿಕ ಕನ್ನಡ ಕೂಟಗಳ ಆಗರ(ಅಕ್ಕ)'ದ ಅಧ್ಯಕ್ಷ ರವಿ ಬೋರೇಗೌಡ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ಫ್ಯಾಶನ್ ಶೋ, ಸಾಹಿತ್ಯ ಗೋಷ್ಠಿ, ಬಿಸಿನೆಸ್ ಫೋರಂ, ನಾಡಿನ ವಿಶಿಷ್ಟ ಖಾದ್ಯಗಳ ಭೋಜನ, ವಿಜಯ್ ಪ್ರಕಾಶ್ ಹಾಗೂ ರಾಜೇಶ್ ಕೃಷ್ಣನ್ ಮುಂತಾದ ಕಲಾವಿದರಿಂದ ಸಂಗೀತ ಕಾರ್ಯಕ್ರಮ, ನಟ ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಸಲ್ಲಿಸುವ ಸಂಗೀತ ಸಂಜೆ, ನಾಡಿನ ಪಾರಂಪರಿಕ ನೃತ್ಯ ಶೈಲಿಗಳಾದ ಡೊಳ್ಳು ಕುಣಿತ, ಯಕ್ಷಗಾನ ಪ್ರದರ್ಶನ, ಕನ್ನಡ ನಾಟಕಗಳ ಪ್ರದರ್ಶನ ಹೀಗೆ ವಿವಿಧ ಕಾರ್ಯಕ್ರಮಗಳನ್ನು ಒಕ್ಕೂಟವು ಆಯೋಜಿಸಿದೆ ಎಂದು ವಿವರಿಸಿದರು.

'ಅಕ್ಕ' ಸಮ್ಮೇಳನಕ್ಕೆ ಕರ್ನಾಟಕದ ವಿವಿಧ ಇಲಾಖೆಗಳ ಸಚಿವರು, ಆಧ್ಯಾತ್ಮಿಕ ಕ್ಷೇತ್ರದ ಪ್ರಮುಖರು, ಚಿತ್ರ ತಾರೆಯರು, ಸಾಹಿತಿಗಳು, ಉದ್ಯಮಿಗಳು ಭಾಗವಹಿಸಲಿದ್ದಾರೆ. ₹20 ಕೋಟಿಯಿಂದ ₹25 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

Infosys
Navigate your next
Infosys Limited
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com
NOTICE
Notice is hereby given that a meeting of the Board of Directors of the Company will be held on Wednesday and Thursday, July 17 and 18, 2024 inter alia to:
1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter ending June 30, 2024;
2. Approve and take on record the audited standalone financial results of the Company as per INDAS for the quarter ending June 30, 2024;
3. Approve and take on record the audited financial statements of the Company and its subsidiaries as per INDAS and IFRS for the quarter ending June 30, 2024.

The financial results will be presented to the Board of Directors on July 18, 2024 for their approval.

The details will be made available on the website of the Company- www.infosys.com

For Infosys Limited
Sd/-
A.G.S. Manikantha
Company Secretary
June 14, 2024
Bengaluru, India

ಆರೋಗ್ಯ ಇಲಾಖೆಗೆ ಹರ್ಷ ಗುಪ್ತ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಟಿ.ಕೆ. ಅನಿಲ್‌ಕುಮಾರ್ ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ.

ಹರ್ಷ ಗುಪ್ತ ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಉಳಿದ ಅಧಿಕಾರಿಗಳ ವರ್ಗಾವಣೆ ವಿವರ ಹೀಗಿದೆ: ವಿಪುಲ್ ಬನ್ಸಾಲ್– ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ. ರಮಣದೀಪ್ ಚೌಧರಿ– ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ. ಕುಮಾರ್ ಟಿ.ಎಚ್.ಎಂ–ವ್ಯವಸ್ಥಾಪಕ ನಿರ್ದೇಶಕ, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಹಾಗೂ ಅಭಿವೃದ್ಧಿ ಆಯುಕ್ತ, ಜವಳಿ ಅಭಿವೃದ್ಧಿ ಇಲಾಖೆ.

ಸುಧಾ, ಮಯೂರ ಓದಿ

GOVERNMENT OF KARNATAKA
HEALTH AND FAMILY WELFARE DEPARTMENT ENGINEERING WING
Office of the, Executive Engineer, H & F W D Engg., Division, Fort Road, Dharwad – 580 008.
Phone No: 0836 – 2955800 (E-mail:eehfwedvndwd1@gmail.com)
No: EE/H&FW Engg./Div/Dwd/Tender/Notification-Call-3/ 128 /2024-25 Date: 11.06.2024
SHORT TERM TENDER NOTIFICATION – 3rd CALL
The Executive Engineer, H&FWD, Engg., Division, Dharwad invites tender from contractors registered in KPWD in Single cover and double cover system as per KTPP Act 1999 & Rules 2000 through KPP Portal for the following works.

Sl. No	Name of work	Est. Amount (Rs. in lakhs)	EMD amount (Rs. in lakhs)	Class of contractor	Period of completion (including monsoon)	Category of contractor	Remarks
	Head of Account: 2210-01-110-4-06-059 & 200						
1	Up-gradation of basic infrastructure facilities to PHC at Chittakula in Karwar Tq., U.K. District. (Pac-6)	21.89	0.25	Class III & above	2 Months	ST	3rd Call
2	Up-gradation of basic infrastructure facilities to PHC at Akkol in Chikkodi Tq., Belagavi District. (Pac-12)	36.50	0.37	Class III & above	2 Months	ST	3rd Call
	H/A: 4210-01-110-1-01-133 (SDP)						
3	Up-gradation of infrastructure facilities to TLH at Haliyal in U.K. District	59.95	0.60	Class III & above	3 Months	ST	3rd Call

Calendar events: Last date for receipt of tender: 21.06.2024 up to 16.00 hrs
Date of opening of technical bid: 24.06.2024 up to 16.30 hrs
Date of opening of financial bid: 25.06.2024 up to 11.00 hrs

The tender details can be downloaded from the KPP platform (www.kppp.karnataka.gov.in) Tenders shall be submitted electronically, EMD, Tender Processing Fee shall also be paid electronically. Interested contractors shall register on the KPP platform to participate in this tender.

NOTE:- (1) All the rights are reserved by the under signed for postponement or cancellation of entire Tender process, rejection of bids/individual bid etc., without assigning any reason. (2) Henceforth, any changes in the schedule will not be published through newspapers and further changes in respect of this tender notification will be uploaded on KPP portal only.

Sd/- Executive Engineer,
H&FWD Engg. Division, Dharwad.
DIPR/Dwd/42/DeshpandePublicity/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ. ಬಳ್ಳಾರಿ
(ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಸರ್ಕಾರಿ ಬಾಲಕರ ಬಾಲಮಂದಿರ(ಹಿರಿಯ) ಆವರಣ ಕಂಟೋನ್‌ಮೆಂಟ್ ಬಳ್ಳಾರಿ–583104. ದೂ:08392–294473, dcpuballari@gmail.com
ಸಂ: ಜಿಮರಘ/ಸಿಬ್ಬಂದಿ/ಡಿ–ಗ್ರೂಪ್ ಟೆಂಡರ್/ಸಿಆರ್/2024–25 ದಿನಾಂಕ:11/06/2024
:: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::
2024–25 ನೇ ಸಾಲಿಗೆ ಬಳ್ಳಾರಿ ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ/ ಮಕ್ಕಳ ಸಹಾಯವಾಣಿ–1098/ಸರ್ಕಾರಿ ಬಾಲಕರ/ಬಾಲಕಿಯರ/ಬುದ್ಧಿಮಾಂದ್ಯ ಬಾಲಕರ ಬಾಲಮಂದಿರ/ವೀಕ್ಷಣಾಲಯ/ಅಮೂಲ್ಯ (ಜಿ) ವಿಶೇಷ ದತ್ತು ಸಂಸ್ಥೆ/ರಾಜ್ಯ ಮಹಿಳಾ ನಿಲಯ/ ಅಪರಾಧಿಗಳ ಪರಿವೀಕ್ಷಣಾಧಿನಿಂಯುವು, ಬಳ್ಳಾರಿ ಸಂಸ್ಥೆಗಳಲ್ಲಿ ಆಪ್ತಸಮಾಲೋಚಕರು, ಗೃಹಪಾಲಕರು, ಡಿ–ವೃಂದದ ಖಾಲಿ ಇರುವ ಹುದ್ದೆಗಳನ್ನು ಮತ್ತು ಕಂಪ್ಯೂಟರ್ ಆಪರೇಟರ್‌ನ್ನು ಹೊರ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಅರ್ಹ ಹಾಗೂ ಅಂಗೀಕೃತ ಏಜೆನ್ಸಿಗಳು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ. 1.ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂ: ಜಿಮರಘ/ಸಿಬ್ಬಂದಿ/ಡಿ–ಗ್ರೂಪ್ ಟೆಂಡರ್/ಸಿಆರ್/2024–25 ದಿನಾಂಕ:: 11/06/2024. 2.ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ.1,69,44,931/–(ಒಂದು ಕೋಟಿ ಅರವತ್ತೊಂಭತ್ತು ಲಕ್ಷ ನಲವತ್ತನಾಲ್ಕು ಸಾವಿರದ ಒಂಬೈನೂರ ಮೂವತ್ತೊಂದು ರೂಪಾಯಿಗಳು ಮಾತ್ರ). 3.ಟೆಂಡರ್‌ದಾರರು ಆನ್‌ಲೈನ್ ಮೂಲಕ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 10/07/2024 ಕಛೇರಿ ವೇಳೆಯಲ್ಲಿ ಸಮಯ 5.00 ಗಂಟೆ. 4.ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ ದಿನಾಂಕ: 19/06/2024 ಬೆಳಿಗ್ಗೆ 11.00 ಗಂಟೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ,. ಬಳ್ಳಾರಿ. 5.ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ ದಿನಾಂಕ: 12/07/2024ಬೆಳಿಗ್ಗೆ 11.00 ಗಂಟೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ,.ಬಳ್ಳಾರಿ. 6.ಆರ್ಥಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ ದಿನಾಂಕ: 15/07/2024ಬೆಳಿಗ್ಗೆ 11.00 ಗಂಟೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ,.ಬಳ್ಳಾರಿ. 7.ಇ.ಎಮ್.ಡಿ ಮೊತ್ತ 338.898 (ಮೂರು ಲಕ್ಷ ಮೂವತ್ತೆಂಟು ಸಾವಿರದ ಎಂಟುನೂರ ತೊಂಭತ್ತೆಂಟು ರೂಪಾಯಿಗಳು ಮಾತ್ರ). 8.ಟೆಂಡರ್ ಬಗ್ಗೆ ಮಾಹಿತಿ ಪಡೆಯಬೇಕಾದಲ್ಲಿ ಅಧಿಕಾರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ,. ಬಳ್ಳಾರಿ. 9.E-Tender ಬಗ್ಗೆ ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬಹುದಾದ ಇ–ಮೇಲ್ ವಿಳಾಸ. http://kppp.karnataka.govt.in
ಹೆಚ್ಚಿನ ಮಾಹಿತಿಗಾಗಿ : ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಳ್ಳಾರಿರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.
Website:www.kppp.karnataka.gov.inನಲ್ಲಿಪಡೆಯಬಹುದಾಗಿದೆ.
ಟೆಂಡರ್ ಅರ್ಜಿ ದಿನಾಂಕವನ್ನು ವಿಸ್ತರಿಸುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತದೆ.
ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/74/ಕೆಎಸ್‌ಎಂಸಿಎ/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ: ದಾವಣಗೆರೆ
ಸಂ: ಕರಾಸಾ/ದಾವಿ/ಸಂ/ವಾ/742/2024–25 ದಿನಾಂಕ:14.06.2024
ಟೆಂಡರ್ ಪ್ರಕಟಣೆ ಸಂ: 03
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕ.ರಾ.ರ.ಸಾ ನಿಗಮದ ವ್ಯಾಪ್ತಿಯಲ್ಲಿರುವ ದಾವಣಗೆರೆ ವಿಭಾಗದ ವ್ಯಾಪ್ತಿಗೆ ಒಳಪಡುವ 04 (ತಾತ್ಕಾಲಿಕ ದಾವಣಗೆರೆ ಬಸ್ ನಿಲ್ದಾಣ, ಜಗಳೂರು, ಹರಿಹರ ಮತ್ತು ಮಲೇಬೆನ್ನೂರು ಬಸ್ ನಿಲ್ದಾಣ) ಬಸ್ ನಿಲ್ದಾಣಗಳ ಮತ್ತು ದಾವಣಗೆರೆ ಘಟಕ–1, ದಾವಣಗೆರೆ ಘಟಕ–2, ಹರಿಹರ ಘಟಕ ಹಾಗೂ ವಿಭಾಗೀಯ ಕಾರ್ಯಗಾರ ಶೌಚಾಲಯಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ/ಯಾಂತ್ರೀಕೃತರಹಿತ ಹೌಸ್ ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾಗುತ್ತಿಗೆದಾರರಿಂದ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.
ಬಿಡ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 14.06.2024 ರಿಂದ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 04.07.2024ರ ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.07.2024ರ ಬೆಳಿಗ್ಗೆ 11:00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.07.2024ರ ಬೆಳಿಗ್ಗೆ 11:00 ಗಂಟೆಗೆ. ಅರ್ಜಿದಾರರು ನಿಗಧಿಪಡಿಸಿರುವ ಅರ್ಜಿ ಶುಲ್ಕ ಅನ್ವಯಿಸುವ ಜೆಎಸ್‌ಟಿ ಹಾಗೂ ಇಎಂಡಿ ಮೊತ್ತದ ಮೂಲ ಡಿಡಿ ಗಳನ್ನು ಇ–ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲಾತಿಗಳೊಂದಿಗೆ ಕಛೇರಿ ಅವಧಿಯಲ್ಲಿ ದಾವಣಗೆರೆ ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ: 05.07.2024 ಮತ್ತು ದಿನಾಂಕ: 06.07.2024 ರಂದು ಕಛೇರಿ ಸಮಯದಲ್ಲಿ.
1) ಅರ್ಹ ತಾಂತ್ರಿಕ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುತ್ತದೆ. 2) ಎಲ್ಲಾ ನಿಯಮ ನಿಬಂಧನೆಗಳನ್ನು ಅನುಬಂಧಗಳಲ್ಲಿ ತಿಳಿಸಲಾಗಿರುತ್ತದೆ. ಸದರಿ ನಿಯಮ ನಿಬಂಧನೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸದರಿ ದಾಖಲಾತಿಗಳನ್ನು ಇ–ಪ್ರೊಕ್ಯೂರ್ಮೆಂಟ್ ವೆಬ್‌ಸೈಟ್ https://kppp.karnataka.gov.in" ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ: 14.06.2024 ರಿಂದ ಡೌನ್‌ಲೋಡ್ ಮಾಡಿಕೊಂಡು ಬಿಡ್‌ದಾರರು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. 3) ಸದರಿ ಟೆಂಡರ್ ಅನ್ನು ಅಂಗೀಕರಿಸುವ / ನಿರಾಕರಿಸುವ / ಮಾರ್ಪಾಡು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ. 4) ಬಿಡ್ಡುದಾರರು ಅಪ್‌ಲೋಡ್‌ಗೊಂಡಿರುವ ಅನುಬಂಧಗಳ ನಿಬಂಧನೆಗಳನ್ನು ತಿಳಿದುಕೊಂಡು ಪ್ರತಿ ಅನುಬಂಧಗಳಿಗೆ ತಮ್ಮ ಸಹಿ ನೀಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: ವಿಭಾಗೀಯ ಅಧಿಕಾರಿ ಮೊ: 7760990452, ಸಹಾಯಕ ಸಂಚಾರ ಅಧೀಕ್ಷಕರು ಮೊ: 7022030183
ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.
ವಾಸಾಸಂಇ/ವಾಪ್ರ/ಜೆಎ/348/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:
ದಾವಣಗೆರೆ ವಿಭಾಗ: ದಾವಣಗೆರೆ.
ಸಂಖ್ಯೆ: ಕರಾಸಾ/ದಾವಿ/ಸಂ/ವಾ/743/2024–25 ದಿನಾಂಕ: 14.06.2024
ಇ–ಟೆಂಡರ್ ಪ್ರಕಟಣೆ ಸಂಖ್ಯೆ: 04 (ಕೆಪಿಪಿ ಪೋರ್ಟಲ್ ಮೂಲಕ)
ಕ.ರಾ.ರ.ಸಾ. ನಿಗಮದ ವ್ಯಾಪ್ತಿಯಲ್ಲಿರುವ ದಾವಣಗೆರೆ ವಿಭಾಗದ ವ್ಯಾಪ್ತಿಗೆ ಒಳಪಡುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ, ಬೇತೂರು ರೋಡ್ ಬಸ್ ನಿಲ್ದಾಣಗಳ ಮತ್ತು ವಿಭಾಗೀಯ ಕಛೇರಿಯ ಶೌಚಾಲಯಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ / ಯಾಂತ್ರೀಕೃತ ರಹಿತ ಹೌಸ್‌ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.
1) ಬಿಡ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 14.06.2024. 2) ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 04.07.2024, 17.00 ಗಂಟೆ. 3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 08.07.2024, 11.00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.07.2024, 11.00 ಗಂಟೆಗೆ. 5) ಅರ್ಜಿದಾರರು ನಿಗಧಿಪಡಿಸಿರುವ ಅರ್ಜಿ ಶುಲ್ಕ ಅನ್ವಯಿಸುವ ಜಿಎಸ್‌ಟಿ ಹಾಗೂ ಇ.ಎಂ.ಡಿ ಮೊತ್ತದ ಮೂಲ ಡಿ.ಡಿ.ಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲೆಗಳೊಂದಿಗೆ ಕಛೇರಿ ಅವಧಿಯಲ್ಲಿ ದಾವಣಗೆರೆ ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ: 05.07.2024 ಮತ್ತು ದಿನಾಂಕ: 06.07.2024 ರಂದು ಕಛೇರಿ ಸಮಯದಲ್ಲಿ.
1. ಅರ್ಹ ತಾಂತ್ರಿಕ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುತ್ತದೆ. 2. ಎಲ್ಲಾ ನಿಯಮ ನಿಬಂಧನೆಗಳನ್ನು ಅನುಬಂಧಗಳಲ್ಲಿ ತಿಳಿಸಲಾಗಿರುತ್ತದೆ. ಸದರಿ ನಿಯಮ ನಿಬಂಧನೆಗಳನ್ನು "ಇ" ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸದರಿ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ: 14.06.2024 ರಿಂದ ಡೌನ್‌ಲೋಡ್ ಮಾಡಿಕೊಂಡು ಬಿಡ್‌ದಾರರು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. 3. ಸದರಿ ಟೆಂಡರ್‌ನ್ನು ಅಂಗೀಕರಿಸುವ / ನಿರಾಕರಿಸುವ / ಮಾರ್ಪಾಡು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ. 4. ಬಿಡ್ಡುದಾರರು ಅಪ್‌ಲೋಡ್‌ಗೊಂಡಿರುವ ಅನುಬಂಧಗಳ ನಿಬಂಧನೆಗಳನ್ನು ತಿಳಿದುಕೊಂಡು ಪ್ರತಿ ಅನುಬಂಧಗಳಿಗೆ ತಮ್ಮ ಸಹಿ ನೀಡಬೇಕಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ ಸಂಪರ್ಕಿಸಿ: ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ –7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.
ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ
ವಾಸಾಸಂಇ/ವಾ.ಪ್ರ/349/ಎಂಎಎ/24–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 01/2024–25, ದಿ: 13.06.2024
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–2, 3 ಮತ್ತು 4ರ ರೀತ್ಯ ಟೆಂಡರ್ ಆಹ್ವಾನಿಸಲಾಗಿದ್ದು, ಇದರಲ್ಲಿ ಒಟ್ಟು 15 ಕಾಮಗಾರಿಗಳು ಇದ್ದು ಇವುಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.75.00 ಲಕ್ಷಗಳು, ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.175.00 ಲಕ್ಷಗಳಾಗಿದ್ದು, ಕನಿಷ್ಠ ಇ.ಎಂ.ಡಿ ಮೊತ್ತ ರೂ.0.75 ಲಕ್ಷಗಳು, ಗರಿಷ್ಠ 2.63 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನು ಗುಣವಾಗಿ ಕರೆಯಲಾಗಿದ್ದು, "ಕೆ.ಪಿ.ಪಿ.ಪಿ. ಪೋರ್ಟಲ್" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: ದಿ: 13.06.2024 – 17–00 ಪಿ.ಎಂ ಗಂಟೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 13.06.2024 – 10–00 ಎ.ಎಂ ರಿಂದ 27.06.2024 – 17–00 ಪಿ.ಎಂ ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿ: 29.06.2024ರ – 11–00 ಎ.ಎಂ ಗಂಟೆ ನಂತರ. ಆರ್ಥಿಕ ಬಿಡ್ಡ್ ತೆರೆಯುವ ದಿ: 01.07.2024ರ – 11–00 ಎ.ಎಂ ಗಂಟೆ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in" ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ: ಸದರಿ ಕಾಮಗಾರಿಗಳ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.
DIPR/DDMYS-77/KSMCA-60/2024-25

ರೇಣುಕಸ್ವಾಮಿ ಕೊಲೆ ಪ್ರಕರಣ • ಜನರ ಗಮನ ಬೇರೆಡೆ ಸೆಳೆಯಲು ಪೊಲೀಸರ ಹರಸಾಹಸ

ಚಿತ್ರದುರ್ಗದಲ್ಲಿ ತಡರಾತ್ರಿ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣ ಸಂಬಂಧ ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಶುಕ್ರವಾರ ಬೆಳಗಿನಜಾವ ಆರೋಪಿಗಳ ಜೊತೆ ನಗರಕ್ಕೆ ಭೇಟಿ ನೀಡಿ ವಿವಿಧ ಸ್ಥಳಗಳಲ್ಲಿ ಮಹಜರು ನಡೆಸಿದರು. 250ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಅವರಿಗೆ ಭದ್ರತೆ ನೀಡಿದ್ದರು.

‘ಪೊಲೀಸರು ಆರೋಪಿಗಳೊಂದಿಗೆ ಬರುತ್ತಾರೆ, ಪ್ರಮುಖ ಆರೋಪಿ, ನಟ ದರ್ಶನ್ ಸಹ ಇರುತ್ತಾರೆ’ ಎಂಬ ಸುದ್ದಿಗಳು ಬೆಳಿಗ್ಗೆಯಿಂದಲೂ ಹರಿದಾಡುತ್ತಿದ್ದವು. ಇದರಿಂದಾಗಿ ನಗರದ ವಿವಿಧೆಡೆ ಅಪಾರ ಸಂಖ್ಯೆಯ ಜನರು ಸೇರಿದ್ದರು. ಪೊಲೀಸರನ್ನು ಭದ್ರತೆಗೆ ನಿಯೋಜಿಸಿದ್ದರೂ ರಾತ್ರಿವರೆಗೂ ಬೆಂಗಳೂರು ಪೊಲೀಸರು ನಗರ ಪ್ರವೇಶಿಸಲಿಲ್ಲ.

ನಗರದಿಂದ ಹೊರಗೆ ಇದ್ದಾರೆ ಎಂಬ ಮಾಹಿತಿ ಬೆಳಿಗ್ಗೆಯಿಂದಲೂ ಇತ್ತು. ಜನರ ಗಮನ ಬೇರೆಡೆ ಸೆಳೆಯುವ ಉದ್ದೇಶದಿಂದ ಮಹಜರು ಪ್ರಕ್ರಿಯೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ ಎಂಬ ಮಾಹಿತಿ ನೀಡಲಾಯಿತು. ಶುಕ್ರವಾರ ಬೆಳಗಿನಜಾವ 2 ಗಂಟೆ ಸುಮಾರಿಗೆ ನಗರಕ್ಕೆ ಬಂದ ಪೊಲೀಸರು ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿದರು.

ರೇಣುಕಸ್ವಾಮಿಯನ್ನು ಬೆಂಗಳೂರಿಗೆ ಕರೆದೊಯ್ದ 4ನೇ ಆರೋಪಿ, ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ ರಾಘವೇಂದ್ರ ಹಾಗೂ ಇತರರ ಜತೆ ನಗರದ ವಿವಿಧ ಸ್ಥಳಗಳನ್ನು ಪರಿಶೀಲಿಸಲಾಯಿತು. ರೇಣುಕಸ್ವಾಮಿ ಕೆಲಸ ಮಾಡುತ್ತಿದ್ದ ಔಷಧ ಮಾರಾಟ ಮಳಿಗೆ, ಬೈಕ್ ನಿಲ್ಲಿಸಿದ್ದ ಪೆಟ್ರೋಲ್ ಬಂಕ್ ಸಮೀಪದ ಜಾಗ, ಕಾರಿಗೆ ಹತ್ತಿಸಿಕೊಂಡ ಚಳ್ಳಕೆರೆ ಗೇಟ್ ಹಾಗೂ ತುರುವನೂರು ರಸ್ತೆಯಲ್ಲಿರುವ ರೇಣುಕಸ್ವಾಮಿ ಅವರ ನಿವಾಸದ ಬಳಿ ಪೊಲೀಸರು ಪರಿಶೀಲನೆ ನಡೆಸಿದರು. ಪಂಚರ ಸಮ್ಮುಖದಲ್ಲಿ ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿ ಸಹಿ ಪಡೆಯಲಾಯಿತು.

ರೇಣುಕಸ್ವಾಮಿ ಕೊಲೆ ಪ್ರಕರಣ ಸಂಬಂಧ ಬೆಂಗಳೂರು, ಕಾಮಾಕ್ಷಿ ಠಾಣೆ ಪೊಲೀಸರು ಗುರುವಾರ ತಡರಾತ್ರಿ ವೇಳೆ ಚಿತ್ರದುರ್ಗದ ವಿವಿಧೆಡೆ ಆರೋಪಿಗಳೊಂದಿಗೆ ಮಹಜರು ಪ್ರಕ್ರಿಯೆ ನಡೆಸಿದರು

ಆರೋಪಿಯ ತಂದೆಗೆ ಹೃದಯಾಘಾತ: ಸಾವು

7ನೇ ಆರೋಪಿ ಅನು ಅಲಿಯಾಸ್ ಅನುಕುಮಾರ್ ಪೊಲೀಸ್ ವಶಕ್ಕೆ ಒಪ್ಪಿಸಿದ ಸುದ್ದಿ ತಿಳಿದ ಬೆನ್ನಲ್ಲೇ ಆತನ ತಂದೆ ಚಂದ್ರಣ್ಣ ಶುಕ್ರವಾರ ಸಂಜೆ (60) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪುತ್ರ ಭಾಗಿಯಾಗಿದ್ದಾನೆ ಎಂಬ ವಿಷಯ ತಿಳಿದ ಚಂದ್ರಣ್ಣ ನೊಂದುಕೊಂಡಿದ್ದರು. ಶುಕ್ರವಾರ ಮಗನ ಶರಣಾಗತಿ ವಿಷಯ ತಿಳಿದು ಆಘಾತಕ್ಕೆ ಒಳಗಾಗಿದ್ದರು. ‘ನನ್ನ ಮಗ ಕೊಲೆಗಾರನಲ್ಲ’ ಎಂದು ಕಣ್ಣೀರು ಹಾಕಿದ್ದರು. ನಗರದ ಸಿಹಿನೀರು ಹೊಂಡ ಬಳಿಯ ತಮ್ಮ ನಿವಾಸದಲ್ಲಿ ಚಂದ್ರಣ್ಣ ಅಸ್ವಸ್ಥರಾದರು. ಆಸ್ಪತ್ರೆಗೆ ಕರೆದೊಯ್ಯುವಾಗ ಅವರು ಮೃತಪಟ್ಟರು.

ಚನ್ನಪಟ್ಟಣ ವಿಧಾನಸಭೆ ಉಪ ಚುನಾವಣೆಯಲ್ಲಿ ಡಿ.ಕೆ. ಸಹೋದರರು ಅಚ್ಚರಿ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸುವುದಾಗಿ ಹೇಳಿದ್ದರು. ಆದರೆ, ಅವರೀಗ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೆ

ಸಿ.ಪಿ.ಯೋಗೇಶ್ವರ, ಬಿಜೆಪಿ ಮುಖಂಡ

ಕೆಲ ಸಚಿವರು ಮತ್ತು ಕಾಂಗ್ರೆಸ್‌ನ ಕೆಲ ಶಾಸಕರ ವರ್ತನೆ ನೋಡಿದರೆ, ತನಿಖೆಗೂ ಮುನ್ನವೇ ನಟ ದರ್ಶನ್ ಅವರನ್ನು ಆರೋಪ ಮುಕ್ತಗೊಳಿಸುವ ಸಂಚು ನಡೆದಿದೆ ಎಂಬ ಅನುಮಾನವಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಆರೋಪಿ ನಟ ದರ್ಶನ್ ಅವರನ್ನು ಕೃಷಿ ರಾಯಭಾರಿಯಾಗಿ ಮುಂದುವರಿಸಲು ಸಾಧ್ಯವಿಲ್ಲ. ಪೊಲೀಸ್ ಠಾಣೆಯಲ್ಲಿ ಅವರಿಗೆ ವಿಐಪಿ ಸೌಕರ್ಯ ನೀಡಿಲ್ಲ. ಆರೋಪ ಸಾಬೀತಾದರೆ ಶಿಕ್ಷೆಯಾಗುತ್ತದೆ.

ಎಂ.ಬಿ.ಪಾಟೀಲ, ಸಚಿವ

ಮತ್ತಿಬ್ಬರು ಆರೋಪಿಗಳ ಶರಣಾಗತಿ

ಅನುಕುಮಾರ್

ಜಗದೀಶ್

ರೇಣುಕಸ್ವಾಮಿ ಕೊಲೆ ಪ್ರಕರಣದ 6ನೇ ಆರೋಪಿ, ನಗರದ ರೈಲ್ವೆ ಸ್ಟೇಷನ್ ಬಡಾವಣೆ ನಿವಾಸಿ ಜಗದೀಶ್ ಅಲಿಯಾಸ್ ಜಗ್ಗ, 7ನೇ ಆರೋಪಿ ಅನು ಅಲಿಯಾಸ್ ಅನುಕುಮಾರ್ ಶುಕ್ರವಾರ ಬೆಳಿಗ್ಗೆ ಪೊಲೀಸರೆದುರು ಶರಣಾದರು. ಇಬ್ಬರೂ ಆರೋಪಿಗಳನ್ನು ಬೆಂಗಳೂರಿನ ಕಾಮಾಕ್ಷಿ ಪಾಳ್ಯ ಪೊಲೀಸರಿಗೆ ಹಸ್ತಾಂತರ ಮಾಡಲಾಯಿತು.

ಚಿತ್ರದುರ್ಗ ಉಪ ವಿಭಾಗದ ಡಿವೈಎಸ್‌ಪಿ ಹಾಗೂ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಸಿಬ್ಬಂದಿ ನಗರದಲ್ಲಿ ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದರು. ವಿಷಯ ತಿಳಿದು ಆರೋಪಿಗಳು ಶರಣಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಗದೀಶ್, ಅನುಕುಮಾರ್ ಇಬ್ಬರೂ ದರ್ಶನ್ ಅಭಿಮಾನಿಗಳಾಗಿದ್ದಾರೆ. ಅವರು ದರ್ಶನ್ ಜೊತೆಗಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

‘ವಿಚಾರಣಾಧಿಕಾರಿ ಮುಂದೆ ಸತ್ಯ ಹೇಳುತ್ತೇವೆ ಎಂದು ಕಚೇರಿಗೆ ಹಾಜರಾಗಿದ್ದರು. ಅವರನ್ನು ನಾವು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರಿಗೆ ಒಪ್ಪಿಸಿದ್ದೇವೆ, ನಾವು ವಿಚಾರಣೆ ನಡೆಸಿಲ್ಲ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ‘ಪ್ರಜಾವಾಣಿ’ಗೆ ತಿಳಿಸಿದರು.

ಆರೋಪಿ ರವಿ ಹಸ್ತಾಂತರ: ಡಿವೈಎಸ್‌ಪಿ ಕಚೇರಿಯಲ್ಲಿ ಗುರುವಾರ ಶರಣಾಗಿದ್ದ 8ನೇ ಆರೋಪಿ ರವಿಯನ್ನೂ ಇದೇ ಸಂದರ್ಭದಲ್ಲಿ ಬೆಂಗಳೂರು ಪೊಲೀಸರಿಗೆ ಹಸ್ತಾಂತರಿಸಲಾಯಿತು. ಜಿಲ್ಲಾ ಆಸ್ಪತ್ರೆಯಲ್ಲಿ ರವಿಯ ವೈದ್ಯಕೀಯ ಪರೀಕ್ಷೆಗೆ ನಡೆಸಿ ಬೆಂಗಳೂರಿಗೆ ಕರೆದೊಯ್ಯಲಾಯಿತು.

ಗೋಳಾಡಿದ ಕುಟುಂಬ ಸದಸ್ಯರು

ಆರೋಪಿಗಳಾದ ಜಗದೀಶ್, ಅನುಕುಮಾರ್ ಅವರ ಶರಣಾಗತಿ ವಿಷಯ ತಿಳಿಯುತ್ತಿದ್ದಂತೆಯೇ ಅವರ ಕುಟುಂಬ ಸದಸ್ಯರು ಗೋಳಾಡಿದರು.

‘ಆಟೊ ಓಡಿಸಿಕೊಂಡು ಬದುಕುತ್ತಿದ್ದ ನನ್ನ ಮಗ ಕುಟುಂಬಕ್ಕೆ ಆಸರೆಯಾಗಿದ್ದ. ಕೊಲೆ ಪ್ರಕರಣದಲ್ಲಿ ಹೇಗೆ ಸಿಕ್ಕಿಬಿದ್ದ ಎಂಬುದು ನಮಗೆ ಗೊತ್ತಿಲ್ಲ. ನಮ್ಮ ಮಗ ಕೊಲೆ ಮಾಡುವವನಲ್ಲ’ ಎಂದು ಅನುಕುಮಾರ್ ತಾಯಿ ಜಯಮ್ಮ ಹೇಳಿದರು.

‘ನನ್ನ ಮಗ ದರ್ಶನ್ ಅಭಿಮಾನಿ. ಜೂನ್ 8ರಂದು ಮನೆಯಿಂದ ಹೋದವ ಇನ್ನೂ ಬಂದಿಲ್ಲ. ಅವನನ್ನು ಮನಗೆ ಕರೆದುಕೊಂಡು ಬನ್ನಿ’ ಎಂದು ಜಗದೀಶ್ ತಾಯಿ ಸುಲೋಚನಮ್ಮ ಕೈಮುಗಿದು ಬೇಡಿಕೊಂಡರು.

‘ನನ್ನ ಪತಿಗೂ ಕೊಲೆ ಪ್ರಕರಣಕ್ಕೂ ಸಂಬಂಧವಿಲ್ಲ, ಬಾಡಿಗೆ ಪಡೆದವರಿಗಾಗಿ ಕಾರ್ ಚಾಲನೆ ಮಾಡಿಕೊಂಡು ಹೋಗಿದ್ದಾರೆ. ಅವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದ್ದು ಏಕೆ’ ಎಂದು ಗುರುವಾರ ಶರಣಾಗಿದ್ದ ಆರೋಪಿ ರವಿ ಪತ್ನಿ ಕವಿತಾ ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ರಾಹುಲ್ ವಿರುದ್ಧ ಪ್ರಕರಣ ಯಾವ ರಾಜಕಾರಣ: ಡಿ.ಕೆ. ಶಿವಕುಮಾರ್

ಬೆಂಗಳೂರು: ಜಾಹೀರಾತು ವಿಚಾರದಲ್ಲಿ ರಾಹುಲ್ ಗಾಂಧಿ ಅವರ ವಿರುದ್ಧ ಸುಳ್ಳು ಕೇಸು ದಾಖಲಿಸಿರುವುದು ಯಾವ ರೀತಿಯ ರಾಜಕಾರಣ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ರಾಹುಲ್ ಗಾಂಧಿ ಅವರು ಬೆಂಗಳೂರಿನ ನ್ಯಾಯಾಲಯಕ್ಕೆ ಹಾಜರಾದರು. ಅವರ ವಿರುದ್ಧ ಪ್ರಕರಣ ದಾಖಲಿಸುವುದು ಯಾವ ರಾಜಕಾರಣ? ಬಿಜೆಪಿಯ ವಿರುದ್ಧದ ಜಾಹೀರಾತಿಗೂ, ರಾಹುಲ್‌ಗೂ ಏನು ಸಂಬಂಧ? ಆ ಜಾಹೀರಾತು ಕೊಟ್ಟಿದ್ದು ರಾಹುಲ್ ಗಾಂಧಿ ಅವರಾ? ರಾಹುಲ್ ಗಾಂಧಿ ಎಐಸಿಸಿ ಅಥವಾ ಕೆಪಿಸಿಸಿ ಅಧ್ಯಕ್ಷ-ರಾಗಿದ್ದಾರಾ? ದ್ವೇಷ ರಾಜಕಾರಣ ಮಾಡುತ್ತಿರುವುದು ಬಿಜೆಪಿ’ ಎಂದರು.

‘ಯಡಿಯೂರಪ್ಪ ಅವರ ವಿರುದ್ಧ ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ, ರಾಹುಲ್ ಗಾಂಧಿ ಅವರು ಬಂದ ನಂತರ ಈ ಬೆಳವಣಿಗೆ ನಡೆಯುತ್ತಿದೆ ಎಂಬ ಬಿಜೆಪಿ ಆರೋಪ ನಿರಾಧಾರ. ಕಾಂಗ್ರೆಸ್ ಯಾರ ಮೇಲೂ ದ್ವೇಷ ಮಾಡುವುದಿಲ್ಲ. ದ್ವೇಷ ರಾಜಕಾರಣದ ಬಗ್ಗೆ ಮಾತನಾಡಿದರೆ ವಿಚಾರ ಎಲ್ಲೆಲ್ಲೋ ಹೋಗುತ್ತದೆ. ಇಂತಹ ಕಠಿಣ ಪರಿಸ್ಥಿತಿಯನ್ನು ನಾವೂ ಅನುಭವಿಸಿದ್ದೇವೆ’ ಎಂದು ಹೇಳಿದರು.

ಅಂಚೆ ಅಪಘಾತ ವಿಮೆ 4.50 ಲಕ್ಷ ಗ್ರಾಹಕರು

ಬೆಂಗಳೂರು: ಅಂಚೆ ಇಲಾಖೆಯ ‘ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್’ (ಐಪಿಪಿಬಿ) ಜಾರಿಗೆ ತಂದಿರುವ ಗುಂಪು ಅಪಘಾತ ರಕ್ಷಣಾ ವಿಮಾ ಯೋಜನೆ ರಾಜ್ಯದಲ್ಲಿ 4.50 ಲಕ್ಷ ಗ್ರಾಹಕರನ್ನು ಸೆಳೆದಿದೆ.

ಪ್ರತಿ ದಿನ ಸರಾಸರಿ ಐದು ಸಾವಿರ ಜನರು ವೈಯಕ್ತಿಕ ಅಪಘಾತ ಯೋಜನೆಯಡಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ವರ್ಷಕ್ಕೆ ₹520 ವಿಮಾ ಕಂತು ಪಾವತಿಸಿದರೆ ₹10 ಲಕ್ಷ ಹಾಗೂ ₹749 ಪಾವತಿಸಿದರೆ ₹15 ಲಕ್ಷ ವಿಮಾ ಮೊತ್ತದ ಸೌಲಭ್ಯ ದೊರಕಲಿದೆ. ಯೋಜನೆ ರಾಜ್ಯದ ಎಲ್ಲ ಅಂಚೆ ಕಚೇರಿಗಳಲ್ಲೂ ಲಭ್ಯವಿದ್ದು, ಪೋಸ್ಟ್‌ಮನ್ ಮೂಲಕ ಮನೆ ಬಾಗಿಲಿಗೂ ತಲುಪಿಸಲಾಗುತ್ತದೆ ಎಂದು ‘ಚೀಫ್ ಪೋಸ್ಟ್ ಮಾಸ್ಟರ್ ಜನರಲ್’ ಎಸ್. ರಾಜೇಂದ್ರಕುಮಾರ್ ಹೇಳಿದ್ದಾರೆ.

ವಿಮಾ ಸೌಲಭ್ಯ ಪಡೆಯಲು ಬಯಸುವವರು ಆಧಾರ್ ಜೋಡಣೆ ಮಾಡಿದ ಶಿಲ್ಕು ರಹಿತ ಡಿಬಿಟಿ ಖಾತೆ ತೆರೆಯಬಹುದು. ರಾಜ್ಯದಲ್ಲಿ ಐದು ವರ್ಷಗಳಲ್ಲಿ ಐಪಿಪಿಬಿ 50 ಲಕ್ಷ ಗ್ರಾಹಕರನ್ನು ಹೊಂದಿದೆ ಎಂದರು.

ದರ್ಶನ್ ಕೊಟ್ಟಿದ್ದ ₹30 ಲಕ್ಷ ಜಪ್ತಿ

ಒಂದನೇ ಪುಟದಿಂದ...

ವಾರಾಂತ್ಯದ ಅಡ್ಡೆ ‘ಪಟ್ಟಣಗೆರೆ ಶೆಡ್’: ತನಿಖೆ ಚುರುಕುಗೊಳಿಸಿರುವ ಪಶ್ಚಿಮ ವಿಭಾಗದ ಪೊಲೀಸರು, ‘ನಟ ದರ್ಶನ್ ಹಾಗೂ ಸಹಚರರು, ಪಟ್ಟಣಗೆರೆ ಶೆಡ್‌ನಲ್ಲಿ ಹಲವು ಬಾರಿ ವಾರಾಂತ್ಯಗಳನ್ನು ಕಳೆದಿದ್ದರು. ಇದೇ ಶೆಡ್‌ನಲ್ಲಿ ಹಲವರ ಮೇಲೆ ಹಲ್ಲೆ ಮಾಡಿ, ಜೀವ ಬೆದರಿಕೆಯೊಡ್ಡಿ ಬಿಟ್ಟು ಕಳುಹಿಸಿದ್ದರು. ಇದೇ ಶೆಡ್‌ನಲ್ಲಿ ರೇಣುಕಸ್ವಾಮಿ ಅವರನ್ನು ಕೊಂದಿದ್ದರು’ ಎಂಬ ಸಂಗತಿಯನ್ನು ಪುರಾವೆ ಸಮೇತ ಪತ್ತೆ ಮಾಡಿದ್ದಾರೆ.

‘ರೇಣುಕಸ್ವಾಮಿ ಅವರನ್ನು ಆರೋಪಿಗಳು ಸಂಪರ್ಕಿಸಿದ್ದ ಮೊದಲ ದಿನದಿಂದ ಹಿಡಿದು ಠಾಣೆಗೆ ಬಂದು ಶರಣಾಗುವ ದಿನದವರೆಗಿನ ಹಲವು ಪುರಾವೆಗಳು, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು, ಮೊಬೈಲ್ ಸಂಭಾಷಣೆ ವಿವರ, ಮೊಬೈಲ್ ನೆಟ್‌ವರ್ಕ್ ಮಾಹಿತಿ ಹಾಗೂ ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಶೆಡ್ ಮಾಲೀಕ ಎನ್ನಲಾದ ಜಯಣ್ಣ ಹಾಗೂ ಭದ್ರತಾ ಸಿಬ್ಬಂದಿಯಿಂದ ಹೇಳಿಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಟ ದರ್ಶನ್, ಕೆಲ ವರ್ಷಗಳಿಂದ ವಿಪರೀತ ಮದ್ಯ ಕುಡಿಯುತ್ತಿದ್ದು, ಅವರ ಹಿಂದೆ-ಮುಂದಿರುವ ಹುಡುಗರೂ ಮದ್ಯವ್ಯಸನಿಗಳು. ಎಲ್ಲರೂ ಸೇರಿ ತಮ್ಮ ವಿರೋಧಿಗಳನ್ನು ಅಪಹರಿಸಿಕೊಂಡು ಬಂದು, ಥಳಿಸುತ್ತಿದ್ದರು. ನಟ ದರ್ಶನ್ ಕಡೆಯಿಂದ ಹಲವು ನಿರ್ಮಾಪಕರು, ನಿರ್ದೇಶಕರು, ಸಹ ನಟರು, ಕೆಲ ಉದ್ಯಮಿಗಳು ಸಹ ಏಟು ತಿಂದಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿ ಲಭ್ಯವಾಗಿದೆ. ‘ದೊಡ್ಡ ನಟ’ ಎಂಬ ಕಾರಣಕ್ಕೆ ಯಾರೂ ದೂರು ನೀಡಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಹಲವರ ಮೇಲೆ ರಾತ್ರಿ ಹಲ್ಲೆ ಮಾಡುತ್ತಿದ್ದ ದರ್ಶನ್, ಬೆಳಿಗ್ಗೆ ಅವರನ್ನು ಪುನಃ ಮನೆಗೆ ಕರೆಸಿ ಹಣ ಕೊಟ್ಟು ಕಳುಹಿಸಿದ್ದ ಘಟನೆಗಳೂ ನಡೆದಿವೆ. ಜೊತೆಗೆ, ಎಲ್ಲಿಯೂ ಬಹಿರಂಗವಾಗಿ ಯಾರ ಮೇಲೂ ಹಲ್ಲೆ ಮಾಡಿಲ್ಲ. ಯಾರನ್ನಾದರೂ ಅಪಹರಣ ಮಾಡಬೇಕಾದರೆ, ಸಹಚರರ ಮೂಲಕ ಮಾಡಿಸುತ್ತಿದ್ದರು. ನಂತರ, ಶೆಡ್‌ಗೆ ಹೋಗಿ ಬೆದರಿಕೆಯೊಡ್ಡುತ್ತಿದ್ದರು. ಕೆಲವರ ಮೇಲಂತೂ ವಿಪರೀತ ಎನಿಸುವಂತೆ ದಬ್ಬಾಳಿಕೆ ನಡೆಸಿದ್ದರೆಂಬ ಮಾಹಿತಿ ಇದೆ’ ಎಂದು ಹೇಳಿವೆ.

ಅಮಾನುಷ ರೀತಿಯಲ್ಲಿ ಹತ್ಯೆ: ‘ರೇಣುಕಸ್ವಾಮಿ ಸಣ್ಣ ದೇಹವುಳ್ಳ ವ್ಯಕ್ತಿ. ಆರಡಿ ಎತ್ತರದ ನಟ ದರ್ಶನ್, ರೇಣುಕಸ್ವಾಮಿ ಅವರನ್ನು ಎತ್ತಿ ಎತ್ತಿ ಬಿಸಾಕಿದ್ದರು. ಮರ್ಮಾಂಗಕ್ಕೆ ಒದ್ದು, ತಲೆಗೆ ಕಟ್ಟಿಗೆಯ ತುಂಡಿನಿಂದ ಹೊಡೆದಿದ್ದರು. ಹಲ್ಲೆಯ ಇಂಚಿಂಚೂ ಮಾಹಿತಿಯನ್ನು ಸಹಚರರು ಬಾಯ್ಬಿಟ್ಟಿದ್ದಾರೆ. ಜೊತೆಗೆ, ಕೃತ್ಯವನ್ನು ನೋಡಿದ ಕೆಲ ಪ್ರತ್ಯಕ್ಷ ಸಾಕ್ಷಿಗಳೂ ಇದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಜೂನ್ 8ರಂದು ಮಧ್ಯಾಹ್ನ ನಗರದ ಪಬ್‌ವೊಂದರಲ್ಲಿ ನಟ ದರ್ಶನ್ ಹಾಗೂ ಇತರರು, ಪಾರ್ಟಿ ಮಾಡುತ್ತಿದ್ದರು. ‘ರೇಣುಕಸ್ವಾಮಿಯನ್ನು ಬೆಂಗಳೂರಿಗೆ ಕರೆತರುತ್ತಿದ್ದೇವೆ’ ಎಂಬುದಾಗಿ ಸಹಚರರು, ದರ್ಶನ್‌ಗೆ ಕರೆ ಮಾಡಿ ತಿಳಿಸಿದ್ದರು. ದರ್ಶನ್ ರಾತ್ರಿವರೆಗೂ ಪಬ್‌ನಲ್ಲಿದ್ದರು. ‘ಶೆಡ್‌ಗೆ ಬಂದಿದ್ದೇವೆ’ ಎಂಬುದಾಗಿ ಸಹಚರ ಹೇಳುತ್ತಿದ್ದಂತೆ, ಸಿಟ್ಟಿನಿಂದಲೇ ಪಬ್‌ನ ಕುರ್ಚಿಯಿಂದ ಎದ್ದಿದ್ದ ದರ್ಶನ್ ಕಾರು ಏರಿ ಶೆಡ್‌ನತ್ತ ಹೊರಟಿದ್ದರು. ಸಹಚರರು, ಅವರನ್ನು ಹಿಂಬಾಲಿಸಿದ್ದರು. ಈ ಎಲ್ಲ ದೃಶ್ಯಗಳೂ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಸೂಕ್ತ ಪುರಾವೆಗಳು ಇದ್ದಿದ್ದರಿಂದಲೇ ಅವರನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ರೌಡಿ ಪಟ್ಟಿ ತೆರೆಯಲು ನೋಟಿಸ್: ‘ನಟ ದರ್ಶನ್ ಹಾಗೂ ಸಹಚರರು, ಅಕ್ರಮ ಕೂಟ ಕಟ್ಟಿಕೊಂಡು ಕೃತ್ಯ ಎಸಗಿದ್ದಾರೆ. ರೌಡಿ ಪಟ್ಟಿಗೆ ದರ್ಶನ್ ಹೆಸರು ಸೇರಿಸಲು ಕಾನೂನಿನಲ್ಲಿ ಅವಕಾಶಗಳಿವೆ. ಜೊತೆಗೆ, ಕೆಲ ಪ್ರಕ್ರಿಯೆಗಳೂ ಇವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ತನಿಖೆಗಾಗಿ ದರ್ಶನ್ ಹಾಗೂ ಇತರೆ ಆರೋಪಿಗಳನ್ನು ಕಸ್ಟಡಿಗೆ ಪಡೆಯಲಾಗಿದೆ. ಕಸ್ಟಡಿ ಅವಧಿ ಮುಗಿಯುತ್ತಿದ್ದಂತೆಯೇ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಇದಾದ ನಂತರ, ರೌಡಿ ಪಟ್ಟಿ ತೆರೆಯುವ ಪ್ರಕ್ರಿಯೆ ಆರಂಭವಾಗಲಿದೆ. ಆರಂಭದಲ್ಲಿ ದರ್ಶನ್‌ಗೆ ನೋಟಿಸ್ ನೀಡಲಾಗುವುದು. ನಂತರ, ಇನ್‌ಸ್ಪೆಕ್ಟರ್, ಎಸಿಪಿ, ಡಿಸಿಪಿ ಮೂಲಕ ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಕೆಯಾಗಲಿದೆ. ಬಳಿಕ ರೌಡಿ ಪಟ್ಟಿ ತೀರ್ಮಾನ ಆಗಲಿದೆ’ ಎಂದು ಹೇಳಿದರು.

ಕೈ–ಕಮಲ ಮುಖಂಡರು ಮೌನ

ಪ್ರಕರಣದಿಂದ ನಟ ದರ್ಶನ್ ಅವರನ್ನು ಪಾರು ಮಾಡಲು ಯತ್ನಿಸಿದ್ದ ಕಾಂಗ್ರೆಸ್‌ನ ಇಬ್ಬರು ಹಾಗೂ ಬಿಜೆಪಿಯ ಒಬ್ಬ ಮುಖಂಡನಿಗೆ ಪೊಲೀಸರು ತಕ್ಕ ಉತ್ತರ ನೀಡಿದ್ದಾರೆ. ಆರೋಪಿ ಪರ ನಿಂತಿದ್ದ ಮುಖಂಡರಿಗೆ, ನಟನ ಕೃತ್ಯದ ಪುರಾವೆಗಳನ್ನು ತೋರಿಸಿ ಬಾಯಿ ಮುಚ್ಚಿಸಿದ್ದಾರೆ.

‘ಮುಖಂಡರಿಗೆ ಕರೆ ಮಾಡಿದ್ದ ದರ್ಶನ್, ‘ನಾನು ಅಮಾಯಕ’ ಎಂದು ಹೇಳಿಕೊಂಡಿದ್ದರು. ಹೀಗಾಗಿ, ರಾಜಕೀಯ ಮುಖಂಡರು ಅವರನ್ನು ಪಾರು ಮಾಡುವಂತೆ ಹೇಳಿದ್ದರು. ನಂತರದ ಬೆಳವಣಿಗೆ ಹಾಗೂ ಕೆಲ ಪುರಾವೆಗಳನ್ನು ತೋರಿ-ಸುತ್ತಿದ್ದಂತೆ ಮೌನವಾಗಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನ್ಯಾಯದಿಂದ ಷಡ್ಯಂತ್ರ ಜಯಿಸಿದ್ದಾರೆ’

ಬಿಎಸ್‌ವೈಗೆ ಮಧ್ಯಂತರ ಜಾಮೀನು: ನಿರಾಳರಾಗಿ ಪ್ರತಿಕ್ರಿಯಿಸಿದ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಷಡ್ಯಂತ್ರ, ಪಿತೂರಿ ರಾಜಕಾರಣ ಯಡಿಯೂರಪ್ಪ ಅವರನ್ನು ಹಿಂಬಾಲಿಸಿಕೊಂಡು ಬರುತ್ತಲೇ ಇದೆ. ಎದೆಗುಂದದೇ ಅವರು ನ್ಯಾಯದ ಹಾದಿಯಲ್ಲಿ ಷಡ್ಯಂತ್ರಗಳನ್ನು ಜಯಿಸಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.

ಯಡಿಯೂರಪ್ಪ ಅವರಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದ ಬೆನ್ನಲ್ಲೇ ‘ಎಕ್ಸ್’ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದ ವಿಜಯೇಂದ್ರ, ‘ಯಡಿಯೂರಪ್ಪ ಅವರ ಮೇಲಿನ ಕರುನಾಡ ಜನರ ಆಶೀರ್ವಾದ, ಕೋಟಿ ಹೃದಯಗಳ ಪ್ರಾರ್ಥನೆ ನ್ಯಾಯ ದೇಗುಲದಲ್ಲಿ ಅನಾವರಣಗೊಂಡಿದೆ’ ಎಂದರು.

‘ಹೈಕೋರ್ಟ್‌ನಲ್ಲಿ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಮಧ್ಯಂತರ ಜಾಮೀನು ನೀಡಿ, ‘ಯಡಿಯೂರಪ್ಪ ವಿಚಾರಣೆಗಳಿಗೆ ಬೆನ್ನು ತೋರಿಸುವ ಜಾಯಮಾನದವರಲ್ಲ’ ಎನ್ನುವ ಮಾತನ್ನೂ ಉಲ್ಲೇಖಿಸಿರುವುದು ಯಡಿಯೂರಪ್ಪ ಅವರು ಈ ನೆಲದ ಕಾನೂನಿಗೆ ಗೌರವ ಕೊಡುವ ಪರಿಯನ್ನು ಸಾಕ್ಷೀಕರಿಸಿದೆ. ಮುಂದಿನ ದಿನಗಳಲ್ಲಿ ನ್ಯಾಯ ದೇಗುಲದಲ್ಲಿ ಸತ್ಯವೇ ಗೆಲ್ಲುತ್ತದೆ ಎಂಬ ಅಚಲ ವಿಶ್ವಾಸ ನಮ್ಮದಾಗಿದೆ’ ಎಂದು ಹೇಳಿದರು.

ದ್ವೇಷ ರಾಜಕಾರಣದ ಪಾತ್ರ ಗೊತ್ತಿಲ್ಲ: ಶೋಭಾ

ಬಿ.ಎಸ್.ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದಲ್ಲಿ ರಾಜ್ಯ ಸರ್ಕಾರದ ದ್ವೇಷ ರಾಜಕಾರಣದ ಪಾತ್ರ ಇದೆಯೇ ಎಂಬುದು ಗೊತ್ತಿಲ್ಲ. ಆದರೆ ಸರ್ಕಾರದ ನಡೆಯನ್ನು ಜನ ಗಮನಿಸುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಶುಕ್ರವಾರ ಬೆಂಗಳೂರಿಗೆ ಬಂದ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಈ ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಗೊತ್ತಿಲ್ಲ. ಮಾಧ್ಯಮಗಳ ಮೂಲಕ ನೋಡಿದೆ. ಯಡಿಯೂರಪ್ಪ ಅವರ ದೀರ್ಘ ಕಾಲದ ರಾಜಕಾರಣ ನೋಡಿದ್ದೇನೆ. ಇಂತಹ ಆರೋಪಗಳು ಯಾವತ್ತೂ ಕೇಳಿ ಬಂದಿರಲಿಲ್ಲ’ ಎಂದರು.

ಯಡಿಯೂರಪ್ಪ ವಿರುದ್ಧ ಹೊರಡಿಸಿದ್ದ ವಾರೆಂಟ್ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಹಿಂದೆ ಎಂದೂ ಬಾರದಿದ್ದ ಪ್ರಕರಣಗಳು ಈಗ ಯಾಕೆ ಬರುತ್ತಿವೆ? ನ್ಯಾಯಾಲಯ ಖಂಡಿತಾ ನೆಲದ ಕಾನೂನು ಎತ್ತಿ ಹಿಡಿಯಲಿದೆ. ಕಾಂಗ್ರೆಸ್ ಸರ್ಕಾರ ಎಲ್ಲರ ಮೇಲೆ ಕೇಸ್ ಹಾಕುತ್ತಿರುವುದನ್ನೂ ಜನ ಗಮನಿಸುತ್ತಿದ್ದಾರೆ’ ಎಂದರು.

‘ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪ್ರಕರಣದಲ್ಲಿ ಆ ರೀತಿ ಏನೂ ನಡೆದಿಲ್ಲ ಎಂದು ಪೊಲೀಸರು ತಿಳಿಸಿ, ಬಿ ರಿಪೋರ್ಟ್ ಹಾಕುವ ಹಂತದಲ್ಲಿರುವಾಗ ಏಕಾಏಕಿ ಈ ಪ್ರಕರಣದಲ್ಲಿ ಪರಕಾಯ ಪ್ರವೇಶ ಮಾಡಿ, ಜೀವ ಕೊಟ್ಟವರು ಯಾರು’ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಪ್ರಶ್ನಿಸಿದರು.

ಹಾವೇರಿಯಲ್ಲಿ ಪ್ರತಿಕ್ರಿಯಿಸಿದ ಸಂಸದ ಬಸವರಾಜ ಬೊಮ್ಮಾಯಿ, ‘ಸಿಐಡಿ ಅಧಿಕಾರಿಗಳು ಕರೆದಾಗ ವಿಚಾರಣೆಗೆ ಹೋಗಿದ್ದ ಯಡಿಯೂರಪ್ಪ ಅವರು ಉತ್ತರ ಕೊಟ್ಟಿದ್ದಾರೆ. ಸನ್ನಡತೆಯಿಂದ ನಡೆದುಕೊಂಡಿದ್ದಾರೆ. ಇವರಿಗೆ ನ್ಯಾಯಾಲಯ ಜಾಮೀನು ನೀಡಿರುವುದು ನ್ಯಾಯಸಮ್ಮತವಾಗಿದೆ. ಮುಂದಿನ ಕಾನೂನು ಹೋರಾಟದಲ್ಲಿ ಯಡಿಯೂರಪ್ಪ ಅವರು ವಿಜಯಶಾಲಿ-ಯಾಗುವ ವಿಶ್ವಾಸವಿದೆ’ ಎಂದು ಅವರು ತಿಳಿಸಿದರು.

ಇನ್ನು ಬೆಳಗಾವಿಯಲ್ಲಿ ಮಾತನಾಡಿದ ಸಂಸದ ಜಗದೀಶ ಶೆಟ್ಟರ್, ‘ಯಡಿಯೂರಪ್ಪ ವಿರುದ್ಧ ಪ್ರಕರಣ ದಾಖಲಾಗಿ ಎರಡೂವರೆ ತಿಂಗಳಾಗಿವೆ. ಆದರೆ, ಎರಡು ದಿನಗಳಲ್ಲಿ ಪ್ರಕರಣದ ತನಿಖೆ ತೀವ್ರ ಗತಿ ಪಡೆದಿದ್ದು, ಸಂಶಯಕ್ಕೆ ಆಸ್ಪದ ಮಾಡಿಕೊಟ್ಟಿದೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಭಾಗಿಯಾದ ಆರೋಪದ ಮೇಲೆ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಕಾಂಗ್ರೆಸ್ ಸರ್ಕಾರ ಇಕ್ಕಟ್ಟಿನಲ್ಲಿ ಸಿಲುಕಿದೆ. ಅದನ್ನು ಮರೆಮಾಚಿ, ಜನರ ಗಮನ ಬೇರೆಡೆ ಸೆಳೆಯಲು ಈ ಪ್ರಕರಣ ಮುನ್ನೆಲೆಗೆ ತರಲಾಗುತ್ತಿದೆ’ ಎಂದು ಅವರು ತಿಳಿಸಿದರು.

ನನ್ನನ್ನೂ ಮುಗಿಸಲು ಪಿತೂರಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಇಳಿವಯಸ್ಸಿನಲ್ಲಿ ಜೈಲಿಗೆ ಕಳುಹಿಸಲು ಹೊರಟಿರುವ ಕೆಲವರು, ನನ್ನನ್ನೂ ಮುಗಿಸಲು ಪಿತೂರಿ ಮಾಡುತ್ತಿದ್ದಾರೆ’ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಯಾವ ಮಟ್ಟಕ್ಕೆ ದ್ವೇಷದ ರಾಜಕಾರಣ ನಡೆಯುತ್ತಿದೆ ಎನ್ನುವುದಕ್ಕೆ ಯಡಿಯೂರಪ್ಪ ಪ್ರಕರಣವೇ ಸಾಕ್ಷಿ. ಸರ್ಕಾರದ ನಾಲ್ಕು ತಿಂಗಳ ನಡವಳಿಕೆಯನ್ನು ರಾಜ್ಯವೇ ಅನುಮಾನದಿಂದ ನೋಡುತ್ತಿದೆ. ಪ್ರಕರಣ ದಾಖಲಾಗಿ ಇಷ್ಟು ದಿನ ಏನು ಮಾಡುತ್ತಿದ್ದರು? ವಕೀಲರಿಗೇ ಪಾಠ ಮಾಡಿದ್ದೇನೆ ಎನ್ನುವ ಮುಖ್ಯಮಂತ್ರಿಗೆ ಕಾನೂನಿನ ಅರಿವು ಇರಲಿಲ್ಲವೇ’ ಎಂದು ಪ್ರಶ್ನಿಸಿದರು.

ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸಬೇಕು ಎನ್ನುವ ಷಡ್ಯಂತ್ರ ನಡೆದಿತ್ತು. ಈಗ ಯಡಿಯೂರಪ್ಪ ಅವರ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಕುತಂತ್ರ ಆರಂಭವಾಗಿದೆ. ನನ್ನ ವಿಷಯದಲ್ಲೂ ಏನು ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದೆ. ಕೇಂದ್ರ ಸಚಿವನಾಗಿದ್ದನ್ನೂ ಅರಗಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ. ಅದಕ್ಕೆ ನನ್ನ ವಿರುದ್ಧ ಒಳಸಂಚು ನಡೆಸುತ್ತಿದ್ದಾರೆ. ಬಿಡದಿ ಜಮೀನಿನ ವಿಚಾರ ಕೆದಕುತ್ತಿದ್ದಾರೆ. ಕಿರುಕುಳ ಕೊಡಲು ಯೋಜನೆ ರೂಪಿಸುತ್ತಿದ್ದಾರೆ. ಇದಕ್ಕೆಲ್ಲ ತಲೆಕೆಡಿಸಿಕೊಳ್ಳಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಊಟದ ತಟ್ಟೆಯಲ್ಲೂ ನಾನೇ ಕಾಣುತ್ತಿದ್ದೇನೆ’ ಎಂದರು.

‘ಹಾಸನದಲ್ಲಿ ಕುತಂತ್ರ ಮಾಡಿ, ಹೆಣ್ಣು ಮಕ್ಕಳ ಜೀವನ ಹಾಳು ಮಾಡಿ ಗೆಲುವು ಪಡೆದಿದ್ದಾರೆ. ಪೆನ್‌ಡ್ರೈವ್ ಪ್ರಕರಣ-ದಲ್ಲಿ ಆಡಿಯೊ ಬಂತಲ್ಲಾ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡರು? ಸಿ.ಡಿ ಶಿವು ಅವರೇ, ನಾನು ಕೇಂದ್ರ ಸಚಿವನಾಗಿದ್ದೇನೆ. ಈಗ ನಾನು ನಿಮ್ಮ ಮಟ್ಟಕ್ಕೆ ಇಳಿಯುವುದಿಲ್ಲ. ಕುಮಾರಸ್ವಾಮಿ ವರ್ಚಸ್ಸು ನಾಶ ಮಾಡಿ ನಾವೇ ಅಧಿಪತಿ ಆಗಬೇಕು ಅಂತ ಹೊರಟಿದ್ದವರಿಗೆ ಮತದಾರರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನಿರ್ನಾಮ ಖಚಿತ. ರಾಜ್ಯದ ಜನರು ಕೊಟ್ಟಿರುವ ಶಕ್ತಿಯನ್ನು ದ್ವೇಷಕ್ಕೆ ಬಳಸಿಕೊಳ್ಳುವುದನ್ನು ಮೊದಲು ಬಿಡಬೇಕು’ ಎಂದು ಹೇಳಿದರು.

ಕೇಂದ್ರ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಶುಕ್ರವಾರ ತಮ್ಮ ತಂದೆ ಎಚ್‌.ಡಿ. ದೇವೇಗೌಡ ಹಾಗೂ ತಾಯಿ ಚನ್ನಮ್ಮ ಅವರ ಆಶೀರ್ವಾದ ಪಡೆದರು

ಕುಮಾರಸ್ವಾಮಿಗೆ ಅದ್ದೂರಿ ಸ್ವಾಗತ

ಕೇಂದ್ರ ಸಚಿವರಾದ ನಂತರ ಮೊದಲ ಬಾರಿ ಬೆಂಗಳೂರಿಗೆ ಬಂದ ಕುಮಾರಸ್ವಾಮಿ ಅವರಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಕೆಂಪೇಗೌಡ ವಿಮಾನ ನಿಲ್ದಾಣದಿಂದ ಜೆಡಿಎಸ್ ಪಕ್ಷದ ಕಚೇರಿಗೆ ಬಂದ ಅವರನ್ನು ಕಾರ್ಯಕರ್ತರು ಮುತ್ತಿಕೊಂಡರು. ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಪಕ್ಷದ ಮುಖಂಡರು, ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿದ ನಂತರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ, ಕುಶಲೋಪರಿ ವಿಚಾರಿಸಿದರು. ನಂತರ ಪದ್ಮನಾಭ ನಗರಕ್ಕೆ ತೆರಳಿ, ತಂದೆ ಎಚ್.ಡಿ. ದೇವೇಗೌಡ–ತಾಯಿ ಚನ್ನಮ್ಮ ಅವರ ಆಶೀರ್ವಾದ ಪಡೆದರು.

ಶಾಸಕ ಸ್ಥಾನಕ್ಕೆ ಇಂದು ರಾಜೀನಾಮೆ

ಬೆಂಗಳೂರು: ಚನ್ನಪಟ್ಟಣ ಕ್ಷೇತ್ರದಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಎಚ್.ಡಿ. ಕುಮಾರಸ್ವಾಮಿ ಶನಿವಾರ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಆಯ್ಕೆಯಾಗಿ ಕೇಂದ್ರ ಸಚಿವರಾಗಿರುವ ಅವರು ಸಂಸದ ಸ್ಥಾನ ಉಳಿಸಿಕೊಳ್ಳಲು ನಿರ್ಧರಿಸಿದ್ದಾರೆ.

ದ್ವೇಷದ ರಾಜಕಾರಣ ಮಾಡಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ಹದಿನೇಳು ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣದಲ್ಲಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಬಂಧನ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್ ಎಂದಿಗೂ ದ್ವೇಷದ ರಾಜಕಾರಣ ಮಾಡುವುದಿಲ್ಲ. ಕಾನೂನು ಪ್ರಕಾರ ಕೆಲಸ ಮಾಡುತ್ತೇವೆ. ನ್ಯಾಯಾಲಯದ ಆದೇಶಕ್ಕೆ ಎಲ್ಲರೂ ತಲೆ ಬಾಗಬೇಕು. ವಿರೋಧ ಪಕ್ಷದವರ ಎಲ್ಲ ಆರೋಪಗಳಿಗೂ ಉತ್ತರ ಕೊಡಬೇಕೆಂದೇನಿಲ್ಲ’ ಎಂದರು.

‘ರಾಜ್ಯದಲ್ಲಿ ವಿರೋಧ ಪಕ್ಷದವರ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ ಮಾಡುತ್ತಿದೆ’ ಎಂಬ ಆರೋಪಕ್ಕೆ, ‘ಯಡಿಯೂರಪ್ಪ ಅವರ ವಿರುದ್ಧ ದೂರು ಕೊಟ್ಟಿರುವುದು ಸರ್ಕಾರವೇ?’ ಎಂದು ಕೇಳಿದರು.

ಕೊಲೆ ಆರೋಪದಲ್ಲಿ ನಟ ದರ್ಶನ್ ತೂಗುದೀಪ ವಿಚಾರಣೆ ನಡೆಸುತ್ತಿರುವ ಪೊಲೀಸ್ ಠಾಣೆಗೆ ಶಾಮಿಯಾನ ಕಟ್ಟಿದ ಬಗ್ಗೆ ಪ್ರತಿಕ್ರಿಯಿಸಿ, ‘ಪೊಲೀಸರು ಏನು ಮಾಡಿದ್ದಾರೆಂಬುದು ಗೊತ್ತಿಲ್ಲ. ಅವರು ನಮ್ಮನ್ನು ಕೇಳಿ ಏನೂ ಮಾಡುವುದಿಲ್ಲ. ಠಾಣೆ ಬಳಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಯಾರೂ ದೂರು ನೀಡಿಲ್ಲ. ಈ ಪ್ರಕರಣದಲ್ಲಿ ನನ್ನ ಬಳಿ ಪ್ರಭಾವ ಬೀರಲು ನನ್ನ ಬಳಿಗೆ ಯಾರೂ ಬಂದಿಲ್ಲ. ಬಂದಿದ್ದರು ಎನ್ನು-ವುದೆಲ್ಲವೂ ಸುದ್ದಿಯಷ್ಟೆ. ಅದ್ಯಾವುದು ಸತ್ಯವಲ್ಲ. ಈ ನೆಲದ ಕಾನೂನಿನಂತೆ ಕೆಲಸ ಮಾಡುತ್ತೇವೆ’ ಎಂದರು.

ಬಿ.ಎಸ್. ಯಡಿಯೂರಪ್ಪ ಬಂಧನಕ್ಕೆ ತಡೆ

ಒಂದನೇ ಪುಟದಿಂದ...

ವಿಚಾರಣೆಯ ವೇಳೆ ಯಡಿಯೂರಪ್ಪ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಸಿಐಡಿ ನೀಡಿದ್ದ ಮೊದಲನೇ ನೋಟಿಸ್ ಅನ್ನು ಯಡಿಯೂರಪ್ಪ ಅವರು ಮಾನ್ಯ ಮಾಡಿ ವಿಚಾರಣೆಗೆ ಹಾಜರಾಗಿದ್ದರು. ಎರಡನೇ ನೋಟಿಸ್‌ಗೆ ಪ್ರತ್ಯುತ್ತರಿಸಲು ಸಮಯ ಕೇಳಿದ್ದು, ಇದೇ 17ಕ್ಕೆ ಖುದ್ದು ಹಾಜರಾಗುವುದಾಗಿ ತಿಳಿಸಿದ್ದಾರೆ. ಆದರೆ, ಇದನ್ನು ಲೆಕ್ಕಿಸದೇ ತನಿಖಾಧಿಕಾರಿ ಕೋರ್ಟ್ ಮೆಟ್ಟಿಲೇರಿ ಬಂಧಿಸಿ ವಿಚಾರಣೆಗೆ ಒಳಪಡಿಸಲು ಅನುಮತಿಸುವಂತೆ ಕೋರಿದ್ದಾರೆ. ಇದೆಲ್ಲಾ ವ್ಯವಸ್ಥಿತವಾಗಿ ಯಡಿಯೂರಪ್ಪ ಅವರನ್ನು ಬಂಧಿಸಲೇಬೇಕೆಂಬ ಹಟಕ್ಕೆ ಬಿದ್ದಂತಹ ಧಾಟಿಯ ಕಾನೂನುಬಾಹಿರ ಕ್ರಮವಾಗಿದೆ’ ಎಂದು ಆರೋಪಿಸಿದರು.

ಇದನ್ನು ಅಲ್ಲಗಳೆದ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಈ ಪ್ರಕರಣದಲ್ಲಿ ಸರ್ಕಾರವನ್ನು ಕೇಂದ್ರವಾಗಿಸಿ ಆರೋಪ ಮಾಡುತ್ತಿರುವ ನಾಗೇಶ್ ಅವರ ವಾದ ತಕ್ಕುದಾದುದಲ್ಲ. ಸರ್ಕಾರ ಅಂತಹ ಯಾವುದೇ ದುರ್ಭಾವನೆಯಿಂದ ನಡೆದುಕೊಳ್ಳುತ್ತಿಲ್ಲ. ಆರೋಪಿ ಸಾಕ್ಷ್ಯ ನಾಶ ಮಾಡಬಹುದು ಎಂಬುದಷ್ಟೇ ತನಿಖಾಧಿಕಾರಿಗಳ ಆತಂಕ. ಇದಕ್ಕಾಗಿಯೇ ಸಮಯಾವಕಾಶ ನೀಡದೆ ವಿಚಾರಣೆ ನಡೆಸುವ ಇಚ್ಛೆ ಹೊಂದಿದೆ’ ಎಂದು ಸಮರ್ಥಿಸಿಕೊಂಡರು.

‘ಎರಡನೇ ನೋಟಿಸ್ ನೀಡಿದ ಕೂಡಲೇ ಆರೋಪಿ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ತನಿಖಾಧಿಕಾರಿಗೆ ಬಂಧಿಸುವ ಸ್ವಾತಂತ್ರ್ಯ ಇತ್ತಾದರೂ ಆರೋಪಿ ರಾಜ್ಯದಿಂದ ಆಚೆ ಹೋದಾಗ ವಾರಂಟ್ ಅವಶ್ಯಕತೆ ಎದುರಾಗುತ್ತದೆ ಎಂಬ ಕಾರಣಕ್ಕಾಗಿಯೇ ಕೋರ್ಟ್‌ನಿಂದ ವಾರಂಟ್ ಪಡೆಯಲು ತನಿಖಾಧಿಕಾರಿ ಮುಂದಾದರು. ಸಾಕ್ಷ್ಯಗಳ ರಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ಮಾತ್ರವೇ ವಾರಂಟ್ ಕೇಳಲು ಮುಂದಡಿ ಇರಿಸಿದರು’ ಎಂದು ವಿವರಿಸಿದರು.

ಸಂತ್ರಸ್ತ ಬಾಲಕಿಯ ಅಣ್ಣನ ಪರ ಹಾಜರಾಗಿದ್ದ ವಕೀಲ ಎಸ್.ಬಾಲನ್, ‘ದೂರು ದಾಖಲಾಗಿ ಮೂರು ತಿಂಗಳು ಕಳೆದರೂ ತನಿಖೆಯಲ್ಲಿ ಪ್ರಗತಿಯಾಗಿಲ್ಲ. ಇದೊಂದು ಗಂಭೀರ ಪ್ರಕರಣ. ಆದ್ದರಿಂದ, ಆರೋಪಿಯನ್ನು ಬಂಧಿಸಲು ನಿರ್ದೇಶಿಸಬೇಕು’ ಎಂದು ಮನವಿ ಮಾಡಿದರು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಮತ್ತು ಸಂತ್ರಸ್ತ ಬಾಲಕಿಯ ಅಣ್ಣನಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದರು. ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಲಾಗಿದೆ. ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಸಿಐಡಿ ಎಡಿಜಿಪಿ ಬಿಜಯ್ ಕುಮಾರ್ ಸಿಂಗ್ ಮತ್ತು ಪ್ರಕರಣದ ತನಿಖಾಧಿಕಾರಿ ಡಿವೈಎಸ್‌ಪಿ ಎಂ.ಜೆ.ಪೃಥ್ವಿ ಹಾಜರಿದ್ದರು.

‘ರಾಜಕೀಯ ಪ್ರತೀಕಾರದ ಕ್ರಮ‘

‘ಯಡಿಯೂರಪ್ಪ ವಿರುದ್ಧ ದಾಖಲಿಸಿರುವ ಈ ಪ್ರಕರಣದ ಫಿರ್ಯಾದುದಾರ ಮಹಿಳೆ (ಈಗ ಬದುಕಿಲ್ಲ) ಸಮಾಜದಲ್ಲಿನ ಗಣ್ಯರ ವಿರುದ್ಧ ಇಂತಹುದೇ ದೂರುಗಳನ್ನು ನೀಡುವ ಚಾಳಿ ಹೊಂದಿದ್ದರು. ಅವರು ನೀಡಿದ ದೂರುಗಳ ಸಂಖ್ಯೆ ಒಟ್ಟು 53ರಷ್ಟಿದೆ. ಆಕೆಯ ಪ್ರವೃತ್ತಿ ಮತ್ತು ದೂರುಗಳು ಅಪ್ರಾಮಾಣಿಕತೆಯಿಂದ ಕೂಡಿವೆ. ಆದರೆ, ಇದನ್ನೇ ನೆಪವಾಗಿರಿಸಿಕೊಂಡು ಆಡಳಿತಾರೂಢ ಸರ್ಕಾರ ರಾಜಕೀಯ ಪ್ರತೀಕಾರದ ಧೋರಣೆಯಲ್ಲಿ ಯಡಿಯೂರಪ್ಪ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲು ಮುಂದಾಗಿದೆ’ ಎಂದು ವಕೀಲ ಸಿ.ವಿ.ನಾಗೇಶ್ ಆರೋಪಿಸಿದರು.

ವಾದ ಮಂಡನೆ ವೇಳೆ ಈ ಕುರಿತು ಪ್ರಸ್ತಾಪಿಸಿದ ಅವರು, ‘ಕಾಂಗ್ರೆಸ್ ಪಕ್ಷದ ವಿರುದ್ಧ ಬಿಜೆಪಿ ದಾಖಲಿಸಿರುವ ಮಾನನಷ್ಟ ಮೊಕದ್ದಮೆಯೊಂದರಲ್ಲಿ ಆರೋಪಿಗಳಾಗಿರುವ ಸಂಸದ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತ್ತೀಚೆಗಷ್ಟೇ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿದ್ದರು. ಇದೇ ಕಾರಣಕ್ಕಾಗಿಯೇ ಬಿಜೆಪಿ ಮುಖಂಡರ ವಿರುದ್ಧದ ಕ್ರಿಮಿನಲ್ ಪ್ರಕರಣಗಳಲ್ಲಿಯೂ ರಾಜ್ಯ ಸರ್ಕಾರ ಮುಯ್ಯಿ ತೀರಿಸಿಕೊಳ್ಳಲು ಮುಂದಾಗಿರುವಂತಿದೆ. ಇದಕ್ಕಾಗಿಯೇ ಕೋರ್ಟ್‌ನ ಆಸರೆ ಪಡೆದು ಯಡಿಯೂರಪ್ಪ ವಿರುದ್ಧ ವಾರಂಟ್ ಹೊರಡಿಸಿದೆ’ ಎಂದು ಬಲವಾಗಿ ಆಕ್ಷೇಪಿಸಿದರು.

‘ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ’

ಮೈಸೂರು: ‘ಪಂಚ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ; ಅವು ಮುಂದುವರಿಯುತ್ತವೆ. ಪುನರ್ ಪರಿಶೀಲನೆಯನ್ನೂ ಮಾಡುವುದಿಲ್ಲ. ಚುನಾವಣೆಗಾಗಿ ಅವುಗಳನ್ನು ಜಾರಿಗೊಳಿಸಿಲ್ಲ. ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬಲು ಮಾಡಿದ್ದೇವೆ. ಹೀಗಾಗಿ ನಿಲ್ಲಿಸುವುದಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು. ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗದ ಬಗ್ಗೆ ಪ್ರತಿಕ್ರಿಯಿಸಿ, ‘ಇನ್ನೂ ಸಮಯವಿದೆ. ನೋಡೋಣ. ಮೋಡವಿದ್ದರೆ ತಾನೆ ಮೋಡ ಬಿತ್ತನೆ ಮಾಡುವುದು? ಪರಿಣತರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದರು. 7ನೇ ವೇತನ ಆಯೋಗದ ವರದಿಯ ಶಿಫಾರಸು ಜಾರಿ ಕುರಿತ ಪ್ರಶ್ನೆಗೂ ಅವರು ಪ್ರತಿಕ್ರಿಯಿಸಲಿಲ್ಲ.

ಶಾಸಕ ಸ್ಥಾನಕ್ಕೆ ತುಕಾರಾಂ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಡೂರು ವಿಧಾನಸಭಾ ಕ್ಷೇತ್ರದಿಂದ 2023ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಇ. ತುಕಾರಾಂ ತಮ್ಮ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸಂಸದರಾಗಿ ಆಯ್ಕೆಯಾಗಿದ್ದರು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

ಎರಡು ದಿನದಲ್ಲಿ ಬೊಮ್ಮಾಯಿ ರಾಜೀನಾಮೆ : ಹಾವೇರಿ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಬಸವರಾಜ ಬೊಮ್ಮಾಯಿ ಅವರು ಶಾಸಕ ಸ್ಥಾನಕ್ಕೆ (ಶಿಗ್ಗಾವಿ ವಿಧಾನ ಸಭಾ ಕ್ಷೇತ್ರ) ಒಂದೆರಡು ದಿನಗಳಲ್ಲಿ ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಜನದಟ್ಟಣೆ ತಪ್ಪಿಸಲು ವಿಶೇಷ ರೈಲು ಓಡಿಸಿ’

ನವದೆಹಲಿ: ರೈಲುಗಳಲ್ಲಿನ ಜನದಟ್ಟಣೆಯನ್ನು ತ್ವರಿತವಾಗಿ ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ರೈಲ್ವೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ರೈಲ್ವೆ ಮಂಡಳಿ, ವಲಯಗಳು ಮತ್ತು ವಿಭಾಗಗಳ ಸದಸ್ಯರು ಹಾಗೂ ಅಧಿಕಾರಿಗಳ ಜತೆಗೆ ಸಭೆ ನಡೆಸಿದ ಸಚಿವರು ನಿಲ್ದಾಣಗಳು ಮತ್ತು ರೈಲುಗಳಲ್ಲಿ ಭದ್ರತೆ, ಸಮಯಪಾಲನೆ ಮತ್ತು ಸೇವೆಗಳನ್ನು ಪರಿಶೀಲಿಸಿದರು.

ಜನದಟ್ಟಣೆ ತಪ್ಪಿಸಲು ಅಗತ್ಯವಿರುವೆಡೆ ವಿಶೇಷ ರೈಲುಗಳನ್ನು ಓಡಿಸುವಂತೆ ಸಚಿವರು ಸೂಚಿಸಿದರು. ಸುರಕ್ಷತೆ ಮತ್ತು ಮೂಲ ಸೌಕರ್ಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಒತ್ತಿ ಹೇಳಿದರು ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪೋಶೆ ಅಪಘಾತ: ಪೋಷಕರಿಗೆ ನ್ಯಾಯಾಂಗ ಬಂಧನ

ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಪೋಶೆ ಕಾರು

ಪುಣೆ (ಪಿಟಿಐ): ಪುಣೆಯಲ್ಲಿ ನಡೆದ ಪೋಶೆ ಕಾರು ಅಪಘಾತ ಪ್ರಕರಣದ ಆರೋಪಿಯಾಗಿರುವ 17 ವರ್ಷದ ಬಾಲಕನ ಪೋಷಕರು ಹಾಗೂ ಮತ್ತೊಬ್ಬ ಆರೋಪಿಯನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಶುಕ್ರವಾರ ಆದೇಶ ಹೊರಡಿಸಿದೆ.

ಆರೋಪಿಗಳ ಪೊಲೀಸ್ ಕಸ್ಟಡಿ ಅವಧಿ ಮುಗಿದ ಬಳಿಕ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

‘ಮೇ 19ರ ನಸುಕಿನಲ್ಲಿ ಇಲ್ಲಿನ ಕಲ್ಯಾಣ ನಗರ ಪ್ರದೇಶದಲ್ಲಿ 17 ವರ್ಷದ ಬಾಲಕ ಪೋಶೆ ಕಾರನ್ನು ಅತಿ ವೇಗವಾಗಿ ಚಲಾಯಿಸುತ್ತಿದ್ದಾಗ ನಡೆದ ಅಪಘಾತದಲ್ಲಿ ಇಬ್ಬರು ಐ.ಟಿ ಉದ್ಯೋಗಿಗಳು ಮೃತಪಟ್ಟಿದ್ದರು. ಅಪಘಾತ ನಡೆದಾಗ ಬಾಲಕ ಮದ್ಯ ಕುಡಿದಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

ಮದ್ಯ ಕುಡಿದಿದ್ದರ ಕುರಿತ ಪರೀಕ್ಷೆಗೆ ಬಾಲಕನ ರಕ್ತದ ಬದಲು, ಆತನ ತಾಯಿಯ ರಕ್ತದ ಮಾದರಿಯನ್ನು ಬಳಸಿರುವ ಆರೋಪದ ಮೇಲೆ ತಂದೆ ವಿಶಾಲ್ ಅಗರ್ವಾಲ್, ತಾಯಿ ಶಿವಾನಿ ಹಾಗೂ ಇವರಿಗೆ ಸಹಾಯ ಮಾಡಿದ ಅಶ್ಫಕ್ ಮಕಾನ್‌ದಾರ್ ಎಂಬಾತನನ್ನು ಬಂಧಿಸಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ.

ಪವನ್ ಕಲ್ಯಾಣ್‌ಗೆ ಡಿಸಿಎಂ ಪಟ್ಟ

ಅಮರಾವತಿ (ಆಂಧ್ರಪ್ರದೇಶ): ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ನಿರೀಕ್ಷೆಯಂತೆ ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದ್ದಾರೆ.

ನಾಯ್ಡು ಅವರು, ತಮ್ಮ ಸಂಪುಟ ಸಚಿವರಿಗೆ ಶುಕ್ರವಾರ ಖಾತೆಗಳನ್ನು ಹಂಚಿಕೆ ಮಾಡಿದರು. ಎರಡು ದಿನಗಳಿಂದ ಖಾತೆ ಹಂಚಿಕೆಯ ಕಸರತ್ತು ನಡೆದಿತ್ತು.

ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರಿಗೆ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ, ಪರಿಸರ, ಅರಣ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಗಳನ್ನು ಕೊಡಲಾಗಿದೆ.

ಗೃಹ, ಹಣಕಾಸು, ಕಂದಾಯ, ಐಟಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೈಗಾರಿಕೆಗಳಂತಹ ಎಲ್ಲ ಪ್ರಮುಖ ಖಾತೆಗಳನ್ನು ಟಿಡಿಪಿಯೇ ಉಳಿಸಿಕೊಂಡಿದೆ.

ನಾಯ್ಡು ಅವರ ಪುತ್ರ ನಾರಾ ಲೋಕೇಶ್ ಅವರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ಖಾತೆ, ಅನಿತಾ ವಾಂಗಲಪುಡಿ ಅವರಿಗೆ ಗೃಹ ಖಾತೆ, ಪಿ.ನಾರಾಯಣ್ ಅವರಿಗೆ ಪೌರಾಡಳಿತ ಖಾತೆ ಹಾಗೂ ಬಿಜೆಪಿಯ ಏಕೈಕ ಸಚಿವ ಸತ್ಯಕುಮಾರ್ ಯಾದವ್ ಅವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ನೀಡಲಾಗಿದೆ

ಗೇಮ್ ಜೋನ್ ಸಹ ಮಾಲೀಕನ ಬಂಧನ

ರಾಜ್‌ಕೋಟ್ (ಪಿಟಿಐ): ಟಿಆರ್‌ಪಿ ಗೇಮ್ ಜೋನ್‌ನಲ್ಲಿ ಕಳೆದ ತಿಂಗಳು ನಡೆದ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಮತ್ತೊಬ್ಬರನ್ನು ಬಂಧಿಸಲಾಗಿದ್ದು, ಇದುವರೆಗೆ ಬಂಧನಕ್ಕೆ ಒಳಗಾದವರ ಸಂಖ್ಯೆ 10ಕ್ಕೆ ಏರಿದೆ.

ಟಿಆರ್‌ಪಿ ಗೇಮ್ ಜೋನ್‌ನ ಮಾಲೀಕರಲ್ಲಿ ಒಬ್ಬರಾದ ಅಶೋಕ್ ಸಿನ್ಹ ಜಡೇಜಾ ಗುರುವಾರ ಪೊಲೀಸರ ಎದುರು ಶರಣಾಗಿದ್ದಾರೆ. ಇವರು ಗೇಮ್ ಜೋನ್ ಇರುವ ಜಾಗದ ಮಾಲೀಕರಾಗಿದ್ದು ಮೇ 25ರಂದು ಬೆಂಕಿ ಅವಘಡ ಸಂಭವಿಸಿದ ನಂತರ ನಾಪತ್ತೆಯಾಗಿದ್ದರು.

ಜಡೇಜಾ ಶರಣಾಗಿದ್ದು ಪೊಲೀಸರ ವಶದಲ್ಲಿದ್ದಾರೆ ಎಂದು ಪೊಲೀಸ್ ಕಮಿಷನರ್ ಬ್ರಜೇಶ್ ಕುಮಾರ್ ಝಾ ಹೇಳಿದ್ದಾರೆ. ಸಹ ಮಾಲೀಕರಲ್ಲಿ ಒಬ್ಬರಾದ ಪ್ರಕಾಶ್ ಹಿರನ್ ಬೆಂಕಿ ಅವಘಡದಲ್ಲಿ ಮೃತಪಟ್ಟಿದ್ದಾರೆ ಎಂಬುದು ತನಿಖೆಯಿಂದ ದೃಢಪಟ್ಟಿದೆ.

ಕುವೈತ್‌ನಲ್ಲಿ ನಡೆದ ಬೆಂಕಿ ಅವಘಡ • ಭಾರತ ತಲುಪಿದ 45 ಮೃತದೇಹ • ಮೃತರಿಗೆ ಗಣ್ಯರ ಅಂತಿಮ ನಮನ

ಕೊಚ್ಚಿ ನಿಲ್ದಾಣದಲ್ಲಿ ಕಟ್ಟೆಯೊಡೆದ ಶೋಕ

ಪ್ರಜಾವಾಣಿ ವಾರ್ತೆ/ಪಿಟಿಐ

ಕೊಚ್ಚಿ/ತಿರುವನಂತಪುರಂ/ದೆಹಲಿ: ಕುವೈತ್ ಅಗ್ನಿ ಅವಘಡದಲ್ಲಿ ಮೃತಪಟ್ಟ 45 ಭಾರತೀಯರ ಮೃತದೇಹಗಳನ್ನು ಶುಕ್ರವಾರ ಕೇರಳಕ್ಕೆ ತರಲಾಯಿತು.

45 ಮೃತದೇಹಗಳನ್ನು ಹೊತ್ತ ವಿಶೇಷ ವಿಮಾನವು ಬೆಳಿಗ್ಗೆ 10.30ಕ್ಕೆ ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿತು. ಈ ಪೈಕಿ ಕೇರಳದ 23, ತಮಿಳುನಾಡಿನ 7 ಮತ್ತು ಕರ್ನಾಟಕದ ಒಬ್ಬರ ಮೃತದೇಹಗಳನ್ನು ಕೊಚ್ಚಿ ನಿಲ್ದಾಣದಲ್ಲಿಯೇ ಇಳಿಸಲಾಯಿತು. ಉಳಿದ 14 ಮೃತದೇಹಗಳನ್ನು ಅದೇ ವಿಮಾನದಲ್ಲಿ ದೆಹಲಿಗೆಕೊಂಡೊಯ್ಯಲಾಯಿತು.ಈಪ್ರಕ್ರಿಯೆಯ ಉಸ್ತುವಾರಿ ವಹಿಸಿದ್ದ ವಿದೇಶಾಂಗ ಖಾತೆಯ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರೂ ಜೊತೆಗಿದ್ದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅವರ ಸಂಪುಟ ಸಹೋದ್ಯೋಗಿಗಳು, ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್, ಕೇಂದ್ರ ಸಚಿವ ಸುರೇಶ್ ಗೋಪಿ, ತಮಿಳುನಾಡಿನ ಸಚಿವ ಗಿಂಗೀ ಎಸ್.ಮಸ್ತಾನ್ ಮುಂತಾದವರು ಈ ವೇಳೆ ಹಾಜರಿದ್ದು, ಮೃತದೇಹಗಳಿಗೆ ಅಂತಿಮ ನಮನ ಸಲ್ಲಿಸಿದರು. ಮೃತರಿಗೆ ಕೇರಳ ಪೊಲೀಸರು ಗೌರವ ನಮನ ಸಲ್ಲಿಸಿದರು.

ಶುಕ್ರವಾರ ಬೆಳಿಗ್ಗೆ ಕೊಚ್ಚಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂಡುಬಂದ ದೃಶ್ಯ ಹೃದಯ ವಿದ್ರಾವಕವಾಗಿತ್ತು. ದೂರದ ದೇಶದಲ್ಲಿ ಕೆಲಸ ಮಾಡಲು ಹೋಗಿ ಮೃತದೇಹಗಳಾಗಿ ಬಂದವರನ್ನು ಕೊನೆಯ ಬಾರಿಗೆ ನೋಡಲು ಕುಟುಂಬಸ್ಥರು ವಿಮಾನ ನಿಲ್ದಾಣದಲ್ಲಿ ಕಿಕ್ಕಿರಿದಿದ್ದರು. ಎಲ್ಲರ ಮುಖದಲ್ಲೂ ಶೋಕ ಮಡುಗಟ್ಟಿತ್ತು.

ಮಲ್ಲಪ್ಪಲ್ಲಿಯ ಸಿಬಿನ್ ಇಬ್ರಾಹಿಂ ಶವ ಪೆಟ್ಟಿಗೆಯ ಸುತ್ತ ತನ್ನ ಬಾಹುಗಳನ್ನು ಚಾಚಿ ಅವರ ತಂದೆ ಕಣ್ಣೀರುಗರೆದರು. ಚೆಂಗಾನೂರಿನ ಒಂದೇ ಕುಟುಂಬದ ಇಬ್ಬರು ಮೃತಪಟ್ಟಿದ್ದು ದುಃಖವನ್ನು ದುಪ್ಪಟ್ಟುಗೊಳಿಸಿತ್ತು. ಮ್ಯಾಥ್ಯೂ ಥಾಮಸ್ (53) ಮತ್ತು ಶಿಬು ವರ್ಗೀಸ್ (30) ಅಗ್ನಿ ಅವಘಡದಲ್ಲಿ ಮೃತಪಟ್ಟಿದ್ದಾರೆ. ಶಿಬು ಎನ್‌ಬಿಟಿಸಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು, ಮ್ಯಾಥ್ಯೂ ಅದೇ ಕಂಪನಿಯ ಬೇರೊಂದು ವಿಭಾಗದಲ್ಲಿದ್ದರು.

14 ಮಂದಿಯ ಮೃತದೇಹಗಳನ್ನು ಹೊತ್ತಿದ್ದ ಸೇನಾ ವಿಮಾನವು ಸಂಜೆ ದೆಹಲಿ ಮುಟ್ಟಿತು. ವಿಮಾನ ನಿಲ್ದಾಣದಲ್ಲಿ ಮೃತದೇಹಗಳನ್ನು ವಿಮಾನದಿಂದ ಕೆಳಗಿಳಿಸುವಾಗ ಸಂಸದರಾದ ಯೋಗೇಂದರ್ ಚಂದೋಲಿಯಾ ಮತ್ತು ಕಮಲ್‌ಜಿತ್ ಶೆರಾವತ್ ಅವರು ಕೈಮುಗಿದು ಗೌರವ ಸಲ್ಲಿಸಿದರು.ಇನ್ನಿಬ್ಬರು ಮಲಯಾಳಿಗಳು ಅವಘಡದಲ್ಲಿ ಮೃತರಾಗಿದ್ದಾರೆ ಎಂದು ವರದಿಯಾಗಿದೆ. ಆದರೆ, ಅವರ ಗುರುತು ಇನ್ನೂ ಪತ್ತೆಯಾಗಿಲ್ಲ.

ಅನುಮತಿ ನಿರಾಕರಣೆ– ಕೇಂದ್ರದ ಕ್ರಮಕ್ಕೆ ಆಕ್ಷೇಪ: ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಕುವೈತ್‌ಗೆ ತೆರಳಲು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರಿಗೆ ಅನುಮತಿ ನಿರಾಕರಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳು ಟೀಕಿಸಿವೆ. ಆದರೆ, ಕೇಂದ್ರ ಸರ್ಕಾರದ ಕ್ರಮವನ್ನು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಸಮರ್ಥಿಸಿಕೊಂಡಿದ್ದಾರೆ.

‘ಕುವೈತ್‌ಗೆ ತೆರಳಿ, ಅಲ್ಲಿ ದುರಂತದಲ್ಲಿ ಸಿಲುಕಿದ ನಮ್ಮ ಜನರಿಗೆ ನೆರವಾಗಲು ನಾವು ಕೇಂದ್ರ ಸರ್ಕಾರದಿಂದ ಅನುಮತಿ ಬಯಸಿದ್ದೆವು’ ಎಂದು ಗುರುವಾರ ರಾತ್ರಿ ವೀಣಾ ಜಾರ್ಜ್ ಹೇಳಿದ್ದರು. ಅದಕ್ಕೆ ಕೇಂದ್ರ ಅನುಮತಿ ನೀಡರಲಿಲ್ಲ. ‘ಅದು ಕೇಂದ್ರದ ತಪ್ಪು ನಿರ್ಧಾರ’ ಎಂದು ಪಿಣರಾಯಿ ಟೀಕಿಸಿದ್ದಾರೆ.

‘ಮೃತದೇಹಗಳನ್ನು ಶುಕ್ರವಾರ ಭಾರತಕ್ಕೆ ತರಲಾಗಿದೆ. ಗುರುವಾರ ಅಲ್ಲಿಗೆ ಹೋಗಿ ವೀಣಾ ಜಾರ್ಜ್ ಅವರು ಏನು ಮಾಡುತ್ತಿದ್ದರು’ ಎಂದು ಆರಿಫ್ ಮೊಹಮ್ಮದ್ ಖಾನ್ ಪ್ರಶ್ನಿಸಿದ್ದಾರೆ.

ವರ್ಷದಲ್ಲಿ ವಾಪಸ್ ಬರುತ್ತಿದ್ದರು

ಕಲಬುರಗಿ: ಅವಘಢದಲ್ಲಿ ಮೃತರಾದ ಆಳಂದದ ಸರಸಂಬಾ ಗ್ರಾಮದ ವಿಜಯ ಕುಮಾರ ಖೈಬಣ್ಣಾ ಪ್ರಸನ್ನ (43) ಅವರ ಮೃತದೇಹವನ್ನು ಕೊಚ್ಚಿಯಿಂದ ತೆಲಂಗಾಣದ ಹೈದರಾಬಾದ್‌ಗೆ ವಿಮಾನದಲ್ಲಿ ಕೊಂಡೊಯ್ಯಲಾಯಿತು. ಅಲ್ಲಿಂದ ಆಂಬುಲೆನ್ಸ್‌ನಲ್ಲಿ ಅವರ ಸ್ವಗ್ರಾಮಕ್ಕೆ ಸಾಗಿಸಿ, ಶನಿವಾರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಡ ಕುಟುಂಬದ ವಿಜಯ ಕುಮಾರ, ಅವರ ಕುಟುಂಬಕ್ಕೆ ಏಕೈಕ ಆಸರೆಯಾಗಿದ್ದರು. ವಾಹನ ಚಾಲಕರಾಗಿ ಕುವೈತ್‌ಗೆ 2015ರಲ್ಲಿ ಮೊದಲ ಬಾರಿಗೆ ತೆರಳಿದರು. ಕೋವಿಡ್ ಸಮಯದಲ್ಲಿ ಸ್ವಗ್ರಾಮಕ್ಕೆ ವಾಪಸ್ ಆಗಿದ್ದರು. ಮತ್ತೆ 2022ರಲ್ಲಿ ಕುವೈತ್‌ಗೆ ಮರಳಿದ್ದರು. 2025ರ ಜೂನ್ 11ಕ್ಕೆ ಅವರ ಗುತ್ತಿಗೆ ಅವಧಿ ಮುಗಿಯುತ್ತಿತ್ತು.

ಅದೇ ಕಟ್ಟಡದಲ್ಲಿ ನೆಲೆಸಿದ್ದ ತಾಲ್ಲೂಕಿನ ಜಿಡಗಾ ಗ್ರಾಮದ ಇಬ್ಬರು ಮಹಡಿಯಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕುವೈತ್ ಅಗ್ನಿ ಅವಘಡದಲ್ಲಿ ಮೃತರಾದ ಭಾರತೀಯರ ಮೃತದೇಹಗಳನ್ನು ಶುಕ್ರವಾರ ಬೆಳಗ್ಗೆ ಕೇರಳದ ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತರಲಾಯಿತು. ಮೃತರಿಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಂತಿಮ ನಮನ ಸಲ್ಲಿಸಿದರು (ಎಡಚಿತ್ರ) ಮಗ ಶಿಬಿನ್ ಅಬ್ರಹಾಂ ಮೃತದೇಹವಿದ್ದ ಶವದ ಪೆಟ್ಟಿಗೆ ಮುಂದೆ ಕಣ್ಣೀರಿಟ್ಟ ತಂದೆ –ಪಿಟಿಐ ಚಿತ್ರ

ಭಾರತದಿಂದ ಹಿಂದಿರುಗಿದ ದಿನವೇ ಸಾವು

ಅಮರಾವತಿ (ಪಿಟಿಐ): ಕುವೈತ್‌ನಲ್ಲಿ ನಡೆದ ಅಗ್ನಿ ಅವಘಢದಲ್ಲಿ ಮೃತಪಟ್ಟವರಲ್ಲಿ ಆಂಧ್ರಪ್ರದೇಶದ ಮೂವರು ವಲಸೆ ಕಾರ್ಮಿಕರು ಸೇರಿದ್ದಾರೆ ಎಂದು ಆಂಧ್ರಪ್ರದೇಶದ ಅನಿವಾಸಿಗಳ ತೆಲುಗು ಸಂಘ (ಎಪಿಎನ್‌ಆರ್‌ಟಿಎಸ್) ಮಾಹಿತಿ ನೀಡಿದೆ. ಶ್ರೀಕಾಕುಳಂ ಜಿಲ್ಲೆಯ ಟಿ.ಲೋಕನಂದಂ, ಪಶ್ಚಿಮ ಗೋದಾವರಿ ಜಿಲ್ಲೆಯ ಎಂ.ಸತ್ಯನಾರಾಯಣ ಮತ್ತು ಎಂ.ಈಶ್ವರುಡು ಮೃತಪಟ್ಟಿದ್ದಾರೆ.

ಇತ್ತೀಚೆಗೆ ಚುನಾವಣೆ ಮತ್ತು ಇತರ ಕಾರ್ಯಗಳ ನಿಮಿತ್ತ ಸ್ವಗ್ರಾಮ ಸೋಮಪೇಟಕ್ಕೆ ಬಂದಿದ್ದ ಲೋಕನಂದಂ, ಕೆಲ ದಿನ ಊರಿನಲ್ಲಿಯೇ ಇದ್ದರು. ನಂತರ ಜೂನ್ ಐದರಂದು ಹೈದರಾಬಾದ್‌ಗೆ ತೆರಳಿದ್ದರು. ಅಲ್ಲಿ ನಾಲ್ಕು ದಿನ ಕಳೆದು, ಜೂನ್ 11ರಂದು ಕುವೈತ್ ತಲುಪಿದ್ದರು. ಭಾರತದಿಂದ ಕುವೈತ್‌ಗೆ ಹಿಂದಿರುಗಿದ ದಿನದಂದೇ ಅವರು ಅವಘಡದಲ್ಲಿ ಸಾವನ್ನಪ್ಪಿದ್ದಾರೆ. ಮನೆಗೆ ಆಧಾರವಾಗಿದ್ದ ಲೋಕನಂದಂ ಸಾವಿನಿಂದಾಗಿ ಅವರ ಕುಟುಂಬ ಶೋಕದಲ್ಲಿ ಮುಳುಗಿದೆ.

ಕುಸಿಯಿತು ಕುಟುಂಬದ ಆಧಾರ

ಹೋಷಿಯಾರ್‌ಪುರ(ಪಂಜಾಬ್): ಕುವೈತ್‌ನ ಮಂಗಾಫ್‌ನಲ್ಲಿ ನಡೆದ ಅಗ್ನಿ ಅವಘಢದಲ್ಲಿ ಮೃತರಾದ ಭಾರತೀಯರಲ್ಲಿ ಪಂಜಾಬ್‌ನ ಹೋಷಿಯಾರ್‌ಪುರದ ಹಿಮ್ಮತ್ ರಾಯ್ (62) ಒಬ್ಬರಾಗಿದ್ದಾರೆ. ಕುಟುಂಬಕ್ಕೆ ಏಕೈಕ ಆಧಾರವಾಗಿದ್ದ ಅವರ ಸಾವಿನಿಂದ ಪತ್ನಿ ಮತ್ತು ಮಕ್ಕಳು ಕಂಗೆಟ್ಟಿದ್ದಾರೆ.

ರಾಯ್, ಪತ್ನಿ ಮತ್ತು ಮೂವರು ಮಕ್ಕಳನ್ನು ಅಗಲಿದ್ದಾರೆ. ಇಬ್ಬರು ಹೆಣ್ಣುಮಕ್ಕಳಿಗೆ ಮದುವೆ ಆಗಿದ್ದು, ಮಗ 10ನೇ ತರಗತಿ ಓದುತ್ತಿದ್ದಾನೆ. 30 ವರ್ಷಗಳ ಹಿಂದೆ ಕುವೈತ್‌ಗೆ ಹೋಗಿದ್ದ ಹಿಮ್ಮತ್ ರಾಯ್, ಅಲ್ಲಿನ ತಯಾರಿಕಾ ಘಟಕವೊಂದರಲ್ಲಿ ಕೆಲಸ ಮಾಡುತ್ತಿದ್ದರು.

ಪರಿಹಾರ: ಅಗ್ನಿ ಅವಘಡದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಎನ್‌ಬಿಟಿಸಿ ಕಂಪನಿಯು ತಕ್ಷಣದ ಪರಿಹಾರವಾಗಿ ತಲಾ ₹8 ಲಕ್ಷ ಹಾಗೂ ಗಾಯಾಳುಗಳಿಗೆ ₹2 ಲಕ್ಷ ಘೋಷಣೆ ಮಾಡಿದೆ.

ಸಂಪುಟದ ಮುಂದಿಡಲು ತಯಾರಿ

‘ಒಂದು ದೇಶ, ಒಂದು ಚುನಾವಣೆ’ ಕುರಿತ ರಾಮನಾಥ ಕೋವಿಂದ ವರದಿ

ನವದೆಹಲಿ (ಪಿಟಿಐ): ‘ಒಂದು ದೇಶ, ಒಂದು ಚುನಾವಣೆ’ ಕುರಿತು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯು ಸಲ್ಲಿಸಿರುವ ವರದಿಯನ್ನು ಶೀಘ್ರದಲ್ಲೇ ಸಚಿವ ಸಂಪುಟದ ಮುಂದಿಡಲು ಕೇಂದ್ರ ಕಾನೂನು ಸಚಿವಾಲಯ ತಯಾರಿ ನಡೆಸಿದೆ.

ಎನ್‌ಡಿಎ ಮತ್ತೆ ಅಧಿಕಾರಕ್ಕೇರಿದರೆ ಮೊದಲ 100 ದಿನಗಳಲ್ಲಿ ಮಾಡಬೇಕಾದ ಕೆಲಸದ ಬಗ್ಗೆ ಮಾರ್ಗಸೂಚಿ ಸಿದ್ಧಪಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣೆಗೂ ಮುನ್ನ ಎಲ್ಲ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ಸೂಚಿಸಿದ್ದರು. ಅದರ ಭಾಗವಾಗಿ ಕಾನೂನು ಸಚಿವಾಲಯ ಈ ಹೆಜ್ಜೆಯಿಟ್ಟಿದೆ ಎಂದು ಮೂಲಗಳು ಶುಕ್ರವಾರ ಹೇಳಿವೆ.

‘ಒಂದು ದೇಶ, ಒಂದು ಚುನಾವಣೆ’ ಪರಿಕಲ್ಪನೆಯ ಸಾಧಕ–ಬಾಧಕಗಳನ್ನು ಪರಿಶೀಲಿಸಲು ಸರ್ಕಾರ ನೇಮಿಸಿದ್ದ ಉನ್ನತಾಧಿಕಾರ ಸಮಿತಿಯು ತನ್ನ ವರದಿಯನ್ನು ಮಾರ್ಚ್ 15ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿತ್ತು.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಿ, ಬಳಿಕದ 100 ದಿನಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಶಿಫಾರಸನ್ನು ಸಮಿತಿಯು ಮಾಡಿತ್ತು.

ಮುಖ್ಯಾಂಶಗಳು

- ಕೇಂದ್ರ ಕಾನೂನು ಸಚಿವಾಲಯದಿಂದ ಸಿದ್ಧತೆ
- ಮಾರ್ಚ್ 15ರಂದು ರಾಷ್ಟ್ರಪತಿಗೆ ವರದಿ ಸಲ್ಲಿಸಿದ್ದ ಉನ್ನತಾಧಿಕಾರ ಸಮಿತಿ
- ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದ ಸಮಿತಿ

ತನ್ನ ಶಿಫಾರಸುಗಳ ಅನುಷ್ಠಾನಕ್ಕೆ ಒಂದು ತಂಡವನ್ನು ರಚಿಸುವಂತೆಯೂ ಸಲಹೆ ನೀಡಿತ್ತು. ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಸಂಪನ್ಮೂಲಗಳನ್ನು ಉಳಿಸಲು ಸಾಧ್ಯವಾಗುತ್ತದೆ, ಅಭಿವೃದ್ಧಿ ಮತ್ತು ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸುತ್ತದೆ ಹಾಗೂ ಪ್ರಜಾಪ್ರಭುತ್ವದ ಬುನಾದಿಯನ್ನು ಬಲಗೊಳಿಸುತ್ತದೆ ಎಂದು ಹೇಳಿತ್ತು.

ಸಂವಿಧಾನಕ್ಕೆ ಒಟ್ಟು 18 ತಿದ್ದುಪಡಿಗಳನ್ನು ತರುವ ಶಿಫಾರಸು ಮಾಡಿದ್ದ ಸಮಿತಿ, ಭಾರತೀಯ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ಒಂದೇ ಮತದಾರರ ಪಟ್ಟಿ ಮತ್ತು ಗುರುತಿನ ಚೀಟಿಗಳನ್ನು ಸಿದ್ಧಪಡಿಸಬೇಕು ಎಂದಿತ್ತು.

ಲೋಕಸಭೆ, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಪ್ರಕ್ರಿಯೆಯನ್ನು 2029ರಿಂದ ಜಾರಿಗೊಳಿಸಬೇಕೆಂಬ ಶಿಫಾರಸನ್ನು ಕಾನೂನು ಸಚಿವಾಲಯ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಪಠ್ಯಪುಸ್ತಕದಲ್ಲಿ ಕೆಸಿಆರ್ ಸಿ.ಎಂ ಕಾಂಗ್ರೆಸ್ ಸರ್ಕಾರಕ್ಕೆ ಮುಜುಗರ

ಹೈದರಾಬಾದ್ (ಪಿಟಿಐ): ಕೆ.ಚಂದ್ರಶೇಖರ ರಾವ್ ಅವರನ್ನು ಮುಖ್ಯಮಂತ್ರಿ ಎಂದು ಉಲ್ಲೇಖಿಸಿರುವ ಹಿಂದಿನ ವರ್ಷದ ಮುನ್ನುಡಿಯನ್ನೇ ಪ್ರಸಕ್ತ ಸಾಲಿನ ತೆಲುಗು ಪಠ್ಯಪುಸ್ತಕಗಳಲ್ಲಿ ಮುಂದುವರಿಸಿದ್ದು, ಇದು ತೆಲಂಗಾಣದ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಭಾರಿ ಮುಜುಗರವನ್ನುಂಟು ಮಾಡಿದೆ.

ಕೆ. ಚಂದ್ರಶೇಖರ ರಾವ್

ಬೇಸಿಗೆ ರಜೆಯ ನಂತರ ಜೂನ್ 12ರಂದು ಶಾಲೆಗಳು ಆರಂಭವಾಗಿದ್ದು ಹಳೆಯ ಮುನ್ನುಡಿಯನ್ನೇ ಹೊಂದಿರುವ 1ರಿಂದ 10ನೇ ತರಗತಿಗಳ ಪಠ್ಯಪುಸ್ತಕಗಳನ್ನು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.

ಈ ತಪ್ಪಿನ ಅರಿವಾಗುತ್ತಿದ್ದಂತೆ ಅಧಿಕಾರಿಗಳು ಪಠ್ಯಪುಸ್ತಕ ಹಿಂದಿರುಗಿಸುವಂತೆ ಕೋರಿದ್ದರು. ಬಳಿಕ ಮುನ್ನುಡಿ ಕಾಣದಂತೆ ಹಾಳೆ ಅಂಟಿಸಲು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯನ್ನು ಸಂಪರ್ಕಿಸಿದಾಗ, ‘ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿರುವುದರಿಂದ ನಿರ್ದಿಷ್ಟ ಪಠ್ಯಪುಸ್ತಕವನ್ನು ವಿದ್ಯಾರ್ಥಿಗಳಿಗೆ ವಿತರಿಸಿಲ್ಲ’ ಎಂದರು. ಆದರೆ, ಹೆಚ್ಚಿನ ವಿವರಗಳನ್ನು ನೀಡಲಿಲ್ಲ.

‘ಈ ಬಗ್ಗೆ ತನಿಖೆ ನಡೆಸಿ, ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ’ ತೆಲಂಗಾಣ ರಾಜ್ಯ ಯುನೈಟೆಡ್ ಟೀಚರ್ಸ್ ಫೆಡರೇಷನ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎಸ್‌ಸಿಇಆರ್‌ಟಿ) ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿಯೇ ಈ ಲೋಪ ಆಗಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಚಾವಾ ರವಿ ಆರೋಪಿಸಿದ್ದಾರೆ.

ಕೆಸಿಆರ್ ಹೆಸರಿರುವುದಕ್ಕೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲು ಉದ್ದೇಶಿಸಿದ್ದ ಪಠ್ಯಪುಸ್ತಕಗಳನ್ನು ಹಿಂಪಡೆಯಲಾಗಿದೆ ಎಂದು ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಪಕ್ಷ ಬಿಆರ್‌ಎಸ್ ವಾಗ್ದಾಳಿ ನಡೆಸಿದೆ.

ಸಂತ್ರಸ್ತರಿಗೆ ತಡೆ: ಕಾರಣ ಕೇಳಿದ ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ಲೋಕಸಭಾ ಚುನಾವಣೆಯ ಮತದಾನದ ಬಳಿಕ ನಡೆದ ಹಿಂಸಾಚಾರದ ಸಂತ್ರಸ್ತರು ರಾಜಭವನ ಪ್ರವೇಶಿಸುವುದನ್ನು ಪೊಲೀಸರು ಯಾವ ಕಾರಣಕ್ಕೆ ತಡೆದಿದ್ದಾರೆ ಎಂಬುದನ್ನು ತಿಳಿಸುವಂತೆ ಸೂಚಿಸಿ, ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದಾರೆ.

ಸಿ.ವಿ.ಆನಂದ್ ಬೋಸ್

ಇಲ್ಲಿನ ಬುರಾಬಜಾರ್‌ನ ಮಾಹೇಶ್ವರಿ ಭವನದಲ್ಲಿರುವ ಸಂತ್ರಸ್ತರನ್ನು ರಾಜ್ಯಪಾಲರು ಶುಕ್ರವಾರ ಭೇಟಿಯಾದರು. ಮತದಾನದ ಬಳಿಕ ನಡೆದ ಹಿಂಸಾಚಾರಕ್ಕೆ ಟಿಎಂಸಿಯೇ ಕಾರಣ ಎಂದು ಬಿಜೆಪಿ ಆರೋಪಿಸಿತ್ತು. ಆಡಳಿತಾರೂಢ ಪಕ್ಷವು ಈ ಆರೋಪವನ್ನು ತಳ್ಳಿಹಾಕಿತ್ತು.

‘ಬಿಜೆಪಿ ನಾಯಕ ಸುವೇಂದು ಅಧಿಕಾರಿ ಮತ್ತು ಸಂತ್ರಸ್ತರನ್ನು ಒಳಗೊಂಡ ನಿಯೋಗದ ರಾಜಭವನ ಭೇಟಿಗೆ ರಾಜ್ಯಪಾಲರು ಲಿಖಿತವಾಗಿ ಒಪ್ಪಿಗೆ ನೀಡಿದ್ದರು. ಆದರೂ ಅವರ ಭೇಟಿಗೆ ಪೊಲೀಸರು ಅವಕಾಶ ನೀಡಲಿಲ್ಲ. ಅವರನ್ನು ತಡೆಯಲು ಏನು ಕಾರಣ ಎಂಬುದನ್ನು ತಿಳಿಸುವಂತೆ ರಾಜ್ಯಪಾಲರು ಪತ್ರದ ಮೂಲಕ ಮುಖ್ಯಮಂತ್ರಿಗೆ ನಿರ್ದೇಶನ ನೀಡಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬೋಸ್ ಅವರು ಮಾಹೇಶ್ವರಿ ಭವನದಲ್ಲಿ ಆಶ್ರಯ ಪಡೆದಿರುವ 150ಕ್ಕೂ ಅಧಿಕ ಮಂದಿಯ ಜತೆ ಮಾತುಕತೆ ನಡೆಸಿ, ಅವರ ದೂರುಗಳನ್ನು ಆಲಿಸಿದ್ದಾರೆ ಎಂದು ಹೇಳಿದರು.

ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಅಂತರರಾಷ್ಟ್ರೀಯ ಬುಕ್ಕಿಗಳ ಜಾಲವನ್ನು ಭೇದಿಸಿದ ಪೊಲೀಸರು, ವಿವಿಧ ರಾಜ್ಯಗಳ 9 ಮಂದಿಯನ್ನು ಬಂಧಿಸಿ, 15 ಕೋಟಿ ನಗದು ಸೇರಿದಂತೆ ಅವರ ಬಳಿ ಇದ್ದ ಲ್ಯಾಪ್‌ಟಾಪ್, ಮೊಬೈಲ್, ಸಿಮ್‌ಗಳನ್ನು ವಶಪಡಿಸಿಕೊಂಡಿದ್ದಾರೆ–ಪಿಟಿಐ ಚಿತ್ರ

ಕೇಜ್ರಿವಾಲ್ ಜಾಮೀನು ಅರ್ಜಿ ವಿಚಾರಣೆ 19ಕ್ಕೆ

ನವದೆಹಲಿ (ಪಿಟಿಐ): ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೈಲು ಸೇರಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ದೆಹಲಿ ನ್ಯಾಯಾಲಯವು ಇದೇ 19ಕ್ಕೆ (ಬುಧವಾರ) ನಿಗದಿಪಡಿಸಿದೆ.

ಅರವಿಂದ ಕೇಜ್ರಿವಾಲ್

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ಜಾರಿ ನಿರ್ದೇಶನಾಲಯ (ಇ.ಡಿ) ಕಾಲಾವಕಾಶ ಕೋರಿದ ನಂತರ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಮುಖೇಶ್ ಕುಮಾರ್ ವಿಚಾರಣೆಯನ್ನು ಮುಂದೂಡಿದರು. ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಇದೇ 19ರವರೆಗೆ ವಿಸ್ತರಿಸಿದರು.

ತಮ್ಮ ಆರೋಗ್ಯ ಸ್ಥಿತಿ ಮತ್ತು ಚಿಕಿತ್ಸೆಯನ್ನು ನಿರ್ಧರಿಸಲು ರಚಿಸಲಾಗಿರುವ ವೈದ್ಯಕೀಯ ಮಂಡಳಿಯ ಪ್ರಕ್ರಿಯೆಗಳಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಪಾಲ್ಗೊಳ್ಳಲು ತಮ್ಮ ಪತ್ನಿಗೆ ಅವಕಾಶ ನೀಡಲು ನಿರ್ದೇಶನ ನೀಡುವಂತೆ ಕೋರಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಾಧೀಶರು ಶನಿವಾರಕ್ಕೆ ನಿಗದಿಪಡಿಸಿದರು.

‘ಆರೋಪಿ ತನ್ನ ಪತ್ನಿಯನ್ನು ವೈದ್ಯಕೀಯ ಮಂಡಳಿಗೆ ಸೇರಿಸಲು ನಿರ್ದೇಶನ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಯಾವುದೇ ಆದೇಶ ನೀಡುವ ಮೊದಲು ಸಂಬಂಧಪಟ್ಟ ಜೈಲು ಅಧೀಕ್ಷಕರಿಂದ ಪ್ರತಿಕ್ರಿಯೆ ಪಡೆಯುವುದು ಸೂಕ್ತವೆಂಬುದು ನನ್ನ ಭಾವನೆ. ಹಾಗಾಗಿ ಈ ಅರ್ಜಿಯನ್ನು ಶನಿವಾರ (ಜೂ.15) ವಿಚಾರಣೆ ನಡೆಸಲಾಗುವುದು’ ಎಂದು ನ್ಯಾಯಾಧೀಶರು ಹೇಳಿದರು.

ಬಿಜೆಪಿ ವಿರುದ್ಧ ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಟೀಕೆ

‘ದುರಹಂಕಾರಿ’ಗಳನ್ನು 241 ಸ್ಥಾನಕ್ಕೆ ನಿಲ್ಲಿಸಿದ ರಾಮ

ಜೈಪುರ (ಪಿಟಿಐ): ಲೋಕಸಭಾ ಚುನಾವಣೆ ಅವಧಿಯಲ್ಲಿ ಆಡಳಿತಾರೂಢ ಬಿಜೆಪಿ ತೋರಿದ ‘ದುರಹಂಕಾರ’ ಮತ್ತು ಇಂಡಿಯಾ ಮೈತ್ರಿಕೂಟದ ‘ರಾಮ ವಿರೋಧಿ’ ಧೋರಣೆಯನ್ನು ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಟೀಕಿಸಿದ್ದಾರೆ.



ಇಂದ್ರೇಶ್ ಕುಮಾರ್

ಜೈಪುರ ಸಮೀಪದ ಕಾನೋತಾದಲ್ಲಿ ಆಯೋಜಿಸಿದ್ದ ‘ರಾಮರಥ ಅಯೋಧ್ಯೆ ಯಾತ್ರಾ ದರ್ಶನ್ ಪೂಜಾ ಮಹೋತ್ಸವ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಹೆಸರು ಹೇಳದೆಯೇ ಬಿಜೆಪಿ ಹಾಗೂ ವಿರೋಧ ಪಕ್ಷಗಳ ಧೋರಣೆಯನ್ನು ದೂರಿದರು. ಲೋಕಸಭಾ ಚುನಾವಣಾ ಫಲಿತಾಂಶವು ಈ ಪಕ್ಷಗಳ ವರ್ತನೆಯನ್ನು ಪ್ರತಿಬಿಂಬಿಸುತ್ತವೆ ಎಂದರು.

‘ಶ್ರೀರಾಮನ ಮೇಲೆ ಭಕ್ತಿ ತೋರಿದ, ಆದರೆ ‘ದುರಹಂಕಾರಿ’ಯಾದ ಪಕ್ಷವನ್ನು ರಾಮನು 241 ಸ್ಥಾನಗಳಲ್ಲಿ ನಿಲ್ಲಿಸಿದ. ಆ ಪಕ್ಷಕ್ಕೆ ಅತಿಹೆಚ್ಚು ಸ್ಥಾನಗಳು ಸಿಗುವಂತೆ ಮಾಡಿದ’ ಎಂದು ನರೇಂದ್ರ ಮೋದಿ ನೇತೃತ್ವದ ಬಿಜೆಪಿಯನ್ನು ಉಲ್ಲೇಖಿಸಿ ಹೇಳಿದರು.

‘ಆದರೆ, ರಾಮನ ಮೇಲೆ ನಂಬಿಕೆಯಿಲ್ಲದವರು ಒಟ್ಟಾಗಿ 234 ಸ್ಥಾನಗಳಿಗೆ ನಿಂತುಬಿಟ್ಟರು’ ಎಂದು ಇಂಡಿಯಾ ಮೈತ್ರಿಕೂಟವನ್ನು ಉಲ್ಲೇಖಿಸಿ ನುಡಿದರು.

‘ಪ್ರಜಾಪ್ರಭುತ್ವದಲ್ಲಿ ರಾಮರಾಜ್ಯದ ಕಾನೂನು ಹೇಗಿದೆ ಎಂಬುದನ್ನು ನೋಡಿ; ರಾಮನ ಪೂಜೆ ಮಾಡಿದವರು ಕ್ರಮೇಣ ಅಹಂಕಾರದತ್ತ ತಿರುಗಿದರು. ಚುನಾವಣೆಯಲ್ಲಿ ಆ ಪಕ್ಷವು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದರೆ, ಸ್ವಂತ ಬಲದಿಂದ ಅಧಿಕಾರ ನಡೆಸಲು ಬೇಕಾದಷ್ಟು ಮತಗಳನ್ನು ದೇವನು ನೀಡಲಿಲ್ಲ. ಅವರ ದುರಹಂಕಾರಿ ಧೋರಣೆಯೇ ಅದಕ್ಕೆ ಕಾರಣ’ ಎಂದರು.

‘ರಾಮನನ್ನು ವಿರೋಧಿಸಿದ ಯಾರಿಗೂ ಅಧಿಕಾರ ಸಿಗಲಿಲ್ಲ. ಅವರು ಪರಸ್ಪರ ಕೈಜೋಡಿಸಿದರೂ, ಎರಡನೇ ಸ್ಥಾನಕ್ಕೆ ಸೀಮಿತಗೊಂಡರು. ದೇವರ ನ್ಯಾಯವು ನೈಜ ಮತ್ತು ಆನಂದದಾಯಕವಾಗಿದೆ’ ಎಂದು ಅಭಿಪ್ರಾಯಪಟ್ಟರು. ‘ಭಗವಾನ್ ರಾಮನು ಯಾರನ್ನೂ ಗೋಳಾಡುವಂತೆ ಮಾಡುವುದಿಲ್ಲ. ಎಲ್ಲರಿಗೂ ನ್ಯಾಯವನ್ನು ನೀಡುತ್ತಾನೆ’ ಎಂದರು.

2025ರ ವೇಳೆ ಪ್ರತಿ ಹಳ್ಳಿಗೂ ತಲುಪಬೇಕಿದೆ: ಭಾಗವತ್

ಪ್ರಜಾವಾಣಿ ವಾರ್ತೆ

ಲಖನೌ: ಆರ್‌ಎಸ್‌ಎಸ್ ತನ್ನ ಶತಮಾನೋತ್ಸವದ (2025ರಲ್ಲಿ) ವೇಳೆಗೆ ದೇಶದ ಎಲ್ಲ ಗ್ರಾಮಗಳು ಮತ್ತು ಸಮಾಜದ ಪ್ರತಿಯೊಂದು ವರ್ಗವನ್ನು ತಲುಪಿ ಅಲ್ಲಿ ‘ಶಾಖೆ’ (ತರಬೇತಿ ಕಾರ್ಯಕ್ರಮ) ಆಯೋಜಿಸುವಂತಾಗಬೇಕು ಎಂದು ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದರು.

ಉತ್ತರಪ್ರದೇಶದ ಗೋರಖ್‌ಪುರದ ಮಾನೀರಾಮ್ ಎಂಬಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಸಂಘದ ಸ್ವಯಂಸೇವಕರನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ 250ಕ್ಕೂ ಅಧಿಕ ಸ್ವಯಂಸೇವಕರು ಪಾಲ್ಗೊಂಡಿದ್ದಾರೆ.

‘ನಾವು 2025ರಲ್ಲಿ ಶತಮಾನೋತ್ಸವಕ್ಕೆ ಕಾಲಿಡಲಿದ್ದೇವೆ. ಆ ವೇಳೆಗೆ ಏನಾದರೂ ದೊಡ್ಡ ಸಾಧನೆ ಮಾಡಬೇಕು. ಸಂಘವನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ಜವಾಬ್ದಾರಿ ಸ್ವಯಂಸೇವಕರ ಮೇಲಿದೆ’ ಎಂದರು.

ಭಾಗವತ್ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ.

ಅರುಂಧತಿ ರಾಯ್ ವಿರುದ್ಧ ಯುಎಪಿಎ: ಎಲ್‌ಜಿ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಚೋದನಕಾರಿ ಭಾಷಣ (2010) ಪ್ರಕರಣದಲ್ಲಿ ಲೇಖಕಿ ಅರುಂಧತಿ ರಾಯ್ ಮತ್ತು ಕಾಶ್ಮೀರದ ಮಾಜಿ ಪ್ರಾಧ್ಯಾಪಕ ಶೇಖ್ ಶೌಕತ್ ಹುಸೇನ್ ಅವರು ಭಯೋತ್ಪಾದನೆ ಆರೋಪವನ್ನು ಎದುರಿಸಬೇಕಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಅರುಂಧತಿ ರಾಯ್

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಕಲಂ 45(1)ರ ಅಡಿಯಲ್ಲಿ ಇವರಿಬ್ಬರ ವಿರುದ್ಧ ವಿರುದ್ಧ ಕ್ರಮ ಜರುಗಿಸಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಹೊಸದಾಗಿ ಅನುಮತಿ ನೀಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸಂಬಂಧ ರಾಯ್ ಮತ್ತು ಹುಸೇನ್ ಅವರಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ.

ಸಕ್ಸೇನಾ ಅವರು ಎಂಟು ತಿಂಗಳ ಹಿಂದೆಯಷ್ಟೇ ಭಾರತೀಯ ದಂಡ ಸಂಹಿತೆಯ ಕಲಂ 153ಎ, 153ಬಿ ಮತ್ತು 505ರ ಅಡಿಯಲ್ಲಿ ಇವರಿಬ್ಬರ ವಿರುದ್ಧ ಕ್ರಮ ಜರುಗಿಸಲು ಅನುಮತಿ ನೀಡಿದ್ದರು.

‘ಆಜಾದಿ –ಒಂದೇ ಮಾರ್ಗ’ ವೇದಿಕೆಯಡಿ ರಾಜಕೀಯ ಕೈದಿಗಳ ಬಿಡುಗಡೆಗಾಗಿ 2010ರಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಅವರು ದ್ವೇಷ ಭಾಷಣ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಸಂಬಂಧ ಕಾಶ್ಮೀರದ ಸಾಮಾಜಿಕ ಕಾರ್ಯಕರ್ತ ಸುಶೀಲ್ ಪಂಡಿತ್ ಅವರು 2010ರ ಅ.28ರಂದು ತಿಲಕ್‌ಮಾರ್ಗ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿದ್ದರು.

2010ರ ಅಕ್ಟೋಬರ್ 21ರಂದು ನವದೆಹಲಿ ಎಲ್‌ಟಿಜಿ ಸಭಾಂಗಣದಲ್ಲಿ ನಡೆದ ಸಮ್ಮೇಳನದಲ್ಲಿ, ಭಾರತದಿಂದ ಕಾಶ್ಮೀರವನ್ನು ಪ್ರತ್ಯೇಕಗೊಳಿಸುವ ಉದ್ದೇಶ ಕುರಿತು ಚರ್ಚಿಸಲಾಗಿತ್ತು. ರಾಯ್ ಮತ್ತು ಹುಸೇನ್ ಅವರು ಅಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

₹4,440 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಉತ್ತರ ಪ್ರದೇಶದ ಮಾಜಿ ಎಂಎಲ್‌ಸಿ, ಬಿಎಸ್‌ಪಿ ಮುಖಂಡ ಮೊಹಮ್ಮದ್ ಇಕ್ಬಾಲ್ ಮತ್ತು ಅವರ ಕುಟುಂಬಕ್ಕೆ ಸೇರಿದ ₹4,440 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಹೇಳಿದೆ.

ಸಹಾರನ್‌ಪುರದಲ್ಲಿರುವ ಗ್ಲೋಕಲ್ ವಿಶ್ವವಿದ್ಯಾಲಯಕ್ಕೆ ಸೇರಿದ 121 ಎಕರೆ ಜಮೀನು, ಕಟ್ಟಡಗಳು ಕೂಡಾ ಇದರಲ್ಲಿ ಸೇರಿವೆ. ‘ವಿ.ವಿಗೆ ಸೇರಿದ ಆಸ್ತಿಯು ಅಬ್ದುಲ್ ವಹೀದ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್’ ಹೆಸರಿನಲ್ಲಿ ನೋಂದಣಿಯಾಗಿದೆ. ಈ ಟ್ರಸ್ಟ್‌ನ ನಿರ್ವಹಣೆಯನ್ನು ಮೊಹಮ್ಮದ್ ಇಕ್ಬಾಲ್ ಮತ್ತು ಅವರ ಕುಟುಂಬದ ಸದಸ್ಯರು ನೋಡಿಕೊಳ್ಳುತ್ತಿದ್ದಾರೆ’ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

‘ಇಕ್ಬಾಲ್ ಅವರು ದುಬೈನಲ್ಲಿ ತಲೆಮರೆಸಿಕೊಂಡಿದ್ದು, ಅವರ ನಾಲ್ವರು ಪುತ್ರರು ಮತ್ತು ಸಹೋದರ ವಿವಿಧ ಪ್ರಕರಣಗಳಲ್ಲಿ ಜೈಲಿನಲ್ಲಿದ್ದಾರೆ’ ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಎಲ್ಲಾ ಹೇಳಿ, ಬಹು ದಾರುಣವಾದ ವಿಷಯವನ್ನು ಹೇಳದೇ ಇದ್ದರೆ, ಅದರಿಂದ ಸತ್ಯವನ್ನು ಹತ್ತಿಕ್ಕಿದಂತೆ ಆಗುತ್ತದೆ.
–ಕೆ.ವಿ.ತಿರುಮಲೇಶ್

ವಿದೇಶದಲ್ಲಿ ಕೆಲಸ ಮಾಡುವ ಭಾರತೀಯರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ

ಕುವೈತ್‌ನಲ್ಲಿ 45 ಭಾರತೀಯರ ಬದುಕು ಕೊನೆಗೊಳಿಸಿದ ಬೆಂಕಿ ಅವಘಡವು ಇತ್ತೀಚಿನ ವರ್ಷಗಳಲ್ಲಿ ದೇಶದ ಹೊರಗೆ ದೊಡ್ಡ ಸಂಖ್ಯೆಯಲ್ಲಿ ಭಾರತೀಯರ ಸಾವಿಗೆ ಕಾರಣವಾದ ಗಂಭೀರ ದುರಂತವಾಗಿದೆ. ಅಪಾರ್ಟ್‌ಮೆಂಟ್‌ವೊಂದರಲ್ಲಿ ಉಂಟಾದ ಈ ಬೆಂಕಿ ಆಕಸ್ಮಿಕದಲ್ಲಿ ಸತ್ತವರ ಸಂಖ್ಯೆ 49. ಕಂಪನಿಯೊಂದು ಈ ಅಪಾರ್ಟ್‌ಮೆಂಟ್ ಅನ್ನು ತನ್ನ ಕಾರ್ಮಿಕರು ಮತ್ತು ಇತರ ಸಿಬ್ಬಂದಿಗಾಗಿ ಬಾಡಿಗೆಗೆ ಪಡೆದುಕೊಂಡಿತ್ತು. ಈ ಕಂಪನಿ ಕೂಡ ಭಾರತೀಯರೊಬ್ಬರಿಗೆ ಸೇರಿದ್ದಾಗಿದೆ. ಬೆಂಕಿ ದುರಂತದಲ್ಲಿ ಹಲವು ಮಂದಿ ಗಾಯಗೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತರು ಮತ್ತು ಗಾಯಗೊಂಡವರಿಗೆ ಸಂಬಂಧಿಸಿದ ಮಾಹಿತಿಯನ್ನು ತಕ್ಷಣವೇ ಕುಟುಂಬದ ಸದಸ್ಯರಿಗೆ ತಿಳಿಸುವ ದಿಸೆಯಲ್ಲಿ ಸರ್ಕಾರವು ತುರ್ತಾಗಿ ಸ್ಪಂದಿಸಿದೆ. ಮೃತದೇಹಗಳನ್ನು ತಾಯ್ನಾಡಿಗೆ ತರಲಾಗಿದೆ. ಬೆಂಕಿ ಅವಘಡದ ಸಂತ್ರಸ್ತರ ನೆರವು ಕಾರ್ಯಾಚರಣೆಯ ಉಸ್ತುವಾರಿಯನ್ನು ವಿದೇಶಾಂಗ ಖಾತೆಯ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರು ವಹಿಸಿದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನವರು ಕೇರಳ ಮತ್ತು ತಮಿಳುನಾಡಿನವರು. ಉತ್ತರ ಭಾರತದ ಕೆಲವು ರಾಜ್ಯಗಳವರೂ ಮೃತಪಟ್ಟಿದ್ದಾರೆ. ಈ ಎಲ್ಲ ರಾಜ್ಯಗಳು ತಮ್ಮವರ ನೆರವಿಗೆ ಧಾವಿಸಿವೆ.

ಕೈಗಾರಿಕಾ ಪ್ರದೇಶ ಅಥವಾ ಹೆಚ್ಚು ಜನರು ನೆಲಸುವ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಸಾವುನೋವು ಉಂಟುಮಾಡುವ ಇಂತಹ ದುರಂತಗಳು ನಡೆಯುತ್ತವೆ. ಕುವೈತ್‌ನ ಜನಸಂಖ್ಯೆಯಲ್ಲಿ ಶೇಕಡ 20ರಷ್ಟು ಭಾರತೀಯರಿದ್ದಾರೆ. ಅಲ್ಲಿನ ಕಾರ್ಮಿಕ ಬಲದಲ್ಲಿ ಭಾರತೀಯರ ಪ್ರಮಾಣ ಸುಮಾರು ಶೇ 30ರಷ್ಟು. ಹಾಗಾಗಿಯೇ ದುರಂತದಲ್ಲಿ ಮೃತಪಟ್ಟವರಲ್ಲಿ ಭಾರತೀಯರ ಸಂಖ್ಯೆ ಹೆಚ್ಚು ಇದೆ. ವಿದೇಶಗಳಲ್ಲಿ ಭಾರತೀಯರ ಜೀವನ ಸ್ಥಿತಿಗತಿ ಹಾಗೂ ಅವರು ಎದುರಿಸುವ ಅಪಾಯಗಳ ಕುರಿತು ಈ ದುರಂತವು ಗಮನಹರಿಸುವಂತೆ ಮಾಡಿದೆ. ವಿಶೇಷವಾಗಿ, ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿರುವ ಮತ್ತು ಕೆಲಸ ಮಾಡುತ್ತಿರುವ ಮಧ್ಯಪ್ರಾಚ್ಯದ ದೇಶಗಳ ಕಡೆಗೆ ಗಮನಹರಿಸಬೇಕಾಗಿದೆ. ಕುವೈತ್‌ನಲ್ಲಿ ಇತ್ತೀಚಿನ ಎರಡು ವರ್ಷಗಳಲ್ಲಿ 1,400ಕ್ಕೂ ಹೆಚ್ಚು ಭಾರತೀಯರು ಮೃತಪಟ್ಟಿದ್ದಾರೆ ಎಂದು ವರದಿಗಳು ಹೇಳಿವೆ. ಅವರಲ್ಲಿ ಎಲ್ಲರೂ ಅಪಘಾತಗಳಲ್ಲಿ ಮೃತಪಟ್ಟಿಲ್ಲ. ಮಧ್ಯಪ್ರಾಚ್ಯ ದೇಶಗಳಲ್ಲಿ ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಭಾರತೀಯರು ನೀಡಿದ ಸಾವಿರಾರು ದೂರುಗಳಿವೆ. ಕಾನೂನುಗಳನ್ನು ಉಲ್ಲಂಘಿಸಿ ಅಸುರಕ್ಷಿತ ಸ್ಥಿತಿಯಲ್ಲಿ ಬದುಕುವುದು ಅಂತಹ ಸಮಸ್ಯೆಗಳಲ್ಲಿ ಒಂದು. ಕತಾರ್‌ನಲ್ಲಿ ನಡೆದ 2022ರ ಫಿಫಾ ವಿಶ್ವಕಪ್ ಪಂದ್ಯಾವಳಿಗಾಗಿ ಮೂಲಸೌಕರ್ಯ ನಿರ್ಮಾಣ ಸಂದರ್ಭದಲ್ಲಿ ಕಾರ್ಮಿಕರನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗಿದೆ ಮತ್ತು ಮಾನವ ಹಕ್ಕುಗಳನ್ನು ವ್ಯಾಪಕವಾಗಿ ಉಲ್ಲಂಘಿಸಲಾಗಿದೆ ಎಂಬ ದೂರುಗಳು ಇವೆ. ಕೆಲವು ಸಮಸ್ಯೆಗಳತ್ತ ಈಗಲೂ ಗಮನಹರಿಸಿಲ್ಲ.

ವಿದೇಶಗಳಲ್ಲಿ ಇರುವ ಭಾರತೀಯ ಕಾರ್ಮಿಕರ ಜೀವ ಮತ್ತು ಸೊತ್ತುಗಳನ್ನು ರಕ್ಷಿಸುವ ದಿಸೆಯಲ್ಲಿ ಅಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಕೆಲಸ ಮಾಡಬೇಕು

ಬೇರೆ ದೇಶಗಳಲ್ಲಿ ಇರುವ ಭಾರತೀಯರ ಕುರಿತು ಭಾರತ ಸರ್ಕಾರ ಮತ್ತು ಆ ದೇಶಗಳಲ್ಲಿ ಇರುವ ಭಾರತದ ರಾಯಭಾರ ಕಚೇರಿಗಳು ಹೆಚ್ಚಿನ ನಿಗಾ ವಹಿಸಬೇಕಿದೆ. ಕೆಲವು ದೇಶಗಳಲ್ಲಿ, ಕಾರ್ಮಿಕರ ಮಾನವ ಹಕ್ಕುಗಳ ರಕ್ಷಣೆ ಮತ್ತು ಅವರ ಅಗತ್ಯಗಳ ಪೂರೈಕೆಗೆ ಸಂಬಂಧಿಸಿ ಸಮಂಜಸವಾದ ಕಾನೂನುಗಳು ಇಲ್ಲ. ಕೆಲವು ದೇಶಗಳಲ್ಲಿ ಕಾನೂನುಗಳ ಅನುಷ್ಠಾನ ಪರಿಣಾಮಕಾರಿಯಾಗಿ ಇಲ್ಲ. ವಿದೇಶಗಳಲ್ಲಿ ಇರುವ ಭಾರತೀಯ ಕಾರ್ಮಿಕರ ಜೀವ ಮತ್ತು ಸೊತ್ತುಗಳು ಅಪಾಯಕ್ಕೆ ಒಳಗಾಗದಂತೆ ರಕ್ಷಿಸಲು ಅಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಕೆಲಸ ಮಾಡಬೇಕಿದೆ. ಭಾರತದಲ್ಲಿ ಜನಸಂಖ್ಯೆಯು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಹಾಗೆಯೇ ಕೆಲಸದ ಬೇಡಿಕೆಯೂ ಹೆಚ್ಚುತ್ತಿದೆ. ಇತರ ಹಲವು ದೇಶಗಳಲ್ಲಿ ಜನಸಂಖ್ಯೆ ಮತ್ತು ಕಾರ್ಮಿಕ ಬಲವು ಕುಸಿತದ ಹಾದಿಯಲ್ಲಿದೆ. ಹಾಗಾಗಿ, ಭಾರತೀಯರು ಕೆಲಸ ಮತ್ತು ಕೆಲಸಕ್ಕೆ ಸಂಬಂಧಿಸಿದ ಅಗತ್ಯಗಳಿಗಾಗಿ ವಿವಿಧ ದೇಶಗಳಿಗೆ ಹೋಗುವುದು ಹೆಚ್ಚುತ್ತಲೇ ಇದೆ. ಹೀಗೆ ಬೇರೆ ದೇಶಗಳಿಗೆ ಹೋದ ಭಾರತೀಯರಿಗೆ ರಕ್ಷಣೆ ಒದಗಿಸಬೇಕಾದುದು ಭಾರತ ಸರ್ಕಾರದ ಹೊಣೆಗಾರಿಕೆಯಾಗಿದೆ.

ದಿನದ ಟ್ವೀಟ್

ಗಮನ ಸೆಳೆಯುವ ಈ ಪರಿ!

ಅಮೃತಸರದ ಐಐಎಂ ವಿದ್ಯಾರ್ಥಿಗಳು ತಮ್ಮ ಹಾಸ್ಟೆಲ್‌ನಲ್ಲಿ ಹವಾನಿಯಂತ್ರಕ ಅಳವಡಿಸುವಂತೆ ಆಡಳಿತ ಮಂಡಳಿಯನ್ನು ಒತ್ತಾಯಿಸಿ, ಹವಾನಿಯಂತ್ರಣ ಸೌಲಭ್ಯವಿರುವ ಊಟದ ಹಾಲ್‌ನ ಕುರ್ಚಿಗಳಲ್ಲಿ ಕುಳಿತು, ಮೇಜಿನ ಮೇಲೆ ತಲೆಇಟ್ಟು ಮಲಗುವ ಮೂಲಕ ವಿನೂತನ ರೀತಿಯಲ್ಲಿ ಗಮನ ಸೆಳೆದಿದ್ದಾರೆ. ಅವರಲ್ಲಿ ಒಬ್ಬರು ಹೇಳುತ್ತಿದ್ದ ಮಾತು ಹೀಗಿತ್ತು: 'ಆಧುನಿಕ ಸಮಸ್ಯೆಗಳಿಗೆ ಆಧುನಿಕ ಬಗೆಯ ಪರಿಹಾರದ ಅಗತ್ಯವಿದೆ'.

ಶುಭ್

ಕಿಡಿನುಡಿ

2024ರ 'ನೀಟ್' ಸುಲಭವಾಗಿ ಇದ್ದುದರ ನಡುವೆಯೂ ವಿದ್ಯಾರ್ಥಿಗಳಿಂದ ಕಳಪೆ ಸಾಧನೆ ದಾಖಲಾಗಿರುವ ಕೋಚಿಂಗ್ ಕೇಂದ್ರಗಳು ತಮ್ಮ ವಿದ್ಯಾರ್ಥಿಗಳಿಗೆ ಮುಖ ತೋರಿಸಲಾಗದಂತಹ ಸ್ಥಿತಿಯಲ್ಲಿವೆ...

ರಿಷಿ ಬಾಗರೀ, ಹಣಕಾಸು ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 15-6-1999

• **ಜಿಲ್ಲಾ ಸಹಕಾರಿ ಬ್ಯಾಂಕ್ ದರೋಡೆಗೆ ವಿಫಲ ಯತ್ನ**

ಬೆಂಗಳೂರು, ಜೂನ್ 14– ಚಾಮರಾಜಪೇಟೆ ಐದನೇ ಮುಖ್ಯರಸ್ತೆಯಲ್ಲಿರುವ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಭದ್ರತಾ ಕೋಣೆಯ ಗೋಡೆ ಕೊರೆದು ದರೋಡೆಗೆ ವಿಫಲ ಯತ್ನ ನಡೆಸಿರುವ ಘಟನೆ ಕಳೆದ ರಾತ್ರಿ ನಡೆದಿದೆ.

ಭದ್ರತಾ ಕೋಣೆಯ ಪಕ್ಕದಲ್ಲಿರುವ ಹಳೆಯ ದಾಸ್ತಾನು ಕೋಣೆಯ ಮೂಲಕ ಭದ್ರತಾ ಕೋಣೆಯ ಗೋಡೆ ಕೊರೆಯಲು ಯತ್ನಿಸಲಾಗಿದೆ. ಗೋಡೆ ಕೊರೆಯಲು ಬಳಸಿರುವ ಸಾಧನಗಳನ್ನು ಅಲ್ಲಿಯೇ ಬಿಟ್ಟು ಹೋಗಲಾಗಿದೆ. ಆದರೆ ದುಷ್ಕರ್ಮಿಗಳು ಕಟ್ಟಡದ ಒಳಗೆ ಹೇಗೆ ನುಸುಳಿದರು, ಹೇಗೆ ಹೊರ ಹೋದರು ಎಂಬುದು ಇನ್ನೂ ನಿಗೂಢವಾಗಿದೆ.

• **ಇನ್ನೊಂದು ನೆಲೆ ವಶ: ಹೆದ್ದಾರಿ ನಿರಾತಂಕ**

ನವದೆಹಲಿ, ಜೂನ್ 14– ಪಾಕಿಸ್ತಾನಿ ಅತಿಕ್ರಮಣಕಾರರಿಂದ ಉತ್ತರ ಟೋಲೊಲಿಂಗ್ ಪ್ರದೇಶವನ್ನು ಮತ್ತೆ ವಶಕ್ಕೆ ತೆಗೆದುಕೊಳ್ಳುವ ಹೋರಾಟದಲ್ಲಿ ಮೇಜರ್‌ವೊಬ್ಬರು ಸೇರಿದಂತೆ ಹದಿನೇಳು ಮಂದಿ ಭಾರತೀಯ ಯೋಧರು ಸಾವಿಗೀಡಾಗಿದ್ದಾರೆ.

ಈ ಭೀಕರ ಹೋರಾಟದಲ್ಲಿ ಪಾಕಿಸ್ತಾನದ ಕಡೆ ಹೆಚ್ಚು ಸಾವು–ನೋವುಗಳಾಗಿದ್ದು, ಅವರು ಬಿಟ್ಟು ಹೋಗಿರುವ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭೂ ಸೇನೆಯ ವಕ್ತಾರ ಕರ್ನಲ್ ವಿಕ್ರಂ ಸಿಂಗ್ ಇಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 15-6-1974

• **ರಾಜ್ಯಕ್ಕೆ ಐ.ಡಿ.ಎ.ನಿಂದ 3 ಕೋಟಿ ಡಾಲರ್ ನೆರವು**

ನವದೆಹಲಿ, ಜೂನ್ 14– ಕರ್ನಾಟಕದಲ್ಲಿ ಡೈರಿ ಅಭಿವೃದ್ಧಿ ಯೋಜನೆಗೆ ವಿಶ್ವಬ್ಯಾಂಕಿಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯು 3 ಕೋಟಿ ಡಾಲರ್ ಸಾಲ ನೀಡಿದೆ.

ಈ ಯೋಜನೆಗೆ ತಗಲುವ ಒಟ್ಟು ವೆಚ್ಚ ಸುಮಾರು 48 ಕೋಟಿ (640 ಲಕ್ಷ ಡಾಲರುಗಳು) ರೂಪಾಯಿ. 136 ಲಕ್ಷ ಡಾಲರುಗಳ ವಿದೇಶಿ ವಿನಿಮಯದ ಬಿಡಿ ಭಾಗಗಳೂ ಸೇರಿ ಒಟ್ಟು ವೆಚ್ಚದಲ್ಲಿ ಶೇ 47ರಷ್ಟನ್ನು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಸಾಲದ ರೂಪದಲ್ಲಿ ಪೂರೈಕೆ ಮಾಡುತ್ತಿದೆ. ಉಳಿದದ್ದನ್ನು ಕೇಂದ್ರ ಸರ್ಕಾರ, ಕರ್ನಾಟಕ, ಭಾರತದ ಕೃಷಿ ಹಣಕಾಸು ಕಾರ್ಪೊರೇಷನ್, ಈ ಯೋಜನೆಯಲ್ಲಿ ಭಾಗವಹಿಸುವ ಕೃಷಿಕರು ನೀಡುವರು.

ಈ ಯೋಜನೆ 1981ರ ಹೊತ್ತಿಗೆ ಪೂರ್ಣವಾಗಲಿದ್ದು, ಆ ಹೊತ್ತಿಗೆ ವಾರ್ಷಿಕ ಹಾಲು ಉತ್ಪಾದನೆ 10 ಲಕ್ಷ ಟನ್‌ಗೆ ಏರಿಕೆ ಆಗುವುದು. ಅಲ್ಲದೆ ಒಂದು ಲಕ್ಷ ಎಳೆಯ ಹಸುಗಳು ದೊರೆಯುವುವು.

ಈ ಯೋಜನೆಯಿಂದ 4.50 ಲಕ್ಷ ಕೃಷಿ ಕುಟುಂಬಗಳಿಗೆ ಅಥವಾ ರಾಜ್ಯದ 25 ಲಕ್ಷ ಮಂದಿಗೆ ಲಾಭವಾಗುವುದು. ಈ ಜನರಲ್ಲಿ ಬಹುತೇಕ ಮಂದಿ ಎರಡು ಹೆಕ್ಟೇರ್‌ಗೂ ಕಡಿಮೆ ಜಮೀನು ಹೊಂದಿರುವವರು ಅಥವಾ ಭೂರಹಿತರು.

• **ಆಯುರ್ವೇದ ವೈದ್ಯರಿಗೆ 'ಎಮರ್ಜೆನ್ಸಿ ಚಿಕಿತ್ಸೆ' ತರಪೇತಿಗೆ ವಿರೋಧ**

ಬೆಂಗಳೂರು, ಜೂನ್ 14– ಶುದ್ಧ ಆಯುರ್ವೇದ ವಿದ್ಯಾರ್ಥಿಗಳಿಗೆ ಅಲೋಪಥಿಕ್ ಆಸ್ಪತ್ರೆಗಳಲ್ಲಿ 'ಎಮರ್ಜೆನ್ಸಿ' ಚಿಕಿತ್ಸಾ ತರಪೇತು ನೀಡುವುದನ್ನು ಭಾರತೀಯ ವೈದ್ಯರ ಸಂಘದ ಕರ್ನಾಟಕ ಶಾಖೆ ವಿರೋಧಿಸಿದೆ.

ಸಂಘದ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಎಂ.ಎ. ನರಸಿಂಹಾಚಾರ್ ಅವರು ಹೇಳಿಕೆಯೊಂದನ್ನು ನೀಡಿ, 'ಆಯುರ್ವೇದ ಪರಂಪರೆಯ ಬಗ್ಗೆ ನಮಗೆ ಹೆಮ್ಮೆ. ಚರಕ ಮತ್ತು ಸುಶ್ರುತರ ಸಮಯದಲ್ಲೂ ಎಮರ್ಜೆನ್ಸಿ ಚಿಕಿತ್ಸೆ ಜಾರಿಯಲ್ಲಿತ್ತು. ಆಯುರ್ವೇದ ಮತ್ತು ಅಲೋಪಥಿಯ ಮಿಶ್ರಣದಿಂದ ರೋಗಿಗೆ ಅಪಾಯವಾಗಬಹುದು' ಎಂದು ಎಚ್ಚರಿಸಿದ್ದಾರೆ.

ಔಷಧಿಸಸ್ಯ ವೈವಿಧ್ಯದ ನಾಶ ಆಯುರ್ವೇದವನ್ನು ಅಪಾಯಕ್ಕೆ ನೂಕುತ್ತಿದೆ

ಗಿಡಮೂಲಿಕೆ ಕ್ಷೇತ್ರಕ್ಕೆ ಬೇಕು ಮದ್ದು!

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಭಾರತೀಯ ವೈದ್ಯಕೀಯ ಪದ್ಧತಿಗಳು ಹಿಂದಿನ ಹತ್ತು ವರ್ಷಗಳಲ್ಲಿ ಸಾಧಿಸಿದ ಸಾಧನೆಯ ಪಥವನ್ನು ವರ್ಣಿಸುವ ಸಮಗ್ರ ವರದಿಯೊಂದನ್ನು ಕೇಂದ್ರ ಆಯುಷ್ ಇಲಾಖೆ ಇತ್ತೀಚೆಗೆ ಪ್ರಕಟಿಸಿದೆ. 2014ರಲ್ಲಿ ಪ್ರತ್ಯೇಕ ಆಯುಷ್ ಸಚಿವಾಲಯವೇ ಅಸ್ತಿತ್ವಕ್ಕೆ ಬಂದ ನಂತರ, ಯೋಗ ಹಾಗೂ ಆಯುರ್ವೇದವು ದೇಶ- ವಿದೇಶಗಳಲ್ಲಿ ಹೇಗೆ ಆರೋಗ್ಯ ಕ್ಷೇತ್ರದ ಮೇಲ್‌ಸ್ತರಕ್ಕೆ ದಾಪುಗಾಲು ಹಾಕುತ್ತಿವೆ ಎಂಬ ವಿವರ ಅದರಲ್ಲಿದೆ.

ಆಯುರ್ವೇದವಂತೂ ಏಷ್ಯಾ, ಪೂರ್ವ ಯುರೋಪ್, ಗಲ್ಫ್ ಪ್ರದೇಶದ ಅನೇಕ ರಾಷ್ಟ್ರಗಳಲ್ಲಿ ಅಧಿಕೃತ ವೈದ್ಯಕೀಯ ಪದ್ಧತಿಯಾಗಿ ಮನ್ನಣೆ ಪಡೆದಿದೆ. ಅಲ್ಲೆಲ್ಲ ಆಯುರ್ವೇದದ ಶಿಕ್ಷಣ, ಸಂಶೋಧನೆ, ವೈದ್ಯಕೀಯ ವೃತ್ತಿ ಹಾಗೂ ಆಯುರ್ವೇದ ಔಷಧಿಗಳಿಗೆ ಆದ್ಯತೆ ಸಿಗುತ್ತಿದೆ. ಆಯುರ್ವೇದ ಔಷಧ ಮಾರುಕಟ್ಟೆಯು ಜಾಗತಿಕವಾಗಿ ಇದೀಗ 10 ಬಿಲಿಯನ್ ಡಾಲರ್ (₹ 83,550 ಕೋಟಿ) ದಾಟಿದೆ. ಅದೀಗ ವಾರ್ಷಿಕ ಶೇ 16ಕ್ಕೂ ಹೆಚ್ಚು ವೇಗದಲ್ಲಿ ಬೆಳೆಯುತ್ತಿದ್ದು, ಇನ್ನು ಐದು ವರ್ಷಗಳಲ್ಲಿ 24 ಬಿಲಿಯನ್ ಡಾಲರ್ (ಸುಮಾರು ₹ 2 ಲಕ್ಷ ಕೋಟಿ) ದಾಟಲಿದೆ ಎಂದು ಉದ್ಯಮಕ್ಷೇತ್ರ ಅಂದಾಜಿಸಿದೆ!

ರಾಷ್ಟ್ರೀಯ ಆದಾಯ ಹಾಗೂ ಉದ್ಯಮದ ವಿಸ್ತರಣೆ ದೃಷ್ಟಿಕೋನದಿಂದ ಇದು ಗಮನಾರ್ಹ ಬೆಳವಣಿಗೆಯೇ ಸರಿ. ಜಾಗತಿಕವಾಗಿ ಈಗ ಆಯುರ್ವೇದದ ಸುವರ್ಣಕಾಲ. ಕೆಲವೇ ದಶಕಗಳ ಮೊದಲು ಭಾರತಕ್ಕೆ ಸೀಮಿತವಾಗಿದ್ದ ದೇಸಿ ಚಿಕಿತ್ಸಾ ಕ್ರಮವೊಂದು, ಇಂದು ಅಲೋಪಥಿಗೆ ಪ್ರತಿಯಾಗಿ ನಿಲ್ಲುವಂತೆ ಜಗತ್ತಿನಾದ್ಯಂತ ಪಸರಿಸುತ್ತಿರುವುದು ಮಹತ್ವದ ಸಂಗತಿಯೇ ಹೌದು. ಆದರೆ, ಈ ಬೆಳವಣಿಗೆ ನಿಜಕ್ಕೂ ಆರೋಗ್ಯಕರವಾಗಿ ಇದೆಯೇ? ಆಯುರ್ವೇದದ ಜಾಗತೀಕರಣದ ಈ ಪ್ರವಾಹದಲ್ಲಿ, ಅದರ ಮೂಲತತ್ವಗಳು ಹಾಗೂ ಗಿಡಮೂಲಿಕಾ ಔಷಧಿಗಳು ತಮ್ಮ ನೈಜ ಅಸ್ತಿತ್ವ ಕಾಪಾಡಿಕೊಳ್ಳುತ್ತಿವೆಯೇ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದ ಅಗತ್ಯವಿದೆ. ಇದು ಬರೀ ಆಯುರ್ವೇದ ಕ್ಷೇತ್ರದ ಹಿತಕ್ಕಾಗಿ ಮಾತ್ರವಲ್ಲ, ಸಾರ್ವಜನಿಕ ಆರೋಗ್ಯದ ಸುರಕ್ಷತೆಯ ದೃಷ್ಟಿಯಿಂದಲೂ ಬಹುಮುಖ್ಯ.

ಆಯುರ್ವೇದವು ಈಗ ಎದುರಿಸುತ್ತಿರುವ ಹಲವು ಗಂಭೀರ ಸವಾಲುಗಳಲ್ಲಿ, ಅದರ ಜೀವಾಳವಾಗಿರುವ ಗಿಡಮೂಲಿಕಾ ಕ್ಷೇತ್ರದ ಆಗುಹೋಗು ಪ್ರಮುಖವಾದದ್ದು. ನಿಸರ್ಗದಲ್ಲಿನ ಔಷಧಿಸಸ್ಯಗಳ ಸಂರಕ್ಷಣೆ, ಅವುಗಳ ಸಂವರ್ಧನೆ, ಸುಸ್ಥಿರ ಕೊಯಿಲು, ಔಷಧಿಗಳಲ್ಲಿ ಗುಣಮಟ್ಟದ ಮೂಲಿಕೆಗಳ ಬಳಕೆಯಂತಹ ಎಲ್ಲ ಆಯಾಮಗಳಲ್ಲೂ ಗಂಭೀರ ನ್ಯೂನತೆಗಳಿವೆ. ಗಿಡಮೂಲಿಕಾ ಕ್ಷೇತ್ರದ ಅಂಥ ನಾಲ್ಕು ಪ್ರಮುಖ ಆಯಾಮಗಳನ್ನು ಚರ್ಚಿಸುವ ಆಶಯ ಈ ಬರಹದ್ದು.

ಮೊದಲಿನದು, ನೈಸರ್ಗಿಕ ಔಷಧಿಸಸ್ಯ ವೈವಿಧ್ಯದ ಸಂರಕ್ಷಣೆ ಕುರಿತಾಗಿ. ನಮ್ಮ ನಾಡಿನ ಪರಿಸ್ಥಿತಿಯನ್ನೇ ಗಮನಿಸಿ. ರಾಜ್ಯದಲ್ಲಿ ಗುರುತಿಸಲಾಗಿರುವ ಸುಮಾರು 4,800ಕ್ಕೂ ಮಿಕ್ಕಿ ಹೂಬಿಡುವ ಸಸ್ಯಪ್ರಭೇದಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚಿನ ಪ್ರಭೇದಗಳನ್ನು ನಿಖರವಾಗಿ ಔಷಧಿಮೂಲಿಕೆಗಳೆಂದು ಗುರುತಿಸಲಾಗಿದೆ. ಅವುಗಳಲ್ಲಿ ಆರುನೂರಕ್ಕೂ ಹೆಚ್ಚು ಪ್ರಭೇದಗಳನ್ನು ವಿವಿಧ ಮೂಲಿಕಾ ಉದ್ಯಮಗಳು ವಾಣಿಜ್ಯಿಕವಾಗಿ ಬಳಸುತ್ತಿವೆಯೆಂದು ರಾಜ್ಯ ಗಿಡಮೂಲಿಕಾ ಪ್ರಾಧಿಕಾರ ಲೆಕ್ಕ ಹಾಕಿದೆ. ಆದರೆ, ಹಿಂದಿನ ಎರಡು ದಶಕಗಳಿಂದ ಈ ಸಸ್ಯಸಂಪತ್ತಿನ ನೈಸರ್ಗಿಕ ನೆಲೆಗಳು ವೇಗವಾಗಿ ನಾಶವಾಗುತ್ತಿವೆ.

ಅರಣ್ಯ, ನದಿತೀರ, ಜೌಗುಪ್ರದೇಶ, ಗೋಮಾಳದಂತಹವುಗಳ ಒತ್ತುವರಿ, ಅವೈಜ್ಞಾನಿಕ ಮೂಲಿಕೆ ಸಂಗ್ರಹಣೆ ಹಾಗೂ ಕಳ್ಳಸಾಗಣೆಯಂತಹ ಕಾರಣಗಳಿಂದಾಗಿ ಸಸ್ಯ ಸಂಪನ್ಮೂಲ ಬತ್ತುತ್ತಿದೆ. ಎಂಬತ್ತಕ್ಕೂ ಹೆಚ್ಚು ಅಮೂಲ್ಯ ಪ್ರಭೇದಗಳು ಈಗಾಗಲೇ ವಿನಾಶದಂಚಿಗೆ ತಲುಪಿವೆ ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ದಾಖಲಿಸಿರುವುದು ಆತಂಕಕಾರಿ. ಉದ್ಯಮಗಳು ಬಳಸುವ ಮೂಲಿಕೆಗಳ ಶೇ 85ಕ್ಕೂ ಹೆಚ್ಚಿನ ಪಾಲು ಇಂದಿಗೂ ಕಾಡಿನಿಂದಲೇ ಹರಿದುಬರುತ್ತಿರುವಾಗ, ಭವಿಷ್ಯದ ಪರಿಸ್ಥಿತಿ ಏನಾದೀತು?

ಎರಡನೆಯದು, ಈ ಸಸ್ಯವೈವಿಧ್ಯದ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಕ್ಕೆ ಸಂಬಂಧಿಸಿದ್ದು. ಈ ಕುರಿತು ಈಗಷ್ಟೇ ಸಂಶೋಧನಾ ಮಾಹಿತಿಗಳು ಲಭ್ಯವಾಗುತ್ತಿವೆ. ವೇಗವಾಗಿ ಏರುತ್ತಿರುವ ಸರಾಸರಿ ತಾಪಮಾನ, ಗಾಳಿಯ ತೇವಾಂಶದಲ್ಲಿ ವ್ಯತ್ಯಯ, ಅಕಾಲಿಕ ಮಳೆ, ಬದಲಾಗುತ್ತಿರುವ ಮಣ್ಣಿನ ರಾಸಾಯನಿಕ ಸಂರಚನೆಯಂತಹ ಅಂಶಗಳಿಂದ ತೀರಾ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುವುದನ್ನು ನೆಲ್ಲಿ, ಅಶೋಕ, ಶಿವಣೆಯಂಥ ವ್ಯಾಪಕ ಬಳಕೆಯ ಪ್ರಭೇದಗಳಲ್ಲಿನ ಸಂಶೋಧನೆಗಳು ದಾಖಲಿಸಿವೆ.

ಗಿಡವೊಂದು ಔಷಧಿಯಾಗಿ ವರ್ತಿಸುವಲ್ಲಿ ಹಲವಾರು ಅಂಶಗಳ ಸಂಕೀರ್ಣ ಪ್ರಭಾವವಿರುತ್ತದೆ. ಅದರ ಬೀಜ ಪ್ರಸರಣದ ಪರಿ, ಬೆಳವಣಿಗೆಯ ವೇಗ, ಹೂಬಿಡುವ ಕಾಲ ಹಾಗೂ ಸಾಂದ್ರತೆ, ಮಿಡಿಕಟ್ಟುವ ಪ್ರಮಾಣ, ಸಸ್ಯಗಳಲ್ಲೇ ಅಂತರ್ಗತವಾಗಿದ್ದು ಅವುಗಳ ಜೀವರಾಸಾಯನಿಕಗಳ ಗುಣಧರ್ಮವನ್ನು ಬದಲಾಯಿಸುವ ಶಿಲೀಂಧ್ರದಂತಹ ಹತ್ತಾರು ಸಂಗತಿಗಳು ಔಷಧಿಯ ಗುಣಧರ್ಮವನ್ನು ನಿರ್ಧರಿಸುತ್ತವೆ. ಆದರೆ, ಹವಾಮಾನ ಬದಲಾವಣೆಯ ವಿಪರೀತ ಪರಿಣಾಮಗಳು ಮೂಲಿಕೆಗಳ ನೈಸರ್ಗಿಕ ಗುಣಧರ್ಮಗಳನ್ನೇ ಬದಲಾಯಿಸುತ್ತಿವೆ!

ಮೂರನೆಯದು, ಕೃಷಿಕ್ಷೇತ್ರದಿಂದ ಬರುವ ಗಿಡಮೂಲಿಕೆಗಳ ಪರಿಸ್ಥಿತಿ. ಹೊಲದಲ್ಲಿ ಬೆಳೆಯುವ ಈ ಉತ್ಪನ್ನಗಳಾದರೂ ಯೋಗ್ಯವಾಗಿ ಇವೆಯೇ? ಅಲ್ಲೂ ಹತ್ತಾರು ಸಮಸ್ಯೆಗಳು. ಅರಿಸಿನ, ಲವಂಗ, ಲೋಳೆಸರ, ಅಮೃತಬಳ್ಳಿ, ಕಚೋರಾದಂತಹ ಹಲವಾರು ಉತ್ಪನ್ನಗಳು ಇಂದು ಕೃಷಿಯಿಂದಲೇ ಪೂರೈಕೆಯಾಗುತ್ತಿವೆ. ವಿವಿಧ ವೈರಸ್, ಬ್ಯಾಕ್ಟೀರಿಯ, ಶಿಲೀಂಧ್ರ, ಕೀಟಗಳು ಅವನ್ನು ಬಾಧಿಸುವುದರಿಂದ, ಅವು ಸ್ರವಿಸುವ ವಿಷಕಾರಕ ರಾಸಾಯನಿಕಗಳು ಗಿಡಮೂಲಿಕೆಗಳ ಭಾಗಗಳಲ್ಲೇ ಉಳಿದು-ಬಿಡುತ್ತವೆ. ಇತ್ತೀಚಿನ ದಶಕಗಳಲ್ಲಿ ಅವುಗಳ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಗಮನಾರ್ಹವಾಗಿ ಹೆಚ್ಚುತ್ತಿದೆ.

ಇನ್ನು, ಈ ಬಗೆಯ ಸೂಕ್ಷ್ಮಾಣುಜೀವಿಗಳು ಅಥವಾ ರೋಗಕಾರಕ ಕೀಟಗಳನ್ನು ಓಡಿಸಲು ರೈತರು ಅಪಾರ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಿದ್ದಾರೆ. ಹೀಗಾಗಿ, ಮಾರುಕಟ್ಟೆಗೆ ತಲುಪುವ ಅಶ್ವಗಂಧ, ಕಿರಾತಕಡ್ಡಿ, ಕಾಮಕಸ್ತೂರಿ, ಅರಿಸಿನ, ಶುಂಠಿಯಂತಹವುಗಳಲ್ಲಿ ಅಪಾಯಕಾರಿ ಮಟ್ಟದಲ್ಲಿ ಮೋನೊಕ್ರೋಟೊಫಾಸ್, ಕ್ಲೋರೊಪೈರಿಫಾಸ್, ಎಂಡೊಸಲ್ಫಾನ್‌ನಂಥ ವಿಷಕಾರಿ ರಾಸಾಯನಿಕಗಳ ಶೇಷಾಂಶ ಕಂಡುಬರುತ್ತಿದೆ! ಹೊಲದಿಂದ ಬರುವಾಗಲೇ ಮೂಲಿಕೆಗಳು ವಿಷವನ್ನು ಹೊತ್ತು ತಂದರೆ, ಅವನ್ನು ಆಧರಿಸಿದ ಆಯುರ್ವೇದ ಔಷಧಿಗಳ ಗುಣಮಟ್ಟ ಏನಾದೀತು?

ಅಂತಿಮವಾಗಿ, ಗಿಡಮೂಲಿಕೆಗಳನ್ನು ಕಚ್ಚಾವಸ್ತು-ವಾಗಿ ಬಳಸುವ ವೈವಿಧ್ಯಮಯ ಆಧುನಿಕ ಉದ್ಯಮಗಳ ಕುರಿತು. ಆಯುರ್ವೇದ ಔಷಧಿಗಳು, ಏಕಸಸ್ಯದ ಸಾರ, ಗಿಡಮೂಲಿಕೆಗಳ ಚೂರ್ಣದಂತಹ ನೂರಾರು ಬಗೆಯ ಉತ್ಪನ್ನಗಳನ್ನು ಅವು ತಯಾರಿಸಿ ಮಾರುತ್ತಿವೆ. ಆದರೆ, ಹಲವು ಉದ್ಯಮಗಳು ತಾವು ಬಳಸುವ ಸಸ್ಯಪ್ರಭೇದಗಳು ಹಾಗೂ ಅವುಗಳ ಪ್ರಮಾಣದ ಕುರಿತು ನೈಜ ಮಾಹಿತಿಯನ್ನು ಸರ್ಕಾರಕ್ಕೆ ಬಿಟ್ಟುಕೊಡುತ್ತಿಲ್ಲ. ಹೀಗಾಗಿ, ಯಾವೆಲ್ಲ ಪ್ರಭೇದಗಳು ಯಾವ ವ್ಯಾಪಾರಿ ಸರಪಣಿಗಳ ಮೂಲಕ ಉದ್ಯಮಗಳನ್ನು ಸೇರಿ, ಅವುಗಳ ಉತ್ಪನ್ನಗಳಾಗಿ ಮಾರುಕಟ್ಟೆ ತಲುಪುತ್ತಿವೆ ಎಂಬ ಸಂಪೂರ್ಣ ಚಿತ್ರಣವೇ ದೊರಕುತ್ತಿಲ್ಲ.

ಕಾಡು ಅಥವಾ ಕೃಷಿ- ಯಾವುದೇ ಮೂಲವಿದ್ದರೂ, ಉದ್ಯಮಗಳು ಅವನ್ನು ಅಲ್ಪವೆಚ್ಚದಲ್ಲಿಯೇ ದೊರಕಿಸಿಕೊಳ್ಳುತ್ತಿವೆ. ಗಿಡಮೂಲಿಕೆಗಳ ಸಂರಕ್ಷಣೆ ಹಾಗೂ ಸಂವರ್ಧನೆಯ ಜವಾಬ್ದಾರಿಯಿಂದ ಮಾತ್ರ ಸದಾ ನುಣುಚಿಕೊಳ್ಳುತ್ತಿವೆ!

ಇನ್ನು, ಆಯುರ್ವೇದದ ಹೆಸರಿನಲ್ಲಿ ಉದ್ಯಮಗಳು ಮಾರಾಟ ಮಾಡುತ್ತಿರುವ ಹಲವು ಔಷಧಿಗಳ ಗುಣಮಟ್ಟದ ಕುರಿತೂ ಗಂಭೀರ ದೂರುಗಳಿವೆ. ಹಲವು ಉದ್ಯಮಗಳು ಶಾಸ್ತ್ರೀಯ ಔಷಧಿಗಳಿಗಿಂತ ಹೆಚ್ಚಾಗಿ ತಮ್ಮದೇ 'ಪೇಟೆಂಟ್ ಔಷಧಿ'ಗಳನ್ನು ಉತ್ಪಾದಿಸಿ ಮಾರುತ್ತಿವೆ. ಅಂಥ ಹೊಸ ಉತ್ಪನ್ನಗಳ ಕ್ಷಮತೆ ಕುರಿತು ವಿಶ್ವಾಸಾರ್ಹ ವೈಜ್ಞಾನಿಕ ಆಧಾರಗಳು ಇಲ್ಲದೆಯೂ ಬರೀ ಜಾಹೀರಾತಿನ ಬಲದಿಂದಲೇ ಗ್ರಾಹಕರನ್ನು ತಲುಪುತ್ತಿವೆ. ಆಯುರ್ವೇದ ತಜ್ಞರು ಹಾಗೂ ವೈದ್ಯರ ಹಂಗಿಲ್ಲದೆ, ಬರೀ ಮಾರುಕಟ್ಟೆ ಬಲದಿಂದ ಆಯುರ್ವೇದದ ಹೆಸರನ್ನು ಹಣವಾಗಿ ಪರಿವರ್ತಿಸುತ್ತಿರುವ ಉದ್ಯಮಲೋಕದ ಚಿತ್ರಣ ಇದು. ಇತ್ತ ಆಯುರ್ವೇದಕ್ಕೂ ವಂಚನೆ, ಅತ್ತ ಮುಗ್ಧ ರೋಗಿಗಳಿಗೂ ಮೋಸ!

ಆಯುರ್ವೇದದ ವಾಣಿಜ್ಯೀಕರಣದ ಓಟದಲ್ಲಿ, ಗಿಡಮೂಲಿಕಾ ಕ್ಷೇತ್ರದ ಗುಣಮಟ್ಟ ನಿಯಂತ್ರಣದ ಜವಾಬ್ದಾರಿಯನ್ನು ಸರ್ಕಾರ ಮರೆಯದಿರಲಿ.

ಚುರುಮುರಿ

'ಶಕ್ತಿ' ಸಂಭ್ರಮ

• ಮಣ್ಣೆ ರಾಜು

ತಿಮ್ಮನಹಳ್ಳಿ ಬಸ್ ಸಿಂಗಾರಗೊಂಡು ಬೀಗುತ್ತಿತ್ತು. 'ಇಷ್ಟೊಂದು ಮಿಂಚುತ್ತಿದ್ದೀಯ, ಇವತ್ತು ನಿನ್ನ ಬರ್ತ್‌ಡೇನಾ?' ಎಂದು ಬಸ್‌ಸ್ಟ್ಯಾಂಡಿನಲ್ಲಿದ್ದ ಇತರ ಬಸ್‌ಗಳು ಕೇಳಿದವು.

'ಶಕ್ತಿ ಯೋಜನೆಗೆ ವರ್ಷ ತುಂಬಿತು ಅಂತ ಮಹಿಳಾ ಪ್ರಯಾಣಿಕರು ನನಗೆ ಅಲಂಕಾರ ಮಾಡಿ, ಪೂಜೆ ಮಾಡಿದರು'.

'ಅಲ್ನೋಡ್ರೀ... ಹೊಸ ಬಸ್ ಬಂದಿದೆ! ಪರಿಚಯ ಮಾಡಿಕೊಳ್ಳೋಣ ಬನ್ನಿ...' ಎಂದು ಬಂದ ಬಸ್‌ಗಳು, 'ನೀನು ತುಂಬಾ ಸುಂದರವಾಗಿದ್ದೀಯ' ಎಂದು ಹೊಸ ಬಸ್ಸನ್ನು ಹೊಗಳಿದವು.

'ಪ್ರಾಯದಲ್ಲಿ ನಾನೂ ನಿನ್ನಷ್ಟೇ ಸುಂದರವಾಗಿದ್ದೆ. ಲೈಫ್ ಜರ್ನಿಯಲ್ಲಿ ಸೊರಗಿ ಹೀಗಾಗಿದ್ದೇನೆ... ನಿನ್ನದು ಯಾವ ರೂಟು?' ಕೆಂಪನಹಳ್ಳಿ ಬಸ್ ಕೇಳಿತು.

'ರಾಜಧಾನಿ ರೂಟು. ರೋಡ್ ಚೆನ್ನಾಗಿದೆ, ಕುಡಿದ ಡೀಸೆಲ್ ಅಲ್ಲಾಡದಂತೆ ಹೋಗಿಬರ್ತೀನಿ'.

'ಆರಂಭದಲ್ಲಿ ನಾನೂ ರಾಜಧಾನಿ ರೂಟ್‌ನಲ್ಲಿ ಓಡಾಡ್ತಿದ್ದೆ, ವಯಸ್ಸಾಯ್ತು ಅಂತ ಈಗ ಹಳ್ಳಿ ರೂಟ್‌ಗೆ ಹಾಕಿದ್ದಾರೆ. ನಾನು ರಾಜಧಾನಿಗೆ ಹೋಗಿ ಬಹಳ ವರ್ಷ ಆಯ್ತು'.

'ರಾಜಕೀಯ ಸಮಾವೇಶ, ಮದುವೆ ಟ್ರಿಪ್ ಇದ್ದಾಗ ನಾವೂ ರಾಜಧಾನಿಗೆ ಹೋಗ್ತೀವಿ'.

'ಛೀ! ಇಷ್ಟೊಂದು ಗಲೀಜಾಗಿದ್ದೀಯ, ಡೈಲಿ ಸ್ನಾನ ಮಾಡಲ್ವಾ ನೀನು?' ಬೊಮ್ಮನಹಳ್ಳಿ ಬಸ್ ಸ್ಥಿತಿ ಕಂಡು ಹೊಸ ಬಸ್ ಅಸಹ್ಯಪಟ್ಟುಕೊಂಡಿತು.

'ಇದರ ರೂಟು ಚೆನ್ನಾಗಿಲ್ಲ. ಕೆಸರು ರಸ್ತೆಯಲ್ಲಿ ಓಡಾಡಿ ಹೀಗಾಗಿದೆ. ನಾವು ಸ್ನಾನ ಮಾಡಬೇಕೆಂದರೆ ಆಯುಧ ಪೂಜೆ ಬರಬೇಕು, ಇಲ್ಲವೆ ಮಳೆ ಬರಬೇಕು'.

'ಇದ್ಯಾವುದು ಅಜ್ಜಿ ಬಸ್?! ಬಾಡಿಯ ಬಣ್ಣ ಬಿಳಿಚಿಕೊಂಡಿದೆ, ಹರಕಲು ಸೀಟು, ಮುರುಕಲು ಡೋರು...' ಹೊಸ ಬಸ್ ಆಡಿಕೊಂಡು ನಕ್ಕಿತು.

'ಡ್ಯಾಷ್ ಹೊಡೆದು ಹೊಸ ಬಸ್‌ನ ಮುಖಮೂತಿ ಜಜ್ಜಿಬಿಡಬೇಕು ಎನ್ನುವಷ್ಟು ಸಿಟ್ಟುಬಂತು ಕೆಂಪನಹಳ್ಳಿ ಬಸ್‌ಗೆ. ಇತರ ಬಸ್‌ಗಳು ತಡೆದವು. 'ಪ್ರಾಯದಲ್ಲಿ ಎಲ್ಲಾ ಬಸ್‌ಗಳೂ ಹೀಗೇ ಆಡುತ್ತವೆ. ವರ್ಷಗಳು ಕಳೆದಮೇಲೆ ಇದೂ ಹಳ್ಳಿ ರೂಟಿಗೆ ಬರ್ತದೆ ಸುಮ್ನಿರು...' ಎಂದು ಸಮಾಧಾನ ಹೇಳಿದವು.

ಸಂಗತ

ಗಂಡಾಳ್ವಿಕೆಯಿಂದ ಗಂಡಿಗೂ ಮುಳುವು!

ಸಾಮಾಜಿಕ ಜಾಲತಾಣದಲ್ಲಿ 'ಗಂಡು' ವಿಕೃತಿ ಸೃಷ್ಟಿಸಲು ಹೆಣ್ಣನ್ನೇ ಅಸ್ತ್ರವಾಗಿಸಿಕೊಳ್ಳಲಾಗುತ್ತಿದೆ

• ಅರುಣ್ ಜೋಳದಕೂಡ್ಲಿಗಿ

ಭಾರತದಲ್ಲಿ ಯಾವುದೇ ಭಾಷೆಯ ನಟ–ನಟಿಯರು ರೂಪುಗೊಳ್ಳುವುದು ಸಿನಿಮಾಕ್ಕೆ ಬೇಕಾದ ಕೆಲವು ಕನಿಷ್ಠ ತರಬೇತಿಗಳ ಮೂಲಕ. ಡಾನ್ಸ್, ಫೈಟ್, ಸಂಗೀತ, ಅಭಿನಯ ತರಬೇತಿ, ದೇಹದಾರ್ಢ್ಯದಂತಹವು ಇದರಲ್ಲಿ ಸೇರಿರುತ್ತವೆ. ಕೆಲವರಂತೂ ಯಾವ ತರಬೇತಿಯೂ ಇಲ್ಲದೆ ಆಕಸ್ಮಿಕ ತಿರುವುಗಳಲ್ಲಿ ನಟ–ನಟಿಯರಾಗಿ ಸಿನಿಮಾರಂಗವನ್ನು ಪ್ರವೇಶಿಸುತ್ತಾರೆ. ನಂತರ ಅವಶ್ಯ ತರಬೇತಿಗಳನ್ನು ಪಡೆದುಕೊಳ್ಳುವವರೂ ಇದ್ದಾರೆ.

ಬಹುಶಃ ಇಂತಹ ಕಲಿಕೆಗಳಲ್ಲಿ, ಭಾರತದಂತಹ ದೇಶದಲ್ಲಿ ಒಬ್ಬ ನಟ–ನಟಿಗೆ ಇರಬೇಕಾದ ಸಾಮಾಜಿಕ ಹೊಣೆಗಾರಿಕೆ ಏನು, ನಮ್ಮ ಸಾಮಾಜಿಕ ಸಂರಚನೆ ಹೇಗೆ ರೂಪುಗೊಂಡಿದೆ, ಸಿನಿಮಾದ ಆಚೆಗಿನ ನಡಾವಳಿ ಯಾವ ರೀತಿಯದ್ದಾಗಿರಬೇಕು ಎಂಬಂತಹ ಸಂಗತಿಗಳನ್ನು ಕಲಿಸುವ ಸಾಧ್ಯತೆ ಕಡಿಮೆ.

ಆದರೆ ಸಮಾಜವನ್ನು ಅರಿಯುವ ವಿಷಯದಲ್ಲಿ ಎಷ್ಟೋ ಸಿನಿಮಾಗಳೇ ಅತ್ಯುತ್ತಮ ಪಾಠಗಳಂತೆ ಇರುತ್ತವೆ. ಕೆಲವರು ಅಂತಹವುಗಳನ್ನೂ ಗಂಭೀರವಾಗಿ ಪರಿಗಣಿಸುವಂತೆ ಕಾಣುವುದಿಲ್ಲ. ಸಾಮಾಜಿಕ ನಡಾವಳಿಗೆ ಸಂಬಂಧಿಸಿದಂತೆ ರಾಜ್‌ಕುಮಾರ್ ಅವರು ಕನ್ನಡದ ನಟ– ನಟಿಯರಿಗೆ ದೊಡ್ಡ ಮಾದರಿ. ಆದರೆ ಈಚಿನ ನಟ–ನಟಿಯರು ರಾಜ್‌ಕುಮಾರ್ ಅವರನ್ನು ಮಾದರಿಯಾಗಿ ಪರಿಭಾವಿಸಿದಂತಿಲ್ಲ. ಹೀಗಾಗಿಯೇ ಸಿನಿಮಾರಂಗದ ಹೆಚ್ಚಿನವರು ಸಿನಿಮಾ ಹೊರತಾಗಿ ಸಾಮಾಜಿಕ ವಿದ್ಯಮಾನಗಳ ಬಗ್ಗೆ ಮಾತನಾಡಿದಾಗ, ಎಷ್ಟು ಪೊಳ್ಳು ವ್ಯಕ್ತಿತ್ವಗಳು ಎನಿಸದೇ ಇರದು.

ಮತ್ತೊಂದು ನೆಲೆಯಲ್ಲಿ, ಭಾರತೀಯ ಸಿನಿಮಾಗಳು ಗಂಡಾಳ್ವಿಕೆಯ ಪಡಿಯಚ್ಚುಗಳು. ಸಮಾಜದಲ್ಲಿ ಗಂಡುಯಜಮಾನಿಕೆ ಮತ್ತಷ್ಟು ಬಿಗಿಯಾಗಲು ಅವು ಹೆಚ್ಚಿನ ಕೊಡುಗೆ ನೀಡಿವೆ. ಗಂಡುಗಳು ತಾವು ಗಂಡುಗಳು ಎನ್ನುವುದನ್ನು ಮರೆಯದಂತೆ ಗಂಡುಯಜಮಾನಿಕೆಯ ಬೀಜಗಳನ್ನು ಬಿತ್ತಿ ನೀರು, ಗೊಬ್ಬರ ಹಾಕಿ ಪೋಷಿಸಿವೆ. ಇಂತಹವನ್ನೆಲ್ಲಾ ಸಿಳ್ಳೆ ಹೊಡೆದೋ ಕೇಕೆ ಹಾಕಿಯೋ ಗೌಜು ಗದ್ದಲಗಳ ಮಧ್ಯೆಯೋ ಸಿನಿಮಾಗಳನ್ನು ನೋಡಿ ಅವುಗಳನ್ನು ಗೆಲ್ಲಿಸಿದ್ದೂ ಗಂಡು ಸಮಾಜವೇ. ಹಾಗಾಗಿ, ಇಂತಹ ಗಂಡುಅಹಮಿಕೆಯ ಚಿತ್ರಗಳಿಗೆಲ್ಲಾ ನಮ್ಮ ಸಮ್ಮತಿಯನ್ನು ಕೊಟ್ಟು ಬೆಳೆಸಿದ್ದೇವೆ.

ಕೆಲವರಾದರೂ ನಟ–ನಟಿಯರು ಸಿನಿಮಾ ಬೇರೆ, ನಿಜಜೀವನ ಬೇರೆ ಎನ್ನುವ ಪರಿಜ್ಞಾನವನ್ನು ಇಟ್ಟುಕೊಂಡು ಕನಿಷ್ಠವಾದರೂ ಸಜ್ಜನಿಕೆಯನ್ನು ಪ್ರದರ್ಶಿಸುತ್ತಾರೆ. ಆದರೆ ಬಹುಪಾಲು ನಟ–ನಟಿಯರು ಸಿನಿಮೀಯವಾಗಿಯೇ ಬದುಕುತ್ತಾರೆ. ಹೀಗೆ ನಡೆದುಕೊಳ್ಳುವವರಲ್ಲಿ ನಟ ದರ್ಶನ್ ಅವರನ್ನೂ ಹೆಸರಿಸಬಹುದು ಎನ್ನಿಸುತ್ತದೆ. ಅವರು ಈವರೆಗೆ ವಿವಾದಗಳಿಗೆ ಸಿಲುಕಿದ ಪ್ರಕರಣಗಳನ್ನು ಮುಂದಿಟ್ಟು, ಸಿನಿಮಾದ ಆಚೆಗಿನ ಅವರ ನಡವಳಿಕೆಗಳನ್ನು ಗಮನಿಸಿದರೆ, ವಾಸ್ತವ ಜಗತ್ತಿನಿಂದ ದೂರವಾದ 'ಹೀರೊಯಿಸಂ' ನಿಜಜೀವನದಲ್ಲೂ ಅವರನ್ನು ಆವರಿಸಿಕೊಂಡಿರುವಂತೆ ಕಾಣುತ್ತದೆ. ಈಗ ಚಿತ್ರದುರ್ಗದ ರೇಣುಕಸ್ವಾಮಿ ಅವರ ಕೊಲೆ ಸಿನಿಮೀಯ ರೀತಿಯಲ್ಲೇ ನಡೆದಿದೆ. ಒಂದುವೇಳೆ ದರ್ಶನ್ ವಿರುದ್ಧದ ಆರೋಪ ಸಾಬೀತಾದರೆ, ನಂತರದ ಪ್ರಕ್ರಿಯೆಗಳು ಅವರಿಗೆ ನಿಜಜೀವನದ ದರ್ಶನ ಮಾಡಿಸಬಹುದು.

ಈ ಪ್ರಕರಣಕ್ಕೆ ಮತ್ತೊಂದು ಮುಖವಿದೆ. ಅದೆಂದರೆ, ರೇಣುಕಸ್ವಾಮಿ ಮಾಡಿದ್ದರು ಎನ್ನಲಾಗುವ ಸೈಬರ್ ಕ್ರೈಮ್. ಇಂತಹ ನಡವಳಿಕೆ ಕೂಡ ಗಂಡಾಳ್ವಿಕೆಯ ಮತ್ತೊಂದು ವಿಕೃತಿ. ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿರುವ ಬಹುತೇಕ ಪುರುಷರಿಗೆ ನೈಜ ಮುಖದೊಂದಿಗೆ ವಿಕೃತ ಮುಖವೂ ಒಂದಿರುತ್ತದೆ. ಸಮಾಜದಲ್ಲಿ ಸಜ್ಜನರಂತೆ ನಟಿಸುವವರು ಸಾಮಾಜಿಕ ಜಾಲತಾಣದಲ್ಲಿ ಗಂಡು ಅಹಮಿಕೆಯ ವಿಕೃತ ಮುಖವನ್ನು ತೋರುತ್ತಾರೆ. ಎಷ್ಟೋ ಹೆಣ್ಣುಮಕ್ಕಳು ಸಾಮಾಜಿಕ ಜಾಲತಾಣದಲ್ಲಿನ ತಮ್ಮ ಖಾತೆಯ ಇನ್‌ಬಾಕ್ಸ್ ಮೆಸೇಜುಗಳನ್ನು ಬಹಿರಂಗಪಡಿಸಿದರೆ, ದೊಡ್ಡ ಗಂಡಾಂತರವೇ ಘಟಿಸಬಹುದು.

ದೆಹಲಿಯ ಜೆಎನ್‌ಯು ಪ್ರೊಫೆಸರ್ ಅರುಣಿಮಾ ಅವರು ವಿಶ್ಲೇಷಿಸುವಂತೆ, ಸಾಮಾಜಿಕ ಜಾಲತಾಣದಲ್ಲಿ ಹೆಣ್ಣಿನ ಹೆಸರಿನಲ್ಲಿ ಗಂಡುಗಳು ನಕಲಿ ಖಾತೆ ಸೃಷ್ಟಿಸಿ, ಆ ಮೂಲಕ ಗಂಡುಗಳೊಂದಿಗೆ ಯಾವ ನಿರ್ಬಂಧವೂ ಇಲ್ಲದಂತೆ ವ್ಯವಹರಿಸುತ್ತಾರೆ. ಹೀಗಾಗಿ, ಅವರ ಮನಸ್ಸುಗಳಲ್ಲಿ ಸದಾ ಕಾಮಕ್ಕೆ ಹಪಹಪಿಸುವ 'ಹೆಣ್ಣಿನ' ಚಿತ್ರ ಮೂಡಿರುತ್ತದೆ. ಅಂತಹ ಗಂಡಸರು ನೈಜ ಸಮಾಜದ ಹೆಣ್ಣುಗಳನ್ನೂ ಹಾಗೆಯೇ ನೋಡುತ್ತಾರೆ. ಸಮಾಜದಲ್ಲಿ ಅತ್ಯಾಚಾರದ ಪ್ರಮಾಣ ಹೆಚ್ಚಾಗಲು ಇದೂ ಒಂದು ಕಾರಣ ಎನ್ನುತ್ತಾರೆ.



ಅಂದರೆ, ಸಾಮಾಜಿಕ ಜಾಲತಾಣದಲ್ಲಿ ಕೃತಕವಾದ 'ಗಂಡು' ವಿಕೃತಿಗಳನ್ನು ಸೃಷ್ಟಿಸಲು ಹೆಣ್ಣನ್ನೇ ಅಸ್ತ್ರವನ್ನಾಗಿಸಿಕೊಳ್ಳಲಾಗುತ್ತಿದೆ. ದರ್ಶನ್ ಪ್ರಕರಣದಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಹುಟ್ಟಿದ ಗಂಡು 'ವಿಕೃತಿ'ಯನ್ನು ಸಿನಿಮೀಯ 'ಗಂಡು' ಅಹಮಿಕೆ ದಮನಿಸಲು ಸೆಣಸಾಡಿದಂತೆ ಕಾಣುತ್ತಿದೆ. ಇದು ಗಂಡುಯಜಮಾನಿಕೆಯು ಕೊನೆಗೆ ಗಂಡುಗಳನ್ನೂ ಬಲಿ ಪಡೆಯುತ್ತದೆ ಎನ್ನುವುದರ ಸಂಕೇತದಂತೆ ಇದೆ.

ಅಮೆರಿಕದ ಸ್ತ್ರೀವಾದಿ ಚಿಂತಕಿ ಬೆಲ್‌ಹುಕ್ಸ್ ತಮ್ಮ 'ಫೆಮಿನಿಸಂ ಈಸ್ ಫಾರ್ ಎವೆರಿಬಡಿ: ಪ್ಯಾಶನೇಟ್ ಪಾಲಿಟಿಕ್ಸ್' ಕೃತಿಯಲ್ಲಿ, ಗಂಡಾಳ್ವಿಕೆ ಹೇಗೆ ಅಂತಿಮವಾಗಿ ಗಂಡುಗಳನ್ನೂ ವಿನಾಶದತ್ತ ಒಯ್ಯುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಹಾಗಾಗಿ, 'ಮಹಿಳಾವಾದ' ಸ್ವತಃ ಗಂಡುಲೋಕದ ಉಳಿವಿಗೂ ಬೇಕಾಗಿದೆ. ಗಂಡುಗಳ ಒಳಗೂ ಎಲ್ಲರನ್ನೂ ಪೊರೆವ ತಾಯ್ತನದ ಹೆಣ್ಣಿನ ಕಣ್ಣೋಟ ಚಿಗುರೊಡೆದಾಗ ಮಾತ್ರ ಗಂಡಾಳ್ವಿಕೆಯು ನಿಧಾನವಾಗಿ ಗಂಡು– ಹೆಣ್ಣಿನ ಭೇದರಹಿತ ಸಮತೆಯತ್ತ ಚಲಿಸುತ್ತದೆ ಎನ್ನುತ್ತಾರೆ. ಹೀಗೆ ರೇಣುಕಸ್ವಾಮಿ ಕೊಲೆ ಪ್ರಕರಣವು ಗಂಡಾಳ್ವಿಕೆಯ ಮನಃಸ್ಥಿತಿ ಅಂತಿಮವಾಗಿ ಗಂಡಿಗೇ ಹೇಗೆ ಮುಳುವಾಗಬಹುದು ಎನ್ನುವುದಕ್ಕೆ ನಿದರ್ಶನ. ಗಂಡುಗಳು ಇನ್ನಾದರೂ ತಮ್ಮೊಳಗಿನ ಗಂಡುಅಹಮಿಕೆಯನ್ನು ಚೂರು ಚೂರಾದರೂ ದಹಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ರಾಜಕೀಯದಲ್ಲಿ ಮಹಿಳೆಯರು ಕರಿಬೇವಲ್ಲ!

'ನಿಜವಾದ 'ಸೇವಕ'ನಲ್ಲಿ ಅಹಂಕಾರ ಇರುವುದಿಲ್ಲ, ಆತ ಇನ್ನೊಬ್ಬರಿಗೆ ನೋವುಂಟು ಮಾಡದೆಯೇ ಕೆಲಸ ಮಾಡುತ್ತಾನೆ. ವಿರೋಧ ಪಕ್ಷ ಎಂಬುದು ಎದುರಾಳಿ ಅಲ್ಲ' ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿರುವುದು ಸರಿಯಾಗಿದೆ. ಈ ಬಾರಿಯ ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಬಿಜೆಪಿ ನಾಯಕರಲ್ಲಿ ಅಹಂಕಾರ ಎದ್ದುಕಾಣುತ್ತಿತ್ತು ಎಂಬುದನ್ನು ಈ ಮಾತು ಪರೋಕ್ಷವಾಗಿ ಧ್ವನಿಸುತ್ತದೆ. ಇದು ಒಬ್ಬ ನಾಯಕ ಯಾವುದೇ ರಾಜಕೀಯ ಪಕ್ಷದ ಮುಖಂಡರಿಗೆ ನೀಡಬೇಕಾದ ತಿಳಿವಳಿಕೆಯೇ ಆಗಿದೆ. ಇದನ್ನು ರಾಜಕೀಯ ಮುಖಂಡರು ಅರ್ಥ ಮಾಡಿಕೊಳ್ಳಬೇಕು. ಅದರಲ್ಲೂ ದೇವರು, ಧರ್ಮವನ್ನು ಚುನಾವಣೆಯ ಅಸ್ತ್ರವನ್ನಾಗಿಸಿಕೊಳ್ಳುವ ವಿದ್ಯಮಾನ ಖಂಡಿತ ಬದಲಾಗಬೇಕು. ಇಂತಹ ಬದಲಾವಣೆಯ ಹಿಂದೆ ಜನಾಂದೋಲನ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. 'ಪ್ರಸಕ್ತ ಲೋಕಸಭಾ ಚುನಾವಣೆಯ ಫಲಿತಾಂಶವು ಪ್ರಜಾತಂತ್ರದ ಉಳಿವಿನ ದೃಷ್ಟಿಯಿಂದ ಒಂದು ಸಣ್ಣ ಸಮಾಧಾನವನ್ನಾದರೂ ತಂದಿದ್ದರೆ, ಅದರ ಹಿಂದೆ ಜನಾಂದೋಲನದ ಪಾತ್ರ ಇದೆ' ಎಂಬ ಅಭಿಪ್ರಾಯ ಹೊಂದಿರುವ ನಾರಾಯಣ ಎ. ಅವರ ಲೇಖನ (ಪ್ರ.ವಾ., ಜೂನ್ 12) ಇದಕ್ಕೆ ಪೂರಕವಾಗಿದೆ. ನಿಜವಾದ ಪ್ರಜಾಪ್ರಭುತ್ವಕ್ಕೆ ಬೆಲೆ ಸಿಗಬೇಕಾದರೆ ಜನಾಂದೋಲನ ಮುಖ್ಯವಾಗುತ್ತದೆ. ಈ ದಿಸೆಯಲ್ಲಿ ನಮ್ಮ ಮತದಾರರು ವಿಚಾರ ಮಾಡಬೇಕು.

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿಗೆ ಅವಕಾಶ ಕಲ್ಪಿಸುವ ಮಸೂದೆಯು ಸಂಸತ್ತಿನ ಉಭಯ ಸದನಗಳಲ್ಲಿ ಅನುಮೋದನೆ ಪಡೆದಿರುವುದರಿಂದ, ಈ ಬಾರಿಯ ಲೋಕಸಭಾ ಚುನಾವಣೆಯ ಹೊತ್ತಿಗೆ ಈ ಸಂಬಂಧ ರೂಪುರೇಷೆ ತಯಾರಾಗಬೇಕಿತ್ತು. ಆದರೆ ರಾಜಕೀಯ ಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ ಕನಿಷ್ಠಪಕ್ಷ ಶೇ 15ರಿಂದ 20ರಷ್ಟು ಸೀಟುಗಳನ್ನಾದರೂ ಮಹಿಳೆಯರಿಗೆ ನೀಡುತ್ತವೆ ಎಂಬ ನಿರೀಕ್ಷೆ ಹುಸಿಯಾಗಿದೆ. ಮತದಾನಕ್ಕೆ ಮಾತ್ರ ಮಹಿಳೆಯರು ಬೇಕು, ರಾಜಕೀಯಕ್ಕೆ ಬೇಡ ಎನ್ನುವುದು ಮಹಿಳೆಯರನ್ನು ಒಗ್ಗರಣೆಗೆ ಕರಿಬೇವನ್ನು ಬಳಸಿಕೊಂಡು ನಂತರ ಬಿಸಾಡುವ ರೀತಿಯ ಧೋರಣೆಯೇ ಸರಿ. ಪಕ್ಷಗಳು ಇನ್ನು ಮುಂದಾದರೂ ಇಂತಹ ಮನೋಭಾವದಿಂದ ಹೊರಬಂದು ಮಹಿಳೆಯರಿಗೆ ಸೂಕ್ತ ರಾಜಕೀಯ ಸ್ಥಾನಮಾನ ಕಲ್ಪಿಸಬೇಕು. ಈ ಮೂಲಕ ಸಮಾನತೆಯ ತತ್ವವನ್ನು ನಿಜವಾದ ಅರ್ಥದಲ್ಲಿ ಜಾರಿಗೆ ತರಲು ಮುಂದಾಗಬೇಕು.

ಮೋಟಮ್ಮ, ಮೂಡಿಗೆರೆ

ಅಭಿಮಾನ ಮಿತಿಮೀರದಿರಲಿ

ಹಿಂದೆಲ್ಲಾ ಚಲನಚಿತ್ರ ನಾಯಕರ ಅಭಿಮಾನಿ ಸಂಘಗಳು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದವು. ತಮ್ಮ ಆದರ್ಶ ನಾಯಕನ ಘನತೆ, ಗೌರವ ಹೆಚ್ಚಿಸುವ ಕೆಲಸ ಮಾಡುತ್ತಿದ್ದ ಉದಾಹರಣೆಗಳಿದ್ದವು. ನಾಯಕರೂ ಅದಕ್ಕೆ ತಕ್ಕಂತೆ ಆದರ್ಶಪ್ರಾಯ ನಡವಳಿಕೆಗಳಿಂದ ಜನಮನ್ನಣೆ ಗಳಿಸಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬಹುತೇಕ ನಾಯಕನಟರು ಅನುಕರಣೀಯ ಮಾದರಿಯಾಗಿ ಉಳಿದಿಲ್ಲ. 'ಯಥಾ ರಾಜ ತಥಾ ಪ್ರಜಾ' ಎನ್ನುವಂತೆ ಈ ನಾಯಕನಟರ ಅಭಿಮಾನಿಗಳೂ ಅಂಧಾಭಿಮಾನದಿಂದ ವಿವೇಚನೆ ಮರೆತು, ತಮ್ಮ ನಾಯಕನ ಕುಕೃತ್ಯಗಳಿಗೆ ಕುಮ್ಮಕ್ಕು ನೀಡುವ ಹಂತ ತಲುಪಿದ್ದಾರೆ. ಅಂಧಾಭಿಮಾನದ ಅಫೀಮು ಉದಾತ್ತ ಉದ್ದೇಶಗಳನ್ನು ಮರೆಸಿ ಗುಂಪುಘರ್ಷಣೆ ಮತ್ತು ದ್ವೇಷಸಾಧನೆಗೆ ಎಡೆಮಾಡಿಕೊಡುತ್ತದೆ. ಕೆಲವೊಮ್ಮೆ ಇಬ್ಬರು ನಾಯಕರ ಅಭಿಮಾನಿಗಳು ಪರಸ್ಪರ ಸಂಘರ್ಷಕ್ಕೆ ಇಳಿಯುವುದೂ ಇದೆ. ಇದರಿಂದ ಕಾನೂನು ಸುವ್ಯವಸ್ಥೆ ಹಾಳಾಗುವ ಸಂಭವವಿರುತ್ತದೆ. ತಮ್ಮ ತಮ್ಮ ನೆಚ್ಚಿನ ನಾಯಕರ ಬಗ್ಗೆ ವೈಯಕ್ತಿಕವಾಗಿ ಅಭಿಮಾನವಿರಲಿ, ಅವರು ನಟಿಸಿದ ಚಿತ್ರ ಬಿಡುಗಡೆಯಾದಾಗ ಸಂಭ್ರಮವಿರಲಿ, ಸಡಗರವಿರಲಿ. ಆದರೆ ಅಭಿಮಾನಿ ಸಂಘಗಳ ವರ್ತನೆ ಯಾವುದೇ ಕಾರಣಕ್ಕೂ ಮಿತಿಮೀರದಿರಲಿ.

ಎಲ್.ಅನುಗ್ರಹ ನಾರಾಯಣ್, ಬೆಂಗಳೂರು

ಆ ಮನೆಯ ದೀಪ ಬೆಳಗಿ...

ನೀವು ಕಟೌಟ್ ಮೇಲೆ ವ್ಯರ್ಥವಾಗಿ ಸುರಿದು ಚರಂಡಿ ಪಾಲಾಗುವ ಹಾಲಿನ ಹರಿವಿನಲ್ಲಿ ಒಂದು ಕುಡಿತೆಯನ್ನಾದರೂ ಆ ಗರ್ಭಿಣಿಗೆ ನೀಡಿ, ಹುಟ್ಟಲಿರುವ ಕಂದಮ್ಮ ಗಟ್ಟಿಯಾಗಲಿ... ಲಕ್ಷಲಕ್ಷ ರೂಪಾಯಿಯ ಪಟಾಕಿ ಸುಟ್ಟು ಬಿರುಸು ಬಾಣಗಳ ಉರಿಸುವ ಉರಿಯಲೊಂದು ಕಿಡಿಯಿಂದ ಆ ಮನೆಯ ದೀಪ ಹಚ್ಚಿ, ಕತ್ತಲು ತುಂಬಿರುವ ಮನೆಗೆ ಬೆಳಕಾಗಿ... ರಸ್ತೆಯಲ್ಲಿ ಸುರಿವ ಟನ್ನುಗಟ್ಟಲೆ ಹೂವಿನ ರಾಶಿಯಲ್ಲಿ ಒಂದೆಸಳನ್ನಾದರೂ ಆ ನತದೃಷ್ಟನ ಭಾವಚಿತ್ರಕ್ಕೆ ಅರ್ಪಿಸಿ ಕ್ಷಮೆ ಕೇಳಿ...

ಜೆ.ಬಿ.ಮಂಜುನಾಥ, ಪಾಂಡವಪುರ

ಜನಸಾಮಾನ್ಯರ ಮೇಲೆ ತೆರಿಗೆ ಹೊರೆ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಇದೇ 22ರಂದು ನಡೆಯಲಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 53ನೇ ಸಭೆಯಲ್ಲಿ, ಆನ್‌ಲೈನ್ ಗೇಮಿಂಗ್ ವಲಯದ ಮೇಲೆ ವಿಧಿಸಿರುವ ಶೇ 28ರಷ್ಟು ಜಿಎಸ್‌ಟಿ ಕುರಿತಂತೆ ಪರಾಮರ್ಶೆ ನಡೆಯುವ ಸಾಧ್ಯತೆ ಇರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 14). ಆದರೆ ಇದೇ ಜಿಎಸ್‌ಟಿ ಮಂಡಳಿಯು ಮೊಸರು, ಅಕ್ಕಿ, ಕಾಫಿ, ಟೀ, ಹೋಟೆಲ್ ತಿಂಡಿಯಂಥ ಪದಾರ್ಥಗಳ ಮೇಲೆ ಜಿಎಸ್‌ಟಿ ವಿಧಿಸಿರುವುದು ಮಧ್ಯಮ ವರ್ಗದ ಜನರಿಗೆ ಹೊರೆಯಾಗಿದೆ. ಹೋಟೆಲ್‌ಗಳು ಪ್ರತಿ ಬಾರಿಯೂ ತಿಂಡಿ ಪದಾರ್ಥಗಳ ಬೆಲೆ ಏರಿಸುವ ಮೂಲಕ ಎಲ್ಲ ತೆರಿಗೆಯನ್ನೂ ಗ್ರಾಹಕರಿಂದಲೇ ವಸೂಲು ಮಾಡುತ್ತವೆ. ವರ್ಗ 3 ಹಾಗೂ ಅದಕ್ಕಿಂತ ಕೆಳ ಹಂತದ ಹೋಟೆಲ್‌ಗಳಲ್ಲಿ ಊಟ, ತಿಂಡಿಗಳ ಮೇಲಿನ ಜಿಎಸ್‌ಟಿ ತೆಗೆದುಹಾಕುವುದು ಸೂಕ್ತ.

ಐಷಾರಾಮಿ ಕಾರನ್ನು ಸಹ ತೆರಿಗೆ ಪಾವತಿಸಿಯೇ ಕೊಳ್ಳಲಾಗಿರುತ್ತದೆ. ನಾವು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇವೆ ಎಂದು ಹೇಳುತ್ತಾ ಜಿಎಸ್‌ಟಿ, ಹೆದ್ದಾರಿ ಟೋಲ್‌ನಂತಹ ತೆರಿಗೆಗಳನ್ನು ಭಾರಿ ಪ್ರಮಾಣದಲ್ಲಿ ವಿಧಿಸಿದರೆ, ಯಾವುದೇ ಕೈಗಾರಿಕೆ, ಉದ್ಯಮಿ ಅಥವಾ ಅಂಗಡಿ ಮಾಲೀಕ ಅದನ್ನು ತಮ್ಮ ಕೈಯಿಂದ ಕೊಡುವುದಿಲ್ಲ. ಬದಲಾಗಿ, ತಾವು ಮಾರುವ, ಉತ್ಪಾದಿಸುವ ವಸ್ತುಗಳ ಮೇಲೆ ಹಾಕುತ್ತಾರೆ. ಸಹಜವಾಗಿಯೇ ಈ ಹೊರೆ ಜನಸಾಮಾನ್ಯರ ಮೇಲೆ ಬೀಳುತ್ತದೆ. ಆದ್ದರಿಂದ ತೆರಿಗೆಗಳನ್ನು ಸರಳಗೊಳಿಸಬೇಕಿದೆ.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಪುಟಿದೆದ್ದ ಬಗೆ...

● ಯೋಗೇಂದ್ರ ಯಾದವ್, ರಾಹುಲ್ ಶಾಸ್ತ್ರಿ, ಶ್ರೇಯಸ್ ಸರ್ದೇಸಾಯಿ

ನೀವು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿ ಇರುವವರಾದರೆ, ಕಳೆದ ವಾರ ಒಂದು ಮೀಮ್ ಚಿತ್ರವನ್ನು ನೋಡಿಯೇ ಇರುತ್ತೀರಿ. ಅದರಲ್ಲಿ ಒಬ್ಬ ವ್ಯಕ್ತಿ ಶೇ 85ರಷ್ಟು ಅಂಕ ಪಡೆದಿದ್ದರೂ ಬಹಳ ಬೇಸರದಲ್ಲಿ ಇದ್ದಾನೆ. ಮತ್ತೊಬ್ಬ ವ್ಯಕ್ತಿ ಶೇ 45ರಷ್ಟು ಅಂಕ ಗಳಿಸಿಯೂ ಬಹಳ ಉತ್ಸಾಹ ಮತ್ತು ಸಂಭ್ರಮದಲ್ಲಿ ಇದ್ದಾನೆ. ಈ ಚಿತ್ರವನ್ನು ಗೇಲಿ ಮಾಡುವ ಉದ್ದೇಶದಿಂದ ಹಂಚಿಕೊಳ್ಳಲಾಗಿತ್ತು. ತಮಾಷೆ ಏನೆಂದರೆ, ಇದು ತಮಾಷೆಯ ವಿಷಯವೇ ಅಲ್ಲ. ಬಿಜೆಪಿಯು ತನಗೆ ಗೊತ್ತಿಲ್ಲದೇ ಹಂಚಿಕೊಂಡ ಈ ರೀತಿಯ ಟ್ರೋಲ್‌ಗಳು ರಾಜಕೀಯದ ಆಳವಾದ ವಿಷಯವೊಂದನ್ನು ಧ್ವನಿಸಿತ್ತು ಮತ್ತು ಅದು ಈ ಬಾರಿಯ ಫಲಿತಾಂಶಕ್ಕೆ ಹಿಡಿದ ಕನ್ನಡಿಯಂತಿತ್ತು.

ಬಿಜೆಪಿಯ 240 ಸ್ಥಾನಗಳಿಗೆ ಹೋಲಿಸಿಕೊಂಡರೆ, ಕಾಂಗ್ರೆಸ್ ಪಡೆದುಕೊಂಡ 99 ಸ್ಥಾನಗಳು ದೊಡ್ಡ ಸಂಖ್ಯೆಯೇನಲ್ಲ. ಹೌದು, ಇದು ಕಾಂಗ್ರೆಸ್ ಗಳಿಸಿದ ಮೂರನೇ ಅತ್ಯಂತ ಕಡಿಮೆ ಸ್ಥಾನಗಳು. ಆದರೆ ರಾಜಕೀಯದಲ್ಲಿ ಕೇವಲ ಸಂಖ್ಯೆಗಳೇ ಎಲ್ಲ ಕಥೆಗಳನ್ನೂ ಹೇಳುವುದಿಲ್ಲ. ನಿಜ ಸಂಗತಿ ಏನೆಂದರೆ, 1980ರ ಬಳಿಕ ಕಾಂಗ್ರೆಸ್ ಮತ್ತೆ ಪುಟಿದೆದ್ದ ಎರಡನೇ ನಿದರ್ಶನ ಇದು. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು, ನೈತಿಕವಾಗಿ ಬಹಳ ಕುಸಿದಿತ್ತು. ಪಕ್ಷವು 44 ಹಾಗೂ 52 ಸ್ಥಾನಗಳನ್ನಷ್ಟೇ ಪಡೆದುಕೊಂಡಿತ್ತು. ಇನ್ನೂ ದಯನೀಯ ಸ್ಥಿತಿ ಎಂದರೆ, 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದುಕೊಂಡಿದ್ದ 52 ಕ್ಷೇತ್ರಗಳ ಪೈಕಿ, 32 ಕ್ಷೇತ್ರಗಳು ಮೂರೇ ರಾಜ್ಯಗಳಿಂದ (ಕೇರಳ, ತಮಿಳುನಾಡು ಮತ್ತು ಪಂಜಾಬ್) ಬಂದಿದ್ದವು. ಈ ಯಾವ ರಾಜ್ಯಗಳಲ್ಲಿಯೂ ಬಿಜೆಪಿಯು ಕಾಂಗ್ರೆಸ್‌ನ ನೇರ ಎದುರಾಳಿ ಆಗಿರಲಿಲ್ಲ. ಜೊತೆಗೆ, ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷವು ಡಿಎಂಕೆ ಜತೆಗಿನ ಮೈತ್ರಿಕೂಟದಲ್ಲಿ ಕಿರಿಯ ಮಿತ್ರಪಕ್ಷವಾಗಿತ್ತು.

ಈ ಬಾರಿ 400ರ ಗಡಿ ದಾಟುವ (ಅಬ್ ಕಿ ಬಾರ್ 400 ಪಾರ್) ಬಿಜೆಪಿಯ ಆರ್ಭಟದ ಘೋಷಣೆಯ ಹಿಂದೆ ಇದ್ದ ನಿಜವಾದ ಗುರಿ, ಕಾಂಗ್ರೆಸ್ ಅನ್ನು ಇನ್ನಷ್ಟು ಕುಗ್ಗಿಸುವುದೇ ಆಗಿತ್ತು. ರಾಷ್ಟ್ರ ಮಟ್ಟದಲ್ಲಿ ತನಗೆ ಎದುರಾಳಿಯಾಗಿರುವ, ಸೈದ್ಧಾಂತಿಕ ಎದುರಾಳಿಯೂ ಆಗಿರುವ ಮತ್ತು ಪ್ರಬಲ ಪೈಪೋಟಿ ನೀಡಲು ಸಾಧ್ಯವಿರುವ ಕಾಂಗ್ರೆಸ್ ಅನ್ನು ರಾಷ್ಟ್ರ ರಾಜಕಾರಣದಿಂದ ಇಲ್ಲವಾಗಿಸುವ ಹವಣಿಕೆಯೂ ಈ ಆರ್ಭಟದ ಘೋಷಣೆಯ ಹಿಂದೆ ಇತ್ತು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 40ಕ್ಕಿಂತ ಕಡಿಮೆ ಸ್ಥಾನಗಳಿಗೆ ಕುಸಿಯಲಿದೆ ಮತ್ತು ಕಾಂಗ್ರೆಸ್ 'ದಕ್ಷಿಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್' ಎಂದಾಗಲಿದೆ ಎಂಬ ಮಾತನ್ನು ಚಾಲ್ತಿಗೆ ತರಲಾಗಿತ್ತು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಧೃತಿಗೆಡದ ಕಾಂಗ್ರೆಸ್ ತನ್ನ ನೆಲೆಯಲ್ಲಿ ಬಲವಾಗಿ ನಿಂತಿತು ಮತ್ತು ತನ್ನ ಸ್ಥಾನಗಳನ್ನು ದ್ವಿಗುಣ ಮಾಡಿಕೊಂಡಿತು.

ಎಲ್ಲ ರೀತಿಯಲ್ಲಿಯೂ ಕಾಂಗ್ರೆಸ್ ಈ ಬಾರಿ ಗಳಿಕೆಯನ್ನೇ ಮಾಡಿದೆ. ಹಿಂದಿ ಭಾಷಿಕ ಪ್ರದೇಶಗಳಲ್ಲಿ, ಅಂದರೆ ಹರಿಯಾಣದಿಂದ ಬಿಹಾರದ ವ್ಯಾಪ್ತಿಯಲ್ಲಿ 5 ಸ್ಥಾನಗಳನ್ನು ಕಳೆದ ಚುನಾವಣೆಯಲ್ಲಿ ಗಳಿಸಿಕೊಂಡಿತ್ತು. ಈ ಚುನಾವಣೆಯಲ್ಲಿ ಈ ಸಂಖ್ಯೆಯನ್ನು ಪಕ್ಷವು 23ಕ್ಕೆ ಏರಿಸಿಕೊಂಡಿದೆ. ತನ್ನ ಭದ್ರನೆಲೆಯಾಗಿದ್ದ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವು, ಬಿಜೆಪಿಗೆ ಬಿಟ್ಟುಕೊಡದೆ, ಹೆಚ್ಚಿನ ಮತಗಳನ್ನು ತಾನೇ ಗಳಿಸಿಕೊಂಡಿದೆ. ಪಂಜಾಬ್‌ನಲ್ಲಿ ಬಿಜೆಪಿಗೆ ಒಂದು ಸ್ಥಾನವನ್ನೂ ಗೆಲ್ಲುವ ಅವಕಾಶವನ್ನು ಕಾಂಗ್ರೆಸ್ ಮಾಡಿಕೊಡಲಿಲ್ಲ. ಜನಾಂಗೀಯ ಸಂಘರ್ಷ ಪೀಡಿತವಾಗಿರುವ ಮಣಿಪುರದ ಎರಡೂ ಕ್ಷೇತ್ರಗಳನ್ನು, ನಾಗಾಲ್ಯಾಂಡ್ ಹಾಗೂ ಮೇಘಾಲಯದಲ್ಲಿ ಒಂದೊಂದು ಕ್ಷೇತ್ರಗಳನ್ನು ಗೆಲ್ಲುವುದರ ಮೂಲಕ ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಗಣನೀಯ ರೀತಿಯಲ್ಲಿ ಮರುಗಳಿಸಿಕೊಂಡಿದೆ. ಈ ಹಗ್ಗಜಗ್ಗಾಟದಲ್ಲಿ ವಿಪಕ್ಷಗಳ ತಂಡದಲ್ಲಿ ದುರ್ಬಲ ಕೊಂಡಿಯಾಗಿದ್ದ ಕಾಂಗ್ರೆಸ್, ಈಗ ತನ್ನ ನೆಲವನ್ನು ಗಟ್ಟಿಗೊಳಿಸಿಕೊಂಡು ಪಟ್ಟುಬಿಗಿಗೊಳಿಸಿದೆ.

ಈ ಫಲಿತಾಂಶದ ನಿಜವಾದ ಕಥೆಯು ಮತಪ್ರಮಾಣದಲ್ಲಿ ಅಡಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್‌ನ ಮತ ಪ್ರಮಾಣವು 1.7 ಶೇಕಡವಾರು ಅಂಶಗಳಷ್ಟು ಹೆಚ್ಚಾಗಿದೆ.

ಆದರೆ ಈ ಸಂಖ್ಯೆ ಕಾಂಗ್ರೆಸ್ ಪುಟಿದೆದ್ದ ನಿಜವಾದ ಕತೆಯನ್ನು ಹೇಳುವುದಿಲ್ಲ. ಏಕೆಂದರೆ 2019ರಲ್ಲಿ ತಾನು ಸ್ಪರ್ಧಿಸಿದ್ದಕ್ಕಿಂತ 93ರಷ್ಟು ಕಡಿಮೆ ಕ್ಷೇತ್ರಗಳಲ್ಲಿ, ಕಾಂಗ್ರೆಸ್ ಕಣಕ್ಕೆ ಇಳಿದಿತ್ತು. ಹೀಗೆ ಕಾಂಗ್ರೆಸ್ ಕಣಕ್ಕೆ ಇಳಿದಿದ್ದ ಕ್ಷೇತ್ರಗಳಲ್ಲಿ ಚಲಾವಣೆಯಾದ ಮತಗಳನ್ನು ಗಮನಿಸಬೇಕು. 2019ರ ಚುನಾವಣೆಗೆ ಹೋಲಿಸಿದರೆ 2024ರ ಚುನಾವಣೆಯಲ್ಲಿ, ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಮತ ಪ್ರಮಾಣದಲ್ಲಿ 9.8 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಇದನ್ನು ಬಿಜೆಪಿಗೆ ಹೋಲಿಸಿದರೆ ನಿಜವಾದ ಚಿತ್ರಣ ದೊರೆಯಲಿದೆ. ಕಾಂಗ್ರೆಸ್ ತಾನು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಅದರ ಮತ ಪ್ರಮಾಣ 9.8 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದ್ದರೆ, ಬಿಜೆಪಿ ತಾನು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಅದರ ಮತ ಪ್ರಮಾಣವು 1.6 ಶೇಕಡಾವಾರು ಅಂಶಗಳಷ್ಟು ಕುಸಿದಿದೆ.

ಕಾಂಗ್ರೆಸ್ ಯಾವೆಲ್ಲಾ ರಾಜ್ಯಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಕಿರಿಯ ಮಿತ್ರಪಕ್ಷವಾಗಿ ಅಥವಾ ಸರಿಸಮನಾದ ಮಿತ್ರಪಕ್ಷವಾಗಿ ಕಣಕ್ಕೆ ಇಳಿದಿತ್ತೋ, ಆ ರಾಜ್ಯಗಳಲ್ಲೇ ಕಾಂಗ್ರೆಸ್ ಗಣನೀಯ ಮತ ಗಳಿಕೆ ಸಾಧಿಸಿದೆ. ಇಂತಹ ರಾಜ್ಯಗಳಲ್ಲಿ ಕಾಂಗ್ರೆಸ್ ತಾನು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ, ಅದರ ಮತ ಪ್ರಮಾಣವು 22.8 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಆದರೆ 'ಇಂಡಿಯಾ' ಮೈತ್ರಿಕೂಟದ ಪ್ರಧಾನ ಮಿತ್ರಪಕ್ಷವಾಗಿ ಮತ್ತು ಸ್ವತಂತ್ರವಾಗಿ ಸ್ಪರ್ಧಿಸಿದ್ದ ರಾಜ್ಯಗಳಲ್ಲಿ, ಕಾಂಗ್ರೆಸ್ ಕಣಕ್ಕೆ ಇಳಿದಿದ್ದ ಕ್ಷೇತ್ರಗಳ ಮತಪ್ರಮಾಣದಲ್ಲಿ ಆದ ಏರಿಕೆ 3 ಶೇಕಡಾವಾರು ಅಂಶಗಳಷ್ಟು ಮಾತ್ರ.

ಇವೆಲ್ಲಾ ಆರಂಭ ಮಾತ್ರ. ಹೀಗಾಗಿ ಇಷ್ಟಕ್ಕೇ ತೃಪ್ತಿಪಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಈ ಸಾಫಲ್ಯದ ನಡುವೆಯೂ ಪರಾಮರ್ಶೆಗೆ ಒಳಪಡಿಸಬೇಕಾದ ಹಲವು ವೈಫಲ್ಯಗಳು ಕಾಂಗ್ರೆಸ್ ಮುಂದಿವೆ. ತೆಲಂಗಾಣದಲ್ಲಿ ಪ್ರಧಾನ ಪಕ್ಷವಾಗಿ ಸ್ಥಾಪಿತವಾದರೂ ಬಿಆರ್‌ಎಸ್‌ನ ಮತ ಸಮುದಾಯವನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಈವರೆಗೆ ಬಿಜೆಪಿಯೊಟ್ಟಿಗೆ ಕೈಜೋಡಣೆ ಮತ್ತು ದೂರಸರಿಯುವುದನ್ನೇ ಪುನರಾವರ್ತಿಸಿದ ಒಡಿಶಾದ ಬಿಜೆಡಿಗೆ ಪರ್ಯಾಯ ಶಕ್ತಿಯಾಗಿ ರೂಪುಗೊಳ್ಳುವ ಸುವರ್ಣ ಅವಕಾಶವನ್ನು ಕಾಂಗ್ರೆಸ್ ಕೈಚೆಲ್ಲಿದೆ. ಕರ್ನಾಟಕದಲ್ಲಿ ತಾನು ನೀಡಿದ್ದ 'ಗ್ಯಾರಂಟಿ'ಗಳೆಲ್ಲವನ್ನೂ ಅನುಷ್ಠಾನಕ್ಕೆ ತಂದುದರ ಲಾಭವನ್ನು ಗಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಇನ್ನು ಗುಜರಾತ್, ಮಧ್ಯಪ್ರದೇಶ, ಛತ್ತೀಸಗಡ ಮತ್ತು ಉತ್ತರಾಖಂಡದಲ್ಲಿ ಕಾಂಗ್ರೆಸ್ ಇನ್ನಷ್ಟೇ ದಾರಿ ಮಾಡಿಕೊಳ್ಳಬೇಕಿದೆ. ಪಶ್ಚಿಮ ಬಂಗಾಳದಲ್ಲಿ ಸಾಧ್ಯವಿದ್ದ ಪ್ರಬಲ ಮೈತ್ರಿಯನ್ನು ಕಳೆದುಕೊಂಡಿತು. ಆ ಮೂಲಕ ಕಾಂಗ್ರೆಸ್ ಬಿಜೆಪಿಗೆ ಆರು ಕ್ಷೇತ್ರಗಳನ್ನು ಉಡುಗೊರೆಯಾಗಿ ನೀಡಿತು. ತಾನು 15 ವರ್ಷ ಆಳ್ವಿಕೆ ನಡೆಸಿದ್ದ ದೆಹಲಿಯಲ್ಲಿ ಕಾಂಗ್ರೆಸ್ ಇನ್ನೂ ಚೇತರಿಸಿಕೊಳ್ಳಬೇಕಿದೆ.

ರಾಜಕಾರಣದ ಈ 'ಅನ್‌ಲಿಮಿಟೆಟ್ ಟೆಸ್ಟ್ ಮ್ಯಾಚ್'ನಲ್ಲಿ ಕಾಂಗ್ರೆಸ್ ಆಡಬೇಕಿರುವ ಆಟ ಇನ್ನಷ್ಟಿದೆ. ಕೆಟ್ಟ ಪಿಚ್, ದಾಳಿಕೋರ ಬೌಲರ್‌ಗಳು, ಭ್ರಷ್ಟ ಅಂಪೈರ್‌ಗಳು ಮತ್ತು ತನ್ನ ವಿರುದ್ಧವೇ ಇದ್ದ ಕಾಮೆಂಟೇಟರ್‌ಗಳ ಮಧ್ಯೆಯೂ ಕಾಂಗ್ರೆಸ್ ಗಳಿಸಿದ '99 ನಾಟ್ ಔಟ್' ಕೆಟ್ಟ ರನ್ ಏನಲ್ಲ.

ಲೇಖಕರು: ಮೊದಲ ಲೇಖಕ– ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ, ಎರಡನೇ ಲೇಖಕ– ಸಂಶೋಧಕ, ಮೂರನೇ ಲೇಖಕ– ಸಮೀಕ್ಷಾ ಸಂಶೋಧನೆ ಸಂಶೋಧಕ

ಮಿತ್ರಪಕ್ಷಗಳಿಗೆ ಸಮನಾದ ಸಾಧನೆ

'ಇಂಡಿಯಾ' ಕೂಟದ ಪಕ್ಷಗಳು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಪಡೆದ ಶೇಕಡಾವಾರು ಮತಪ್ರಮಾಣ



'ಇಂಡಿಯಾ' ಮೈತ್ರಿಕೂಟದಲ್ಲಿ ಕಾಂಗ್ರೆಸ್ ಪ್ರಧಾನ ಪಕ್ಷವಾಗಿದ್ದ ರಾಜ್ಯಗಳು



'ಇಂಡಿಯಾ' ಕೂಟದಲ್ಲಿ ಕಾಂಗ್ರೆಸ್ ಕಿರಿಯ ಪಕ್ಷವಾಗಿದ್ದ ರಾಜ್ಯಗಳು

ಉತ್ತರ ಪ್ರದೇಶ	3.2%	36.7%	5
ಮಹಾರಾಷ್ಟ್ರ	0.6%	14.7%	12
ದೆಹಲಿ	-3.6%	19.6%	0
ಪಶ್ಚಿಮ ಬಂಗಾಳ	-0.9%	9.6%	-1
ಬಿಹಾರ	1.5%	7.5%	2
ತಮಿಳುನಾಡು	-1.8%	-6.4%	1
ಜಮ್ಮು–ಕಾಶ್ಮೀರ	-9.5%	10.8%	0
ಲಡಾಖ್	10.8%	10.8%	0

22.8 ಶೇಕಡಾವಾರು ಅಂಶ

ಕಾಂಗ್ರೆಸ್ ಕಿರಿಯ ಮಿತ್ರಪಕ್ಷವಾಗಿದ್ದ ರಾಜ್ಯಗಳಲ್ಲಿ, ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಪಡೆದ ಮತಪ್ರಮಾಣದಲ್ಲಿ ಆದ ಸರಾಸರಿ ಏರಿಕೆ

ಒಡೆದ ಮಿಥ್ಯೆಗಳು

'ಭಾರತ ಜೋಡೊ ಯಾತ್ರೆ'ಯಿಂದ ಆರಂಭಗೊಂಡ 21 ತಿಂಗಳ ಸುದೀರ್ಘವಾದ ಕಾಂಗ್ರೆಸ್‌ನ ಪ್ರಯಾಣವು, ಪಕ್ಷದ ಕುರಿತು ಇದ್ದ ಹಲವು ಮಿಥ್ಯೆಗಳನ್ನು ಒಡೆದು ಹಾಕಿದೆ:

ಮಿಥ್ಯೆ 1: ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಮೂರನೇ ಅತಿ ದೊಡ್ಡ ಪಕ್ಷದ ಸ್ಥಾನಕ್ಕೆ ಕುಸಿಯುವಂತೆ ಮಾಡಿದರೆ, ಅದು ಮತ್ತೆಂದೂ ಎದ್ದು ಬಾರದು: ತೆಲಂಗಾಣದ ಗೆಲುವು ಈ ಮಿಥ್ಯೆಯನ್ನು ಒಡೆಯಿತು. 2019ರ ಚುನಾವಣೆಯಲ್ಲಿ ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷವು ಮೂರನೇ ಸ್ಥಾನಕ್ಕೆ ಕುಸಿದಿತ್ತು. 2024ರ ಲೋಕಸಭಾ ಚುನಾವಣೆಯ ಫಲಿತಾಂಶದಲ್ಲೂ ಕಾಂಗ್ರೆಸ್‌ನ ಈ ಸಾಧನೆ ಪ್ರತಿಬಿಂಬಿಸಿತು.

ಮಿಥ್ಯೆ 2: ಹಿಂದಿ ಭಾಷಿಕ ಪ್ರದೇಶದಲ್ಲಿನ ಲೋಕಸಭಾ ಚುನಾವಣೆಯಲ್ಲಿ ನೇರ ಹಣಾಹಣಿಯಲ್ಲಿ ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್‌ಗೆ ಸಾಧ್ಯವಿಲ್ಲ: ಕಳೆದ ಚುನಾವಣೆಯಲ್ಲಿ ಇಂಥ 150 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಒಂದು ಮತ್ತು ಎರಡನೇ ಸ್ಥಾನದಲ್ಲಿದ್ದವು. ಇವುಗಳಲ್ಲಿ ಕಾಂಗ್ರೆಸ್ ಕೇವಲ 15 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈ ಬಾರಿಯ ಚುನಾವಣೆಯಲ್ಲಿ, ಹೀಗೆ ಕಾಂಗ್ರೆಸ್ ಹಾಗೂ ಬಿಜೆಪಿಯ ಮಧ್ಯೆ ನೇರ ಹಣಾಹಣಿ ಇದ್ದ 215 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 62 ಸ್ಥಾನಗಳನ್ನು ಗೆದ್ದುಕೊಂಡಿದೆ. ಇನ್ನುಳಿದ ಕ್ಷೇತ್ರಗಳಲ್ಲಿ ಕಳೆದ ಬಾರಿಗೆ ಹೋಲಿಸಿದರೆ, ಬಿಜೆಪಿಯ ಗೆಲುವಿನ ಅಂತರವನ್ನು ಕಾಂಗ್ರೆಸ್ ಅರ್ಧದಷ್ಟು ಕಡಿತ ಮಾಡಿದೆ.

ಮಿಥ್ಯೆ 3: ಪ್ರಾದೇಶಿಕ ಪಕ್ಷಗಳು ಹಾಗೂ ಜಾತಿ ಸಮುದಾಯಗಳನ್ನು ಆಧರಿಸಿದ ರಾಜಕೀಯ ಪಕ್ಷಗಳು ತನ್ನಿಂದ ಕಸಿದುಕೊಂಡ ಮತಗಳನ್ನು ಅಥವಾ ಸ್ಥಾನಗಳನ್ನು ಕಾಂಗ್ರೆಸ್‌ಗೆ ಮತ್ತೊಮ್ಮೆ ಪಡೆದುಕೊಳ್ಳಲು ಸಾಧ್ಯವಿಲ್ಲ: ಅಸ್ಸಾಂನ ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಪಕ್ಷ ಹಾಗೂ ಹರಿಯಾಣದ ಜೆಜೆಪಿ ಪಕ್ಷಗಳ ಮತಗಳನ್ನು ಕಾಂಗ್ರೆಸ್ ಪಡೆದುಕೊಂಡಿದೆ. ಆ ಮೂಲಕ ಪ್ರಾದೇಶಿಕ ಪಕ್ಷಗಳನ್ನು ತನ್ನಿಂದ ಕಸಿದುಕೊಂಡಿದ್ದನ್ನು ಕಾಂಗ್ರೆಸ್ ಮರಳಿ ಪಡೆದುಕೊಂಡಿದೆ.

ಮಿಥ್ಯೆ 4: ಆಪರೇಷನ್ ಕಮಲದ ಪರಿಣಾಮವನ್ನು ತಡೆದುಕೊಳ್ಳುವ ಶಕ್ತಿ ಕಾಂಗ್ರೆಸ್‌ಗೆ ಇಲ್ಲ: ಲೋಕಸಭಾ ಚುನಾವಣೆಯ ವೇಳೆಯೇ ಹಿಮಾಚಲ ಪ್ರದೇಶದಲ್ಲಿ ವಿಧಾನಸಭೆ ಉಪಚುನಾವಣೆಯೂ ನಡೆದಿತ್ತು. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡು ಈ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅರ್ಧದಷ್ಟು ಮಂದಿಯು ಸೋತರು.

ಮಿಥ್ಯೆ 5: 'ಇಂಡಿಯಾ' ಮೈತ್ರಿಕೂಟದ ಪಾಲಿಗೆ ಕಾಂಗ್ರೆಸ್ ಪಕ್ಷವು ಹೊರೆಯಂತಿದೆ. ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಳ್ಳಲು ಪಕ್ಷಕ್ಕೆ ಬಲ ಇಲ್ಲ: ಈ ಹಿಂದೆ ಇದೇ ಪರಿಸ್ಥಿತಿ ಇತ್ತು. ಆದರೆ, ಈ ಬಾರಿ ಕಾಂಗ್ರೆಸ್ ಈ ಮಿಥ್ಯೆಯನ್ನು ಸುಳ್ಳಾಗಿಸಿದೆ. ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ಉತ್ತರ ಪ್ರದೇಶ, ಬಿಹಾರ, ದೆಹಲಿ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿಯೂ ಈ ಮಿಥ್ಯೆಯನ್ನು ಕಾಂಗ್ರೆಸ್ ಒಡೆದಿದೆ. ಈ ಎಲ್ಲ ರಾಜ್ಯಗಳಲ್ಲಿ ತನ್ನ ಮಿತ್ರ ಪಕ್ಷಗಳಿಗಿಂತ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡಿಲ್ಲವಾದರೂ, ಮತಪ್ರಮಾಣದ ವಿಚಾರದಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳಿಗಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿದೆ. ಇದಕ್ಕೆ ವ್ಯತಿರಿಕ್ತ ಪರಿಣಾಮ ಬಂದದ್ದು ಜಾರ್ಖಂಡ್‌ನಲ್ಲಿ.

ಮಿಥ್ಯೆ 6: ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಅಸ್ತಿತ್ವವೇ ಇಲ್ಲ ಎಂಬುದು ವಿಧಾನಸಭಾ ಚುನಾವಣೆಯಲ್ಲೇ ಸಾಬೀತಾಗಿದೆ: ಶೇ 2ರಷ್ಟು ಮತಪ್ರಮಾಣಕ್ಕೆ ಇಳಿದ ಪಕ್ಷವೊಂದಕ್ಕೆ ಉತ್ತರ ಪ್ರದೇಶದ ಲೋಕಸಭಾ ಚುನಾವಣಾ ಫಲಿತಾಂಶವು ಅದ್ಭುತ ತಿರುವನ್ನೇ ಕೊಟ್ಟಿದೆ. ಸಮಾಜವಾದಿ ಪಕ್ಷಕ್ಕಿಂತಲೂ ಹೀನಾಯ ಸ್ಥಿತಿ ಕಾಂಗ್ರೆಸ್‌ಗೆ ಉತ್ತರ ಪ್ರದೇಶದಲ್ಲಿತ್ತು. ಎಲ್ಲರ ಕುತೂಹಲ ಕೆರಳಿಸಿದ್ದ ಆ ಎರಡು ಕ್ಷೇತ್ರಗಳಲ್ಲಿ ಮಾತ್ರವಲ್ಲದೇ ಅಲಹಾಬಾದ್, ಸಹಾರನ್‌ಪುರ, ಸೀತಾಪುರ ಹಾಗೂ ಬಾರಾಬಂಕಿಯಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿದೆ. ದಲಿತರ ಮತಗಳು ಬಿಎಸ್‌ಪಿಯಿಂದ ಸ್ವಲ್ಪ ಪ್ರಮಾಣದಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಬರಲು, ಮುಸ್ಲಿಂ ಅಭ್ಯರ್ಥಿಯನ್ನೇ ಬಿಎಸ್‌ಪಿಯು ಕಣಕ್ಕಿಳಿಸಿದ್ದರೂ 'ಇಂಡಿಯಾ' ಮೈತ್ರಿಕೂಟಕ್ಕೇ ಮುಸ್ಲಿಮರು ಮತ ಹಾಕುವಂತೆ ಮಾಡುವಲ್ಲಿ ಕಾಂಗ್ರೆಸ್ ಪ್ರಮುಖ ಪಾತ್ರವಹಿಸಿದೆ.

ಮಿಥ್ಯೆ 7: ಸರ್ಕಾರದ ವಿರುದ್ಧದ ಯಾವುದೇ ಚಳವಳಿಯಲ್ಲಿ ಕಾಂಗ್ರೆಸ್‌ಗೆ ಗುರುತಿಸಿಕೊಳ್ಳಲೂ ಆಗದು ಮತ್ತು ಅಂತಹ ಪ್ರಬಲ ಚಳವಳಿಯನ್ನು ರೂಪಿಸಲು ಕಾಂಗ್ರೆಸ್‌ಗೆ ಸಾಧ್ಯವಿಲ್ಲ: ಹಲವು ದಶಕಗಳವರೆಗೆ ಕಾಂಗ್ರೆಸ್ ಪ್ರಭುತ್ವದಲ್ಲಿತ್ತು. ಇದೇ ಕಾರಣಕ್ಕೆ ಕಾಂಗ್ರೆಸ್‌ಗೆ ಚಳವಳಿಗಳನ್ನು ರೂಪಿಸಲು ಸಾಧ್ಯವಿರಲಿಲ್ಲ ಮತ್ತು ಅಂತಹ ಚಳವಳಿಗಳ ಜತೆ ಗುರುತಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಆದರೆ, ಈ ಬಾರಿ ಕಾಂಗ್ರೆಸ್‌ಗೆ ಇದು ಸಾಧ್ಯವಾಗಿದೆ. ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರು ನಡೆಸಿದ ರೈತ ಚಳವಳಿಯು ಕಾಂಗ್ರೆಸ್‌ಗೆ ಲಾಭ ತಂದುಕೊಟ್ಟಿದೆ. ಜೊತೆಗೆ, ಮುಸ್ಲಿಮರು ಮುನ್ನಡೆಸಿದ ಸಿಎಎ ಹೋರಾಟ ಕೂಡ ಪಕ್ಷಕ್ಕೆ ಅನುಕೂಲ ಮಾಡಿಕೊಟ್ಟಿದೆ. (ಛತ್ತೀಸಗಢದಲ್ಲಿ ಗಣಿಗಾರಿಕೆ ವಿರೋಧಿ ಹೋರಾಟದೊಂದಿಗೆ ಗುರುತಿಸಿಕೊಳ್ಳದೇ ಇದ್ದದ್ದೇ, ಕಾಂಗ್ರೆಸ್ ಅಲ್ಲಿ ವಿಫಲವಾಗಲು ಕಾರಣ ಎಂದೂ ವಿಶ್ಲೇಷಿಸಬಹುದು). ಭಾರತ ಜೋಡೊ ಯಾತ್ರೆ, ರಾಜಕೀಯೇತರ ಚಳವಳಿಗಳು, ಜನ–ಸಂಘಟನೆಗಳು, ದೇಶದ ನಾಗರಿಕರು ಮತ್ತು 'ಇಂಡಿಯಾ' ಮೈತ್ರಿಕೂಟದಂತಹ ಜನ–ಸಂಘಟಿತ ಸಂಗತಿಗಳಿಗೆ ಈ ಬಾರಿಯ ಲೋಕಸಭಾ ಚುನಾವಣೆ ಸಾಕ್ಷಿಯಾಗಿದೆ.

ಧನಂಜಯ

ಸರಳ ಕಥೆಯಲ್ಲಿ ಸುದೀರ್ಘ ಪಯಣ

'ಎಲ್ಲರೂ ಬೆತ್ತಲೆಯಾಗಿರುವ ಸಮಾಜದಲ್ಲಿ ಬಟ್ಟೆ ಹಾಕಿಕೊಂಡವನಿಗೆ ನಾಚಿಕೆ ಆಗಬೇಕು...'

ಇದು 'ಕೋಟಿ' ಚಿತ್ರದಲ್ಲಿ ರಾಮಣ್ಣ ಎಂಬುವ ಪಾತ್ರ ನಾಯಕ 'ಕೋಟಿ'ಗೆ ಹೇಳುವ ಡೈಲಾಗ್. ಇಡೀ ಸಿನಿಮಾದ ಒನ್‌ಲೈನ್ ಸ್ಟೋರಿಯನ್ನು ಇದು ಉಲ್ಲೇಖಿಸುತ್ತದೆ. ಬಡ ಕುಟುಂಬದಿಂದ ಬಂದು ನಿಯತ್ತಿನಲ್ಲೇ ಬದುಕುತ್ತಿರುವ ನಾಯಕ 'ಕೋಟಿ' ಈ ಹಾದಿಯಲ್ಲೇ ಹೆಜ್ಜೆ ಹಾಕುತ್ತಾನೋ ಅಥವಾ ಬೆತ್ತಲಾಗಿರುವ ಸಮಾಜದಲ್ಲಿ ತಾನೂ ಬೆತ್ತಲಾಗುತ್ತಾನೋ ಎನ್ನುವುದು ಚಿತ್ರದ ಕಥೆ.

ನಾಯಕ ಕೋಟಿ (ಧನಂಜಯ) ತನ್ನ ತಾಯಿ(ತಾರಾ), ತಂಗಿ(ತನುಜಾ) ಹಾಗೂ ತಮ್ಮನ (ಪೃಥ್ವಿ) ಜೊತೆ ಜನತಾ ಸಿಟಿಯಲ್ಲಿ ಬದುಕುವಾತ. ಲಾರಿಯೊಂದನ್ನು ಬಾಡಿಗೆಗೆ ಪಡೆದು ಮನೆ ಶಿಫ್ಟಿಂಗ್ ಕೆಲಸ ಮಾಡಿಕೊಂಡಿದ್ದಾನೆ. ಈ ಕೆಲಸವಿಲ್ಲದೇ ಇದ್ದಾಗ ಬಾಡಿಗೆಗೆ ಕಾರು ಓಡಿಸುತ್ತಾನೆ. ಈ ವ್ಯವಹಾರಗಳಿಗೆ 'ದೀನೂ ಸಾವ್ಕಾರ್'ನಿಂದ ಹಣಕಾಸು ಸಹಾಯ ಪಡೆಯುತ್ತಿರುತ್ತಾನೆ. ತಮ್ಮನೊಂದಿಗೆ ಸೇರಿ ತನ್ನದೇ ಕ್ಯಾಬ್ ಸೇವೆ ಆರಂಭಿಸಬೇಕೆಂಬ ಕನಸು ಕಟ್ಟಿಕೊಂಡಿರುವ ಕೋಟಿ ಮುಂದೊಂದು ದಿನ ನಿಯತ್ತಿನಲ್ಲೇ ಕೋಟಿ ರೂಪಾಯಿ ದುಡಿಯುವ ಕನಸು ಹೊತ್ತಾತ. ಕಾರು ಖರೀದಿಸಲು ದೀನೂ ಸಾವ್ಕಾರ್‌ನಿಂದ 9 ಲಕ್ಷ ಸಾಲ ಪಡೆದುಕೊಳ್ಳುತ್ತಾನೆ. ಈ ಸಾಲವೇ 'ಕೋಟಿ'ಗೆ ಶೂಲವಾಗಿ ಮಾರ್ಪಟ್ಟಾಗ ಕೋಟಿ ಬದಲಾಗುತ್ತಾನೆಯೇ ಎನ್ನುವುದು ಮುಂದಿನ ಕಥೆ.

ಧನಂಜಯ ಇಲ್ಲಿ 'ಕೋಟಿ'ಯಾಗಿ ಜೀವಿಸಿದ್ದಾರೆ. ಕುಟುಂಬವನ್ನು ಸಲಹುವ ಜವಾಬ್ದಾರಿ ಹೊತ್ತ ಒಬ್ಬ ಮಧ್ಯಮವರ್ಗದ ಯುವಕನಾಗಿ ಅವರಿಲ್ಲಿ ಪೂರ್ಣ ಅಂಕ ಗಿಟ್ಟಿಸುತ್ತಾರೆ. 'ಕೋಟಿ'ಯ ಪರದಾಟ, ಒದ್ದಾಟ, ತಳಮಳವನ್ನು ಸಮರ್ಪಕವಾಗಿ ನಿಭಾಯಿಸಿದ್ದಾರೆ. ನಾಯಕಿಯಾಗಿ ಮೋಕ್ಷಾ ಕುಶಾಲ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ತಾಯಿ ಪಾತ್ರದಲ್ಲಿ ತಾರಾ ಎಂದಿನಂತೆ ಭಾವನಾತ್ಮಕ ದೃಶ್ಯಗಳಲ್ಲಿ ಕಣ್ಣಂಚು ಒದ್ದೆ ಮಾಡುತ್ತಾರೆ. ನಟ ದುನಿಯಾ ವಿಜಯ್ ನಾಯಕನ ತಂದೆಯ ಪಾತ್ರದಲ್ಲಿ ಒಂದೈದು ನಿಮಿಷವಷ್ಟೇ ಕಾಣಿಸಿಕೊಂಡರೂ ಆ ದೃಶ್ಯಗಳು ಪರಿಣಾಮಕಾರಿಯಾಗಿ ಮೂಡಿಬಂದಿದೆ. ತಮ್ಮ ಸ್ಟೈಲ್ ಹಾಗೂ ಡೈಲಾಗ್ ಡೆಲಿವರಿ ಕಾರಣದಿಂದಲೇ ನಟ ರಮೇಶ್ ಇಂದಿರಾ ಅವರು ಮತ್ತೆ ಮತ್ತೆ ಪ್ರೇಕ್ಷಕರಿಗೆ ಹತ್ತಿರವಾಗುತ್ತಿದ್ದಾರೆ. ದೀನೂ ಸಾವ್ಕರ್ ಪಾತ್ರದಲ್ಲಿ ರಮೇಶ್ ಇಂದಿರಾ ಮಿಂಚುತ್ತಾರೆ.

ಪರಮ್ ಅವರ ನಿರ್ದೇಶನದ ಮೊದಲ ಸಿನಿಮಾ ಇದು. ನಿರ್ದೇಶನದಲ್ಲಿ ಅವರು ಪಳಗಿದಂತೆ ಕಾಣುತ್ತಾರೆ. ಆದರೆ ಒಂದು ನಿಗದಿತ ಅವಧಿಯ ಚೌಕಟ್ಟಿನೊಳಗೆ ಸಿನಿಮಾವನ್ನು ಕಟ್ಟಿಕೊಡುವಲ್ಲಿ ಅವರು ವಿಫಲರಾಗುತ್ತಾರೆ. ಹಲವೆಡೆ ದೃಶ್ಯಗಳನ್ನು ಮತ್ತಷ್ಟು ಹದಗೊಳಿಸಬಹುದಿತ್ತು. ಕ್ಲೈಮ್ಯಾಕ್ಸ್ ದೃಶ್ಯಗಳು ಎಳೆದಾಡಿದ ಅನುಭವ ನೀಡುತ್ತದೆ. ಕೆಲವು ಕಡೆಗಳಲ್ಲಿ ಬರವಣಿಗೆ ಪೇಲವವಾದಂತಿದೆ. ತನ್ನ ಕೋಟಿ ರೂಪಾಯಿ ಹಣ ಕಳವಾದ ಮರುದಿನವೇ ನಾಯಕ 'ಕೋಟಿ' ಏಕಾಏಕಿ ಲಕ್ಷಾಂತರ ರೂಪಾಯಿ ಮುಂದಿಟ್ಟಾಗ ಖಳನಾಯಕ ಆಶ್ಚರ್ಯಪಡದೇ ಸ್ವೀಕರಿಸಿದ ದೃಶ್ಯ ಇದಕ್ಕೊಂದು ನಿದರ್ಶನ. ಹಾಡುಗಳು ಇಂಪಾಗಿವೆ. ಸಿಂಕ್ ಸೌಂಡ್ ಮಾಡಿರುವ ಕಾರಣದಿಂದ ಹಲವು ದೃಶ್ಯಗಳಲ್ಲಿ ಇರಬೇಕಾಗಿದ್ದ ಸಂಭಾಷಣೆಯ ತೀವ್ರತೆ ಕಾಣಿಸುವುದಿಲ್ಲ. ಇಷ್ಟಪಟ್ಟು ನಾಲ್ಕೈದು ಐಸ್‌ಕ್ಯಾಂಡಿ ತಿನ್ನುತ್ತಿದ್ದ 'ಕೋಟಿ', ಕ್ಲೈಮ್ಯಾಕ್ಸ್‌ನಲ್ಲಿ ಐಸ್‌ಕ್ಯಾಂಡಿಯನ್ನು ತಿರಸ್ಕರಿಸುವುದು ಎರಡನೇ ಭಾಗಕ್ಕೆ ಮುನ್ನುಡಿಯೇ?

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಕೋಟಿ

- **ಬರವಣಿಗೆ ಮತ್ತು ನಿರ್ದೇಶನ: ಪರಮ್**
- **ನಿರ್ಮಾಪಕರು: ಜ್ಯೋತಿ ದೇಶಪಾಂಡೆ**
- **ತಾರಾಗಣ: ಧನಂಜಯ, ಮೋಕ್ಷ ಕುಶಾಲ್, ತಾರಾ, ರಮೇಶ್ ಇಂದಿರಾ ಮತ್ತಿತರರು**

ಪದಬಂಧ 5712

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ತಂಡದವರು ಹಿಡಿದುಕೊಂಡಿರುವ ಇಕ್ಕಳ (3)
4. ದಣಿಯನ್ನು ನೋಡಲು ಸೇರಿದ ಗುಂಪು (3)
6. ಗರುಡನ ಹತ್ತಿರ ಇರಿಸಿದ ಚರ್ಮವಾದ್ಯ (4)
8. ಭಜನೆ ಮಾಡುತ್ತಲೇ ಬೇರೆಯಾಗುವಿಕೆ! (4)
10. ನಿಜವಾಗಿಯೂ ರಾತ್ರಿಯಿದು! (3)
13. ವಸತಿ ಬಳಿಯಿರುವ ಉಪಪತ್ನಿ (3)
15. ಇದಿನ್ನೂ ಎಳೆ ಮಗು (4)
19. ಕೊಬ್ಬಿದ ಆನೆಯಿದು (4)
21. ಬಣ್ಣ ಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ (3)
22. ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ

1. ಬಾಕು ಹಿಡಿದು ಕತ್ತರಿಸಿದ ಹೊಗೆಸೊಪ್ಪು (3)
2. ಸರ ತಂದದ್ದಕ್ಕೇ ಈ ಸಂಭ್ರಮ! (4)
3. ನಾಗರಿಕರು ಹಿಡಿದಿರುವ ಗುಂಜು (2)
5. ಅನುಜನ ಹತ್ತಿರ ರಾಕ್ಷಸನಿದ್ದಾನಲ್ಲಾ! (3)
7. ಅಂಗವಿಕಲನು ಪ್ರವೇಶಿಸಿರುವ ಗುಹೆ (2)
9. ನೆರವಿನಿಂದ ಮೇಲೇರಿದ ಬಿದಿರಿನ ಗೋಡೆ (3)
11. ಉಸಿರನ್ನು ಬಿಡುವುದು (3)
12. ಆರೋಹಣದಲ್ಲಿರುವ ಸವಾರ (3)
14. ಎಳ್ಳು ನೀರು ಬಿಡುವಿಕೆ (4)
16. ಪರ್ಣ ಶಾಲೆಯಲ್ಲಿರುವ ಗರುಡ (3)
17. ಸುಮಧುರ ವಾಸನೆಯ ಹೂ (2)
18. ಇದೊಂದು ಬಗೆಯ ಮೆಟ್ಟು (3)
20. ಪ್ರದಕ್ಷಿಣೆ ಹಾಕುತ್ತಿರುವವ ಬಲು ಸಮರ್ಥ! (2)



5711ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಹಗಲುಗನಸು
4. ತಲೆಗಾಪು
5. ಗರಗಸ 7. ಕಮ್ಮಾರ
9. ಬೆವರು 12. ಉಪಕಾರಿ
13. ಪರಿಮಿತಿ 15. ಲಲಾಟಲಿಖಿತ

ಮೇಲಿಂದ ಕೆಳಕ್ಕೆ:
1. ಹದ್ದುಗಣ್ಣು 2. ಸುತ
3. ಅಂಗಾಲು 6. ಗಜನಿಂಬೆ
7. ಕದಿರು 8. ರಣರಂಪ
10. ಪರಿಚಿತ 11. ಹೆರಿಗೆ
14. ತಿಲ

ಸುಡೊಕು 6097

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6096 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶನಿವಾರ ಜೂನ್ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ನವಮಿ ಗಂ. 26-33 ನಕ್ಷತ್ರ: ಉತ್ತರಫಲ್ಗುನಿ ಗಂ. 8-14 ಯೋಗ: ವ್ಯತೀಪಾತ ಗಂ. 20-10 ಕರಣ: ಬಾಲವ ಗಂ. 13-20, ಮಿಥುನ ಮಾಸದ ನೇ 01 ದಿನ, ಮಳೆನಕ್ಷತ್ರ: ಮೃಗಶಿರ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-07 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 08 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 3, 5

ಮೇಷ: ಇತರರಿಗಿಂತ ವಿಭಿನ್ನವಾಗಿ ಪರಿಣತರಾದ ನೀವು ನಿಮ್ಮದೇ ಕ್ಷೇತ್ರದಲ್ಲಿನ ಸವಾಲುಗಳನ್ನು ಲೀಲಾಜಾಲವಾಗಿ ಎದುರಿಸುವಿರಿ. ನಿಮ್ಮ ವ್ಯಕ್ತಿತ್ವವು ಇತರರನ್ನು ಈ ದಿನ ಆಕರ್ಷಿಸಲಿದೆ.

ವೃಷಭ: ನಿಮ್ಮನ್ನು ದೂಷಿಸಿದ ವ್ಯಕ್ತಿಗಳಿಗೆ ನಿಮ್ಮ ಅಭಿವೃದ್ಧಿ ನೋಡಿ ಸಹಿಸಲಾಗದಂತಾಗಲಿದೆ. ನಿಮ್ಮ ಉದ್ಯೋಗದ ಬದುಕಿನಲ್ಲಿ ತಪ್ಪಿ ಹೋಗಿದ್ದ ಅವಕಾಶಗಳು ಮತ್ತೆ ನಿಮಗೆ ದೊರೆಯುವ ಸಂಭವವಿದೆ.

ಮಿಥುನ: ಉದ್ಯೋಗ ರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆ ಕಂಡು ಬರಲಿದೆ. ವ್ಯಾಪಾರ ಹಾಗೂ ವಾಣಿಜ್ಯದ ಸುಧಾರಣೆಗೆ ಸಾಕಷ್ಟು ಅಡೆತಡೆಗಳಾಗಲಿದೆ. ಪ್ರವಾಸ ಹೋಗುವ ಯೋಜನೆಗಳು ಕಾರ್ಯರೂಪಕ್ಕೆ ಬರಲಿದೆ.

ಕರ್ಕಾಟಕ: ಕೈಗೊಂಡ ಕೆಲಸಗಳು ಆರ್ಥಿಕ ಕಾರಣದಿಂದ ವಿಳಂಬವಾಗುವ ಸಾಧ್ಯತೆಯಿದೆ. ಸೂರ್ಯೋದಯದೊಳಗೆ ನಿಮ್ಮ ಮನಸ್ಸಿನ ಸಂಕಲ್ಪವನ್ನು ನೆರವೇರಿಸಿಕೊಳ್ಳಲು ಪ್ರಯತ್ನ ನಡೆಸುವಿರಿ.

ಸಿಂಹ: ಚಿಂತಾಕ್ರಾಂತರಾದಾಗ ನಿಮ್ಮ ಸುಖ-ದುಃಖ ಹಂಚಿಕೊಳ್ಳುವ ಮಿತ್ರರು ಜೊತೆಗಿರಲಿದ್ದಾರೆ. ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಹೆಚ್ಚಿನ ಸಂಪಾದನೆ ಜೊತೆಗೆ ಉಡುಗೊರೆ ಸಿಗಲಿದೆ.

ಕನ್ಯಾ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ ಕಂಡು ಬರಲಿದೆ. ಕಾಶಿಪುರಾಧೀಶ್ವರಿ ಅನ್ನಪೂರ್ಣೇಶ್ವರಿ ದರ್ಶನ ಮಾಡಿ, ಧ್ಯಾನಿಸಿ ಶುಭವಾಗಲಿದೆ.

ತುಲಾ: ರೈತರಿಗೆ ಹೆಚ್ಚಿನ ಲಾಭಾಂಶ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ತಮ್ಮ ಬೆಳೆಗೆ ಅಧಿಕ ಬೆಲೆ ಕಂಡು ಬರುತ್ತದೆ. ಮಾನಸಿಕ ಒತ್ತಡ ಹೆಚ್ಚಾಗಿರುವುದು ಹಾಗೆಯೇ ತಾಂತ್ರಿಕವಾಗಿ ಯಾವುದೇ ತಪ್ಪುಗಳು ಆಗದಂತೆ ಎಚ್ಚರವಹಿಸಿ.

ವೃಶ್ಚಿಕ: ಯಾವುದೇ ಕೆಲಸ ಮಾಡುವ ಮುನ್ನ ಅದರ ಫಲಾಫಲಗಳನ್ನು ಅರಿತು ಕಠಿಣ ಶ್ರಮದಿಂದ ಕಾರ್ಯ ನಿರ್ವಹಿಸಿದಲ್ಲಿ ಕಹಿಯ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ತಂಗಿಯರ ವಿದ್ಯಾಭ್ಯಾಸದ ಬಗ್ಗೆ ಗಮನಹರಿಸಿ.

ಧನು: ಯುವಕರು ತಮ್ಮ ಪೂರ್ಣ ಸಾಮರ್ಥ್ಯ ಬಳಸಿ ವಿದ್ಯಾಭ್ಯಾಸವನ್ನು ಮಾಡಬೇಕು. ಹೊಸ ವ್ಯವಹಾರದಲ್ಲಿ ಸ್ನೇಹಿತರ ಹಿತವಚನ, ಸಹಾಯ ಹಾಗೂ ಸಹಕಾರ ದೊರೆಯಲಿದೆ.

ಮಕರ: ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗ ಕಂಡುಕೊಳ್ಳಿ. ಸಮಸ್ಯೆಗಳ ಬಗ್ಗೆಯೇ ಹೆಚ್ಚು ಯೋಚನೆ ಮಾಡುವುದರಿಂದ ಅದಕ್ಕೆ ಪರಿಹಾರ ಸಿಗುವುದಿಲ್ಲ.

ಕುಂಭ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ ಹಾಗೂ ನಿಮ್ಮ ಜೀವನ ಶೈಲಿಯೂ ವಿಭಿನ್ನವಾಗಿ ಬದಲಾಗಲಿದೆ. ಧನ ಆದಾಯಕ್ಕೆ ಅಡ್ಡಿ ಆತಂಕಗಳು ಇರುವುದಿಲ್ಲ. ಮನಸ್ಸಿಗೆ ಹಿತವಾದ ಅನುಭವ ಪಡೆಯಲಿದ್ದೀರಿ.

ಮೀನ: ನಿಮ್ಮ ಪೂರ್ವನಿಯೋಜಿತ ಕೆಲಸ ಕಾರ್ಯಗಳು ಸರ್ವರ ಸಹಾಯದಿಂದ ಮಂದಗತಿಯಲ್ಲಿ ಹಂತ ಹಂತವಾಗಿ ಪೂರ್ಣಗೊಳ್ಳಲಿವೆ. ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ.

ಹೊಸ ಎತ್ತರಕ್ಕೆ ಜಿಗಿದ ನಿಫ್ಟಿ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಷೇರುಗಳ ಖರೀದಿಯಿಂದಾಗಿ ಸತತ ಮೂರನೇ ದಿನವಾದ ಶುಕ್ರವಾರವೂ ಷೇರು ಸೂಚ್ಯಂಕಗಳು ಏರಿಕೆ ಕಂಡು, ಹೊಸ ದಾಖಲೆ ಬರೆದಿವೆ.

ರಫ್ತು ಪ್ರಮಾಣದಲ್ಲಿನ ಏರಿಕೆಯೂ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಲು ನೆರವಾಯಿತು. ವಿದೇಶಿ ಬಂಡವಾಳದ ಹೊರಹರಿವಿನ ನಡುವೆಯೂ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 181 ಅಂಶ ಏರಿಕೆ ಕಂಡು, 76,992 ಅಂಶಗಳಿಗೆ ಮುಟ್ಟುವ ಮೂಲಕ ಹೊಸ ಎತ್ತರಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 66 ಅಂಶ ಏರಿಕೆ ಕಂಡು, 23,465 ಅಂಶಗಳಲ್ಲಿ ಸ್ಥಿರಗೊಂಡಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

ವಾರದ ವಹಿವಾಟಿನ ಲೆಕ್ಕಾಚಾರದಲ್ಲಿ ಸೆನ್ಸೆಕ್ಸ್ 299 ಅಂಶ ಹಾಗೂ ನಿಫ್ಟಿ 175 ಅಂಶ ಏರಿಕೆಯಾಗಿದೆ.

ಮೂರು ದಿನಗಳ ಗೂಳಿ ಓಟದಿಂದಾಗಿ ಹೂಡಿಕೆದಾರರ ಸಂಪತ್ತು ₹7.93 ಲಕ್ಷ ಕೋಟಿ ವೃದ್ಧಿಯಾಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹434 ಲಕ್ಷ ಕೋಟಿಗೆ ಮುಟ್ಟಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ, ಟೈಟನ್, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಅಲ್ಟ್ರಾಟೆಕ್ ಸಿಮೆಂಟ್, ಬಜಾಜ್ ಫೈನಾನ್ಸ್, ಎಕ್ಸಿಸ್ ಬ್ಯಾಂಕ್, ಟಾಟಾ ಮೋಟರ್ಸ್ ಮತ್ತು ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಏರಿಕೆ ಆಗಿದೆ. ಅಂಬುಜಾ ಸಿಮೆಂಟ್ಸ್ ಷೇರಿನ ಮೌಲ್ಯ ಶೇ 2ರಷ್ಟು ಹೆಚ್ಚಳವಾಗಿದೆ.

ಟೆಕ್ ಮಹೀಂದ್ರ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ವಿಪ್ರೊ, ಎಚ್‌ಸಿಎಲ್ ಟೆಕ್ನಾಲಜೀಸ್, ಲಾರ್ಸೆನ್ ಆ್ಯಂಡ್ ಟೂಬ್ರೊ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಷೇರಿನ ಮೌಲ್ಯ ಇಳಿದಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,398
ಇಂದಿನ ಅಂತ್ಯ	23,465
▲	66
ದಿನದ ಗರಿಷ್ಠ	23,490

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹333-500
ದ್ವಿತಳಿ (ಬಿ.ವಿ)	₹355-640

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7800-8815
ಕೆ.ಆರ್.ಪೇಟೆ	₹9450-9450
ಬೆಂಗಳೂರು	₹8800-8800

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹199.50
ಆರ್‌ಎಸ್‌ಎಸ್-5	₹191
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹180

ಬಿಸಿ ಗಾಳಿಗೆ ಈರುಳ್ಳಿ, ಆಲೂಗೆಡ್ಡೆ, ಬೇಳೆ ಬೆಲೆ ಏರಿಕೆ ● ಇಂಧನ–ವಿದ್ಯುತ್ ಸೂಚ್ಯಂಕ ಇಳಿಕೆ

ಸಗಟು ಹಣದುಬ್ಬರ: 15 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ಸಗಟು ಹಣದುಬ್ಬರವು 15 ತಿಂಗಳ ಗರಿಷ್ಠ ಮಟ್ಟವಾದ ಶೇ 2.61ಕ್ಕೆ ಏರಿಕೆಯಾಗಿದೆ.

ಬಿಸಿ ಗಾಳಿಯಿಂದಾಗಿ ಆಹಾರ ಪದಾರ್ಥಗಳ ಬೆಲೆಯಲ್ಲಿ ಏರಿಕೆಯಾಗಿದೆ. ಅದರಲ್ಲೂ ತರಕಾರಿಗಳು ಮತ್ತು ಆಹಾರ ತಯಾರಿಕಾ ಸರಕುಗಳ ದರ ಏರುಗತಿಯಲ್ಲಿದೆ.

ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಸತತ ಮೂರು ತಿಂಗಳಿಂದ ಏರಿಕೆಯ ಪಥದಲ್ಲಿಯೇ ಸಾಗಿದೆ. ಏಪ್ರಿಲ್‌ನಲ್ಲಿ ಶೇ 1.26ರಷ್ಟು ಏರಿಕೆಯಾಗಿತ್ತು. 2023ರ ಮೇ ತಿಂಗಳಿನಲ್ಲಿ ಶೇ (–) 3.61ರಷ್ಟು ದಾಖಲಾಗಿತ್ತು.

‘ಆಹಾರ ಪದಾರ್ಥಗಳು, ತಯಾರಿಕಾ ಸರಕುಗಳು, ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ, ಖನಿಜ ತೈಲ ಏರಿಕೆಯಾಗಿರುವುದೇ ಹಣದುಬ್ಬರದ ಹೆಚ್ಚಳಕ್ಕೆ ಕಾರಣವಾಗಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಶುಕ್ರವಾರ ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಸಗಟು ಹಣದುಬ್ಬರವು ಶೇ 3.85ರಷ್ಟು ದಾಖಲಾಗುವ ಮೂಲಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ಏಪ್ರಿಲ್‌ನಲ್ಲಿ ಶೇ 7.74ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ಮೇ ತಿಂಗಳಿನಲ್ಲಿ ಶೇ 9.82ರಷ್ಟು ಹೆಚ್ಚಳವಾಗಿದೆ. ಇದು ಹತ್ತು ತಿಂಗಳ ಗರಿಷ್ಠ ಮಟ್ಟವಾಗಿದೆ. ತರಕಾರಿಗಳ ಬೆಲೆಯು ಶೇ 23.60ರಿಂದ ಶೇ 32.42ರಷ್ಟು ಏರಿಕೆಯಾಗಿದೆ.

ಈರುಳ್ಳಿ ಬೆಲೆ ಶೇ 58.05, ಆಲೂಗೆಡ್ಡೆ ಶೇ 64.05 ಮತ್ತು ಬೇಳೆಕಾಳು ಬೆಲೆಯಲ್ಲಿ ಶೇ 21.95ರಷ್ಟು ಏರಿಕೆಯಾಗಿದೆ.

ಇಂಧನ ಮತ್ತು ವಿದ್ಯುತ್ ಸೂಚ್ಯಂಕದಲ್ಲಿ ಇಳಿಕೆಯಾಗಿದೆ. ಏಪ್ರಿಲ್‌ನಲ್ಲಿ ಶೇ 1.38ರಷ್ಟು ಇದ್ದಿದ್ದು, ಶೇ 1.35ರಷ್ಟಕ್ಕೆ ಕುಗ್ಗಿದೆ.

ತಯಾರಿಕಾ ಸೂಚ್ಯಂಕದಲ್ಲಿನ ಬೆಲೆ ಏರಿಕೆಗೆ ಜಾಗತಿಕ ಮಟ್ಟದಲ್ಲಿನ ಲೋಹದ ದರ ಹೆಚ್ಚಳವು ಕೊಡುಗೆ ನೀಡಿದೆ. ಏಪ್ರಿಲ್‌ನಲ್ಲಿ ಶೇ (–) 0.42ರಷ್ಟಿದ್ದ ತಯಾರಿಕಾ ಹಣದುಬ್ಬರವು, ಮೇ ತಿಂಗಳಿನಲ್ಲಿ ಶೇ 0.78ರಷ್ಟಕ್ಕೆ ಮುಟ್ಟಿದೆ.

‘ದೇಶದಲ್ಲಿ ಬಿಸಿ ಗಾಳಿ ಮುಂದುವರಿದಿದೆ. ಹಾಗಾಗಿ, ಆಹಾರ ಹಣದುಬ್ಬರವು ಏರಿಕೆಯಾಗುವ ಸಾಧ್ಯತೆಯಿದೆ. ಬೆಲೆಯು ಇಳಿಕೆ ಹಾದಿಗೆ ಮರಳುವಲ್ಲಿ ಮುಂಗಾರು ಹಂಗಾಮಿನಲ್ಲಿ ಸುರಿಯುವ ಮಳೆಯ ಪಾತ್ರ ನಿರ್ಣಾಯಕವಾಗಿದೆ’ ಎಂದು ಬ್ಯಾಂಕ್ ಆಫ್ ಬರೋಡಾದ ಅರ್ಥಶಾಸ್ತ್ರಜ್ಞೆ ಅದಿತಿ ಗುಪ್ತ ತಿಳಿಸಿದ್ದಾರೆ.



ಜುಲೈಗೆ ತೊಗರಿ, ಕಡಲೆ, ಉದ್ದು ಬೆಲೆ ಇಳಿಕೆ?

ನವದೆಹಲಿ (ಪಿಟಿಐ): ಉತ್ತಮ ಮುಂಗಾರು ನಿರೀಕ್ಷೆ ಹಾಗೂ ಆಮದು ಪ್ರಮಾಣದಲ್ಲಿನ ಏರಿಕೆಯಿಂದಾಗಿ ಜುಲೈನಿಂದ ತೊಗರಿ, ಕಡಲೆ ಮತ್ತು ಉದ್ದಿನ ಬೇಳೆ ಧಾರಣೆಯು ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖಾರೆ ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಂದಿನ ತಿಂಗಳಿನಿಂದ ಈ ಮೂರು ಪದಾರ್ಥಗಳ ಆಮದು ಪ್ರಮಾಣದಲ್ಲಿ ಏರಿಕೆಯಾಗಲಿದೆ. ಇದರಿಂದ ದೇಶೀಯ ಮಟ್ಟದಲ್ಲಿ ಪೂರೈಕೆ ಹೆಚ್ಚಾಗಲಿದೆ. ಹಾಗಾಗಿ, ಗ್ರಾಹಕರು ಮತ್ತಷ್ಟು ಬೆಲೆ ಏರಿಕೆಯಾಗಲಿದೆ ಎಂಬ ಆತಂಕಕ್ಕೆ ಒಳಗಾಗಬಾರದು’ ಎಂದರು.

ಕಳೆದ ಆರು ತಿಂಗಳಿನಿಂದಲೂ ಈ ಪದಾರ್ಥಗಳ ಬೆಲೆ ಏರಿಕೆಯಾಗಿದ್ದು, ಸ್ಥಿರವಾಗಿದೆ. ಆದರೆ, ಹೆಸರು ಮತ್ತು ಮಸೂರ ಅವರೆ ದರದಲ್ಲಿ ಏರಿಕೆಯಾಗಿಲ್ಲ ಎಂದು ತಿಳಿಸಿದರು.

‘ಈ ಬಾರಿಯ ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ನಿರೀಕ್ಷಿಸಲಾಗಿದೆ. ಹಾಗಾಗಿ, ದ್ವಿದಳಧಾನ್ಯಗಳ ಬಿತ್ತನೆ ಪ್ರದೇಶದಲ್ಲಿ ವಿಸ್ತರಣೆಯಾಗಲಿದೆ. ಇದರಿಂದ ಮಾರುಕಟ್ಟೆಯಲ್ಲಿನ ಪೂರೈಕೆ ಸರಪಳಿ ಸದೃಢಗೊಳ್ಳಲಿದೆ’ ಎಂದರು.

ಸದ್ಯ ಚಿಲ್ಲರೆ ಮಾರುಕಟ್ಟೆಯಲ್ಲಿ ಕಡಲೆ ಬೇಳೆ ಪ್ರತಿ ಕೆ.ಜಿಗೆ ₹87.74, ತೊಗರಿ ₹160.75, ಉದ್ದಿನ ಬೇಳೆ ₹126.67, ಹೆಸರು ₹118.9 ಹಾಗೂ ಮಸೂರ ಅವರೆ ದರವು ₹94.34 ಇದೆ. ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ಮ್ಯಾನ್ಮಾರ್ ಮತ್ತು ಆಫ್ರಿಕಾದ ದೇಶಗಳಿಂದ 8 ಲಕ್ಷ ಟನ್ ತೊಗರಿ ಮತ್ತು 6 ಲಕ್ಷ ಟನ್ ಉದ್ದಿನ ಬೇಳೆಯನ್ನು ಆಮದು ಮಾಡಿಕೊಂಡಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

SAD DEMISE

DOB: 23.08.1935 DOD: 13.06.2024

Sri K A RAMAIAH REDDY

We deeply regret to inform the sad demise of Sri KA Ramaiah Reddy on Thursday, 13th June 2024.

Funeral will held on Saturday 15th June 2024, at 11am at # 66, Dream Meadows, Kundalahalli, Bangalore.

Deeply mourned by
Parvathamma & Family Members, Grand Children, Relatives & Friends
Contact: 88806 75777 / 95388 89999

ಹದಿನೈದನೇ ವರ್ಷದ ಸವಿನೆನಪಿಗಾಗಿ

ಶ್ರೀ ಸಿ. ಲೋಕೇಶ್ ರೆಡ್ಡಿ
ಜನನ: 17-01-1978 ಮರಣ: 15-06-2009
ನಂ 5, ಹೆಚ್.ವಿ. ರೆಡ್ಡಿ ಲೇಔಟ್, ಕುಂದಲಹಳ್ಳಿ, ಬೆಂ.
ನೀನು ನಮ್ಮನಗಲಿ ಇಂದಿಗೆ ಹದಿನೈದು ವರ್ಷಗಳಾದರೂ ನಿನ್ನ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ಅನುದಿನವೂ, ಅನುಕ್ಷಣವೂ, ನಿನ್ನ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಭಗವಂತನು ನಿನ್ನ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ದುಃಖತಪ್ತರು:
ತಂದೆ–ತಾಯಿ ಮತ್ತು ಕುಟುಂಬ ವರ್ಗದವರು



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹575
	12 ಕ್ಕೆ	₹75
ಮೈಸೂರು	100ಕ್ಕೆ	₹577

4 ಹಲಸು ತಳಿಗೆ ರಾಷ್ಟ್ರೀಯ ಮನ್ನಣೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಕ್ಕರೆ, ಬೆಲ್ಲದ ಸಿಹಿಯೊಂದಿಗೆ ಪೈಪೋಟಿಗೆ ಇಳಿಯುವ ವಿಶಿಷ್ಟ ರುಚಿ ಹಾಗೂ ಸ್ವಾದಿಷ್ಟ ತೊಳೆಗಳನ್ನು ಹೊಂದಿರುವ ಮಲೆನಾಡಿನ ಹಳದಿ ರುದ್ರಾಕ್ಷಿ, ಕೆಂಪು ರುದ್ರಾಕ್ಷಿ, ಕೆಂಪು (ಆರ್‌ಟಿಬಿ) ಹಾಗೂ ಕಿತ್ತಳೆ (ಆರ್‌ಪಿಎನ್) ಬಣ್ಣದ ಹಲಸಿನ ತಳಿಗೆ ಕೇಂದ್ರ ಸರ್ಕಾರದ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರದ ಮಾನ್ಯತೆ ಲಭಿಸಿದೆ.

‘ಅಳಿವಿನಂಚಿನಲ್ಲಿರುವ ಈ ಅಪರೂಪದ ತಳಿಗಳನ್ನು ಸಂರಕ್ಷಿಸಲು ಹಾಗೂ ಬೆಳೆಗಾರರನ್ನು ಆರ್ಥಿಕವಾಗಿ ಸದೃಢಗೊಳಿಸಲು ಪ್ರಾಧಿಕಾರದ ಈ ತೀರ್ಮಾನವು ನೆರವಾಗಲಿದೆ’ ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಂ.ಬಿ. ದುಶ್ಯಂತಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ತಳಿಗಳ ಬಗ್ಗೆ ವಿಶ್ವವಿದ್ಯಾಲಯವು 3-4 ವರ್ಷಗಳ ಕಾಲ ಅಧ್ಯಯನ ನಡೆಸಿದೆ. ಬಳಿಕ ಪ್ರಾಧಿಕಾರಕ್ಕೆ ಸಂಪೂರ್ಣ ಮಾಹಿತಿ ಸಲ್ಲಿಸಲಾಗಿತ್ತು. ಪ್ರಾಧಿಕಾರದಿಂದ ನೇಮಕಗೊಂಡ ವಿಜ್ಞಾನಿಗಳ ತಂಡ ಎರಡು ಬಾರಿ ಸ್ಥಳ ಪರಿಶೀಲನೆ ನಡೆಸಿ, ವಿವರವಾದ ಮಾಹಿತಿ ಸಂಗ್ರಹಿಸಿದೆ. ಅಂತಿಮವಾಗಿ ನೋಂದಣಿಗೆ (ಮಾನ್ಯತೆ) ಶಿಫಾರಸು ಮಾಡಿತ್ತು ಎಂದು ಮಾಹಿತಿ ನೀಡಿದರು.

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಿಂದ ಶುಕ್ರವಾರ ಪ್ರದರ್ಶನಕ್ಕೆ ಇಟ್ಟಿದ್ದ ಕೆಂಪು ಹಾಗೂ ಹಳದಿ ರುದ್ರಾಕ್ಷಿ ತಳಿಯ ಹಲಸಿನ ಹಣ್ಣುಗಳು

ಈ ತಳಿಯ ಹಲಸಿನ ಸಸಿಗಳನ್ನು ವಿಶ್ವವಿದ್ಯಾಲಯದಿಂದ ಅಭಿವೃದ್ಧಿಪಡಿಸಿ ಆಸಕ್ತ ಕೃಷಿಕರಿಗೆ ವಿತರಿಸಲಾಗುವುದು. ಈ ತಳಿಯ ಹಲಸನ್ನು ಮಲೆನಾಡು ಮಾತ್ರವಲ್ಲದೇ ದೇಶದ ಎಲ್ಲ ಕಡೆಯೂ ಬೆಳೆಯಬಹುದಾಗಿದೆ ಎಂದರು.

‘ಈ ತಳಿಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ನೋಂದಣಿ ಸಂದರ್ಭದಲ್ಲಿ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸಲಾಗಿದೆ. ಬೆಳೆಗಾರರಿಗೂ ಆರ್ಥಿಕವಾಗಿ ಲಾಭದಾಯಕವಾಗಲಿವೆ’ ಎಂದು ಪ್ರಾಧಿಕಾರದ ಪ್ರಾಂತೀಯ ಕಚೇರಿ ಮುಖ್ಯಸ್ಥ ಎಂ.ಕೆ. ಸಿಂಗ್ ಹೇಳಿದರು.

ರೈತರಿಗೆ ಪ್ರಮಾಣ ಪತ್ರ ವಿತರಣೆ: ಈ ಹಲಸಿನ ತಳಿಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಹೊಸನಗರ ತಾಲ್ಲೂಕಿನ ಬರುವೆ ಗ್ರಾಮದ ಅನಂತಮೂರ್ತಿ ಜವಳಿ, ವರಕೋಡಿನ ದೇವರಾಜ ಕಾಂತಪ್ಪಗೌಡ, ಸಾಗರ ತಾಲ್ಲೂಕಿನ ಆನಂದಪುರದ ಪ್ರಕಾಶನಾಯಕ್ ಹಾಗೂ ಮಂಕಳಲೆಯ ಟಿ. ರಾಜೇಂದ್ರ ಭಟ್ಟ ಅವರಿಗೆ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Marketing & Sales

SUPER SPECIALTY Pharma Company HIRING: Area Business Executive / Manager Experience: 1-5 years Location: Bangalore & Mysore Contact: 9154290602

Multiple Vacancy

REQUIRED EXPERIENCED Telecaller, Field Executive For Bank Loan collection Salary + Incentive, Commission. 9916276701, 9900709308.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9148525233

ವ್ಯಾಪಾರ

Business to Business

Business

ಮಾಸಿಕ ಆಧಾರದ ಮೇಲೆ EV ಟ್ಯಾಕ್ಸಿಗಳು ಬೇಕಾಗಿದೆ. 360 Hrs/ 2880 K.M. ರೂ. 65,000/- ಸ್ಥಳ ಬಿಡದಿ ಮತ್ತು ನಾಗನಾಥಪುರಕ್ಕೆ ಮಾತ್ರ, Premium Cars ಹಲಸೂರು, ಸಂಪರ್ಕಿಸಿ, 8660961962

ಭವಿಷ್ಯ

Astrology

★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಶ್ಚಟ ರೋಗ,ಸಾಲ, ಶತ್ರು,ಬಂಜೆತನ.ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ.ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

★॥ಸ್ತ್ರೀಪುರುಷ ವಶೀಕರಣ॥★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

★ಸ್ತ್ರೀವಶೀಕರಣ ಸ್ಪೆಷಲಿಸ್ಟ್★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ ನಂಬಿ`ಕರೆಮಾಡಿ. ಪಂಡಿತ್.ಜೈದೇವ್‌ಭಟ್. 9901724082

ಪ್ರವಾಸ

Travel

ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 12ದಿನಗಳ:ಅಮರನಾಥ್ ಕಾಶ್ಮೀರ್`,ಗುಲ್ಮಾರ್ಗ ವೈಷ್ಣೋದೇವಿ`ಇತ್ಯಾದಿ. 13ದಿನಗಳ: ಚಾರಧಾಮ್, ಮಸ್ಸೂರಿ,ನವದೆಹಲಿ,ಹರಿದ್ವಾರ್ ಇತ್ಯಾದಿ. 12ದಿನಗಳ:`ಜೈಪುರ, ಉದಯಪುರ,ಜೈಸಲ್ಮೇರ್ ಮೌಂಟ್‌ಅಬು`ಇತ್ಯಾದಿ. 13/16 ದಿನಗಳ:-`ಕಾಶಿ,ಮುಕ್ತಿನಾಥ್ ಅಯೋಧ್ಯ,ನೈಮಿಷರಾಣ್ಯ,ದೆಹಲಿ ಆಗ್ರಾ`ಇತ್ಯಾದಿ`ಪ್ರವಾಸಗಳಿಗೆ ವಿಷ್ಣನ್`ಟ್ರಾವಲ್`ಲೈನ್ಸ್. 8105657052/ 9480182865.

ವಿಮಾನದಲ್ಲಿ 6 ದಿನಗಳು ಸಿಂಗಾಪುರ, ಮಲೇಶಿಯಾ 10.8.2024. ಮತ್ತು 11.10.2024. ಹಾಗೂ 5 ದಿನಗಳು ಥೈಲ್ಯಾಂಡ್ 10.8.2024. ಮತ್ತು 11.10.2024 ಸಂಪರ್ಕಿಸಿ: ನಿಸರ್ಗ ಹಾಲಿಡೇಸ್, ಬೆಂಗಳೂರು. 9900664943/ 9880241669

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1300-1400
ನಡುಗೋಲು	1550-1600
ರಾಶಿ	1700-1800
ರಾಶಿ ಉತ್ತಮ	1800-1900
ಹೆರಕಿದ್ದು	2100-2300
ಹಸಿರು ಸಾಧಾರಣ	2000-2050
ಹಸಿರು ಉತ್ತಮ	2300-2400
ಹಸಿರು ಅತಿ ಉತ್ತಮ	2600-2700
ಕಾಳು ಮೆಣಸು	650
ಅಡಿಕೆ: ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕುಮಟ	
ಹಳೆಚಾಲಿ	36099-38099
ಹೊಸಚಾಲಿ	32099-35529
ಚಿಪ್ಪು	20099-27099
ಕೋಕ	9000-19199
ಶಿವಮೊಗ್ಗ	
ಬೆಟ್ಟೆ	48899-56660
ಗೊರಬಲು	17129-34258
ರಾಶಿ	34430-53349
ಸರಕು	58619-86620
ಸಿದ್ದಾಪುರ	
ಬಿಳಿಗೋಟು	26499-29309
ಚಾಲಿ	34099-36099
ಕೋಕ	26769-28777
ಕೆಂಪುಗೋಟು	26219-28899
ರಾಶಿ	43389-49899
ತಟ್ಟಿಬೆಟ್ಟೆ	36899-43899
ಶಿರಸಿ	
ಬೆಟ್ಟೆ	33360-42699
ಬಿಳಿಗೋಟು	24199-30611
ಚಾಲಿ	33018-37181
ಕೆಂಪುಗೋಟು	23999-30799
ರಾಶಿ	44099-48509
ಯಲ್ಲಾಪುರ	
ಅಪಿ	69179-69179
ಬಿಳಿಗೋಟು	22612-31099
ಕೋಕ	11899-29499
ಹಳೆಚಾಲಿ	37011-37011
ಹೊಸಚಾಲಿ	31122-36750
ಕೆಂಪುಗೋಟು	24899-32899
ರಾಶಿ	44072-56169
ತಟ್ಟಿಬೆಟ್ಟೆ	34899-43199

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,300	-	226.05
ಎಸಿ	9,100	325 on OT	-	
ಆರ್‌ಪಿ	16,500	15,500	-	ಲಂಡನ್
ಆರ್‌ಸಿ	9,750	390 on OT	-	4,221 ಡಾಲರ್ಸ್

ವಿದೇಶಿ ವಿನಿಮಯ ಸಂಗ್ರಹ ದಾಖಲೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಜೂನ್ 7ಕ್ಕೆ ಮುಕ್ತಾಯವಾದ ವಾರದಲ್ಲಿ ಏರಿಕೆಯಾಗಿದೆ.

ಕೊನೆಗೊಂಡ ವಾರದಲ್ಲಿ ₹35,979 ಕೋಟಿ ಹೆಚ್ಚಳವಾಗಿದೆ. ಒಟ್ಟು ಮೀಸಲು ಸಂಗ್ರಹವು ₹54.78 ಲಕ್ಷ ಕೋಟಿ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಗ್ರಹವು ₹31,516 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹48.14 ಲಕ್ಷ ಕೋಟಿ ಆಗಿದೆ.

ಚಿನ್ನದ ಮೀಸಲು ಸಂಗ್ರಹವು ₹4,017 ಕೋಟಿ ಏರಿಕೆಯಾಗಿದ್ದು, ಒಟ್ಟು ಸಂಗ್ರಹ ₹4.75 ಲಕ್ಷ ಕೋಟಿಗೆ ತಲುಪಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹83 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹36,223 ಕೋಟಿ ಆಗಿದೆ ಎಂದು ತಿಳಿಸಿದೆ.

ಹಿಗ್ಗಿದ ವಿದೇಶಿ ವ್ಯಾಪಾರ ಕೊರತೆ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ದೇಶದ ರಫ್ತು ವಹಿವಾಟು ಮೌಲ್ಯವು ಶೇ 9.1ರಷ್ಟು ಏರಿಕೆಯಾಗಿದ್ದು, ₹3.18 ಲಕ್ಷ ಕೋಟಿಗೆ ಮುಟ್ಟಿದೆ. ಆಮದು ಪ್ರಮಾಣದಲ್ಲಿ ಶೇ 7.7ರಷ್ಟು ಹೆಚ್ಚಳವಾಗಿದ್ದು, ₹5.17 ಲಕ್ಷ ಕೋಟಿ ಮೌಲ್ಯದ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗಿದೆ.

ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ಕೊರತೆಯ ಅಂತರ ₹1.98 ಲಕ್ಷ ಕೋಟಿ ಆಗಿದೆ. ಇದು ಏಳು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಣ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎಂದು ಕರೆಯುತ್ತಾರೆ.

ಆದರೆ, ಜಾಗತಿಕ ಆರ್ಥಿಕ ಅನಿಶ್ಚಿತತೆ ನಡುವೆಯೇ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಔಷಧ, ಜವಳಿ ಹಾಗೂ ಪ್ಲಾಸ್ಟಿಕ್ ವಸ್ತುಗಳ ರಫ್ತು ಪ್ರಮಾಣವು ಸಕಾರಾತ್ಮಕ ಬೆಳವಣಿಗೆ ಕಂಡಿದೆ. ಒಟ್ಟಾರೆ ಆಮದು ಪ್ರಮಾಣದಲ್ಲಿ ಕಚ್ಚಾ ತೈಲದ ಪ್ರಮಾಣ ಹೆಚ್ಚಿದೆ.

ಮೇ ತಿಂಗಳಿನಲ್ಲಿ ₹1.67 ಲಕ್ಷ ಕೋಟಿ ಮೌಲ್ಯದ ತೈಲವು ಭಾರತಕ್ಕೆ ಪೂರೈಕೆಯಾಗಿದೆ. ಏಪ್ರಿಲ್ ಮತ್ತು ಮೇ ಅವಧಿಯಲ್ಲಿ ₹3.04 ಲಕ್ಷ ಕೋಟಿ ಮೌಲ್ಯದ ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ.

ಆದರೆ, ಚಿನ್ನದ ಆಮದು ಪ್ರಮಾಣದಲ್ಲಿ ಇಳಿಕೆಯಾಗಿದೆ.

ಬಿಎಚ್‌ಇಎಲ್‌ಗೆ ₹7 ಸಾವಿರ ಕೋಟಿ ಮೌಲ್ಯದ ಆರ್ಡರ್

ನವದೆಹಲಿ (ಪಿಟಿಐ): ಅದಾನಿ ಪವರ್ ಕಂಪನಿಯಿಂದ ₹7 ಸಾವಿರ ಕೋಟಿ ಮೌಲ್ಯದ ಎರಡು ಹೊಸ ಆರ್ಡರ್‌ಗಳು ಲಭಿಸಿವೆ ಎಂದು ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ತಿಳಿಸಿದೆ.

ಅದಾನಿ ಕಂಪನಿಯು ಛತ್ತೀಸಗಢದ ರಾಯ್‌ಪುರ ಜಿಲ್ಲೆ ಮತ್ತು ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುತ್ತಿದೆ. ಈ ಎರಡೂ ಸ್ಥಾವರಗಳಿಂದ ಆರ್ಡರ್ ಸಿಕ್ಕಿದೆ ಎಂದು ತಿಳಿಸಿದೆ.

ಜಿ7 ಶೃಂಗಸಭೆ ವೇಳೆ ಉಕ್ರೇನ್ ಅಧ್ಯಕ್ಷರಿಗೆ ಭಾರತದ ಪ್ರಧಾನಿ ಮೋದಿ ಕಿವಿಮಾತು

‘ಮಾತುಕತೆ, ರಾಜತಾಂತ್ರಿಕತೆಯೊಂದೇ ಶಾಂತಿ ಮಾರ್ಗ’

ಬಾರಿ (ಇಟಲಿ) (ಪಿಟಿಐ): ಸಂಘರ್ಷ ಶಮನಗೊಳಿಸಿ ಶಾಂತಿ ಸ್ಥಾಪಿಸಲು ‘ಮಾತುಕತೆ ಮತ್ತು ರಾಜತಾಂತ್ರಿಕ’ ಮಾರ್ಗವೊಂದೇ ಪರಿಹಾರ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ಶುಕ್ರವಾರ ಮತ್ತೊಮ್ಮೆ ಹೇಳಿದ್ದಾರೆ.

ಇಟಲಿಯ ಪುಗ್ಲಿಯಾ ಪ್ರದೇಶದ ಐಷಾರಾಮಿ ರೆಸಾರ್ಟ್‌ನಲ್ಲಿ ನಡೆಯುತ್ತಿರುವ ಜಿ7 ರಾಷ್ಟ್ರಗಳ ಶೃಂಗಸಭೆಯ ನೇಪಥ್ಯದಲ್ಲಿ ಉಭಯ ರಾಷ್ಟ್ರಗಳ ನಾಯಕರು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಉಕ್ರೇನ್ ಸಂಘರ್ಷ ಕೊನೆಗಾಣಿಸಲು ಶಾಂತಿಯುತ ಪರಿಹಾರಕ್ಕಾಗಿ ಭಾರತವು ತನ್ನ ಸಾಮರ್ಥ್ಯ ಬಳಸಿಕೊಂಡು ಎಲ್ಲ ರೀತಿಯ ಪ್ರಯತ್ನ ಮಾಡುವುದನ್ನು ಮುಂದುವರಿಸಲಿದೆ. ಶಾಂತಿಯ ಮಾರ್ಗವನ್ನು ಯಾವಾಗಲೂ ಭಾರತ ಬೆಂಬಲಿಸಲಿದೆ ಎಂದು ಮೋದಿ ಭರವಸೆ ನೀಡಿದರು.

ಯಾವುದೇ ಸಮಸ್ಯೆಗಳ ಪರಿಹಾರಕ್ಕೆ ಭಾರತವು ಮಾನವೀಯ ಕೇಂದ್ರಿತ ನೆಲೆಗಟ್ಟಿನ ವಿಧಾನದಲ್ಲಿ ಬಲವಾದ ನಂಬಿಕೆ ಇರಿಸಿದೆ ಎಂದೂ ಮೋದಿ ಅವರು ಝೆಲೆನ್‌ಸ್ಕಿಯವರಿಗೆ ತಿಳಿಸಿದರು.

ಉಕ್ರೇನ್‌ನಲ್ಲಿನ ಪರಿಸ್ಥಿತಿ ಮತ್ತು ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯಲಿರುವ ಶಾಂತಿ ಶೃಂಗಸಭೆಯ ಕುರಿತು ಉಭಯ ನಾಯಕರು ಇದೇ ವೇಳೆ ವಿಚಾರ ವಿನಿಮಯ ಮಾಡಿಕೊಂಡರು ಎಂದು ಭಾರತದ ವಿದೇಶಾಂಗ ಸಚಿವಾಲಯವೂ ಹೇಳಿದೆ.

‘ಉಕ್ರೇನ್ ಅಧ್ಯಕ್ಷರ ಜತೆಗಿನ ಸಭೆ ಅತ್ಯಂತ ಫಲಪ್ರದವಾಗಿತ್ತು’ ಎಂದು ಬಣ್ಣಿಸಿದ ಮೋದಿ, ಉಕ್ರೇನ್ ಜೊತೆಗಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಭಾರತ ಉತ್ಸುಕವಾಗಿದೆ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇಟಲಿಯಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಭೇಟಿಯಾಗಿ ಕುಶಲೋಪರಿ ನಡೆಸಿದರು. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಪಾಲ್ಗೊಂಡಿದ್ದರು– ಎಪಿ/ಪಿಟಿಐ ಚಿತ್ರ

ಸುನಕ್, ಮ್ಯಾಕ್ರನ್, ಮೆಲೋನಿ ಜತೆ ದ್ವಿಪಕ್ಷೀಯ ಸಭೆ: ಪ್ರಧಾನಿ ಮೋದಿ ಅವರು, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಂದಿಗೂ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಮಾತುಕತೆ ವೇಳೆ ಸೇನೆ, ಪರಮಾಣು, ಬಾಹ್ಯಾಕಾಶ, ಶಿಕ್ಷಣ, ಹವಾಮಾನ ಬದಲಾವಣೆ, ಡಿಜಿಟಲ್ ಮೂಲಸೌಕರ್ಯ, ತಂತ್ರಜ್ಞಾನ, ಸಂಪರ್ಕ, ಸಂಸ್ಕೃತಿ ವಿಷಯಗಳ ಜತೆಗೆ ಜಾಗತಿಕ ಮತ್ತು ಪ್ರಾದೇಶಿಕ ಸಮಸ್ಯೆಗಳ ಕುರಿತೂ ಚರ್ಚಿಸಿದರು.

‘ನನ್ನ ಗೆಳೆಯ ಮ್ಯಾಕ್ರನ್ ಅವರೊಂದಿಗೆ ಫಲಪ್ರದವಾದ ಚರ್ಚೆ ನಡೆಸಿದ್ದೇನೆ. ವರ್ಷದಲ್ಲಿ ಇದು ನಮ್ಮ ನಾಲ್ಕನೇ ಭೇಟಿ. ಶಕ್ತಿಯುತವಾದ ಭಾರತ-ಫ್ರಾನ್ಸ್ ಬಾಂಧವ್ಯಕ್ಕೆ ಆದ್ಯತೆ ನೀಡಿದ್ದೇವೆ. ರಕ್ಷಣೆ, ಭದ್ರತೆ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಆರ್ಥಿಕತೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದ್ದೇವೆ’ ಎಂದರು.

ಮರು ಆಯ್ಕೆ; ವಿಶ್ವ ಜನತಂತ್ರದ ಗೆಲುವು

ಪ್ರಜಾವಾಣಿ ವಾರ್ತೆ

ನವದೆಹಲಿ: ತಂತ್ರಜ್ಞಾನದ ಬಳಕೆಯಿಂದಾಗಿ ಭಾರತದಲ್ಲಿ ನ್ಯಾಯಯುತ, ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಯುವಂತಾಗಿದೆ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಜಿ7 ರಾಷ್ಟ್ರಗಳ ಶೃಂಗಸಭೆಯಲ್ಲಿ ಶುಕ್ರವಾರ ಹೇಳಿದರು.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯನ್ನು ‘ಮಾನವನ ಇತಿಹಾಸದಲ್ಲಿಯೇ ಅತಿ ದೊಡ್ಡದು’ ಎಂದು ಬಣ್ಣಿಸಿದರು.

ಮೂರನೇ ಅವಧಿಗೆ ತಾವು ಪ್ರಧಾನ ಮಂತ್ರಿ ಸ್ಥಾನವನ್ನು ಅಲಂಕರಿಸಲು ಚುನಾವಣಾ ಫಲಿತಾಂಶ ಅನುವು ಮಾಡಿಕೊಟ್ಟಿದ್ದು, ಅದು ‘ಇಡೀ ವಿಶ್ವದ ಪ್ರಜಾ-ಪ್ರಭುತ್ವಕ್ಕೆ ಸಂದ ಗೆಲುವಾಗಿದೆ’ ಎಂದು ಹೇಳಿದರು.

‘ಸತತ ಮೂರನೇ ಬಾರಿಗೆ ಸೇವೆ ಸಲ್ಲಿಸಲು ದೇಶದ ಜನರು ನನಗೆ ಅವಕಾಶ ಮಾಡಿಕೊಟ್ಟಿರುವುದು ನನ್ನ ಅದೃಷ್ಟ. ಕಳೆದ ಆರು ದಶಕಗಳಲ್ಲಿ ಭಾರತದಲ್ಲಿ ಇದೇ ಮೊದಲ ಬಾರಿಗೆ ಇಂತಹ ಅವಕಾಶ ದೊರೆತಿದೆ’ ಎಂದರು.

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರೊಟ್ಟಿಗೆ ಪ್ರತ್ಯೇಕವಾಗಿ ಮಾತನಾಡಿ, ಖಾಲಿಸ್ತಾನಿ ಉಗ್ರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯ ಕುರಿತು ಚರ್ಚಿಸಿದರು.

ಭಾಷಣ ಮಾಡಿದ ಮೊದಲ ಪೋಪ್

ಬಾರಿ (ಇಟಲಿ) (ಎಪಿ): ಪೋಪ್ ಫ್ರಾನ್ಸಿಸ್ ಅವರು ಶುಕ್ರವಾರ ಏಳು ರಾಷ್ಟ್ರಗಳ ಗುಂಪಿನ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಮೊದಲ ಧರ್ಮಗುರು ಎನ್ನುವ ಶ್ರೇಯಕ್ಕೆ ಪಾತ್ರರಾದರು.

ಪ್ರತಿನಿಧಿಗಳ ಗೌಜುಗದ್ದಲದಿಂದ ಕೂಡಿದ್ದ ಸಭಾಂಗಣ, ಪೋಪ್ ಅವರನ್ನು ವೇದಿಕೆಗೆ ಆಹ್ವಾನಿಸುತ್ತಿದ್ದಂತೆ ಅವರ ಭಾಷಣ ಆಲಿಸಲು ಇಡೀ ಸಭಾಂಗಣ ಸ್ತಬ್ಧವಾಯಿತು.

ಕೃತಕ ಬುದ್ಧಿಮತ್ತೆಯ (ಎ.ಐ) ಅನುಕೂಲಗಳು ಮತ್ತು ಅಪಾಯಗಳ ಬಗ್ಗೆ ಮಾತನಾಡಿದ ಅವರು, ಎ.ಐ ಅನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಬಳಸುವಲ್ಲಿ ಮಾನವ ಘನತೆಯನ್ನು ಅಗ್ರಸ್ಥಾನದಲ್ಲಿಟ್ಟುಕೊಳ್ಳುವಂತೆ ಪ್ರಮುಖ ರಾಷ್ಟ್ರಗಳ ನಾಯಕರಿಗೆ ಕರೆಕೊಟ್ಟರು. ಇಂತಹ ಶಕ್ತಿಯುತ ತಂತ್ರಜ್ಞಾನವು ಮಾನವ ಸಂಬಂಧಗಳನ್ನು ಸಂಕೀರ್ಣಗೊಳಿಸುವ ಅಪಾಯ ಇದೆ ಎಂದು ಎಚ್ಚರಿಸಿದರು.

ಭಾರತಕ್ಕೆ ಭೇಟಿ ನೀಡುವಂತೆಯೂ ಪೋಪ್ ಅವರಿಗೆ ಮೋದಿ ಆಹ್ವಾನ ನೀಡಿದರು.

ಭಾರತಕ್ಕೆ ಸುಲಭ ಜಯದ ಗುರಿ

ಕೆನಡಾ ವಿರುದ್ಧ ಮುಖಾಮುಖಿ ಇಂದು: ಮಳೆ ಅಡ್ಡಿಯಾಗುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಫ್ಲಾರಿಡಾ: ಭಾರತ ಕ್ರಿಕೆಟ್ ತಂಡ ಗುರುವಾರ ಫೋರ್ಟ್ ಲಾಡೆರ್‌ಡೇಲ್–ಹಾಲಿವುಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು.

ವಿಮಾನ ಭೂಸ್ಪರ್ಷ ಮಾಡಿದಾಗ ರನ್‌ವೇ ಮೇಲಿದ್ದ ನೀರು, ಮಳೆ ಬಂದು ನಿಂತಿರುವುದನ್ನು ಸೂಚ್ಯವಾಗಿ ಹೇಳುತ್ತಿತ್ತು. ಪ್ರಯಾಣದುದ್ದಕ್ಕೂ ಕಾರ್ಮೋಡಗಳ ನಡುವೆ ನಡುಗಿಕೊಂಡೆ ಬಂದಿದ್ದ ಲೋಹದ ಹಕ್ಕಿಯನ್ನು ಪೈಲಟ್‌ಗಳು ಜಾಗರೂಕತೆಯಿಂದ ಲ್ಯಾಂಡ್ ಮಾಡಿದ್ದರು.

ಕೆನಡಾ ತಂಡದಲ್ಲಿರುವ ಕರ್ನಾಟಕದ ಶ್ರೇಯಸ್ ಮೊವಾ –ಎಎಫ್‌ಪಿ ಚಿತ್ರ

ಶನಿವಾರ ಇದೇ ಊರಿನ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು ಕೆನಡಾ ತಂಡವನ್ನು ಎದುರಿಸಲಿದೆ. ಬಹುತೇಕ ಪಂದ್ಯದ ಅವಧಿಯ ಶೇ 70ರಷ್ಟು ಭಾಗವು ಮಳೆಯಿಂದಾಗಿ ಕೊಚ್ಚಿಹೋಗುವ ಸಾಧ್ಯತೆಗಳಿವೆ. ಆದರೆ ಮಳೆಮಾರುತದ ದಿಕ್ಕು ಬದಲಾದರೆ ಪೂರ್ಣ ಪಂದ್ಯವೂ ನಡೆಯಬಹುದು.

ಅಷ್ಟಕ್ಕೂ ಭಾರತ ತಂಡವು ಈಗಾಗಲೇ ಸೂಪರ್ 8ರ ಹಂತ ತಲುಪಿದೆ. ಕಳೆದ ಮೂರು ಪಂದ್ಯಗಳಲ್ಲಿ ಜಯಸಿದೆ, ಗುಂಪು ಹಂತದಲ್ಲಿ ರೋಹಿತ್ ಶರ್ಮಾ ಬಳಗಕ್ಕೆ ಇದು ಕೊನೆಯ ಪಂದ್ಯವಾಗಿದೆ. ಕೆನಡಾ ತಂಡಕ್ಕೂ ಇದು ಕೊನೆಯ ಹಣಾಹಣಿ. ಕಳೆದ ಮೂರು ಪಂದ್ಯಗಳಲ್ಲಿ ಎರಡು ಸೋತಿರುವ ತಂಡವು ಐರ್ಲೆಂಡ್ ಎದುರು ಜಯಿಸಿತ್ತು.

ರೋಹಿತ್ ಬಳಗಕ್ಕೆ ಎಂಟರ ಘಟ್ಟದ ಪೂರ್ವಸಿದ್ಧತೆಗೆ ಈ ಪಂದ್ಯ ವೇದಿಕೆ ಆಗಲಿದೆ. ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಿ ಬೆಂಚ್‌ನಲ್ಲಿರುವವರಿಗೆ ಅವಕಾಶ ನೀಡುವತ್ತ ತಂಡದ ಮ್ಯಾನೇಜ್ ಮೆಂಟ್ ಚಿತ್ತ ಹರಿಸುವ ಸಾಧ್ಯತೆ ಇದೆ. ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ಆದ್ಯತೆ ನೀಡುವ ಸಾಧ್ಯತೆ ಹೆಚ್ಚಿದೆ.

ಕೆನಡಾ ತಂಡವು ಕಳೆದ ಪಂದ್ಯಗಳಲ್ಲಿ ಆಡಿದ ಸಂಯೋಜನೆಯನ್ನೇ ಉಳಿಸಿಕೊಂಡು ಕಣಕ್ಕಿಳಿಯಬಹುದು. ಈ ತಂಡದಲ್ಲಿ ಒಟ್ಟು ಐವರು ಭಾರತೀಯ ಮೂಲದವರಿದ್ದಾರೆ. ಅದರಲ್ಲಿ ದಾವಣಗೆರೆಯ ಶ್ರೇಯಸ್ ಮೊವಾ (ವಿಕೆಟ್‌ಕೀಪರ್) ಕೂಡ ಒಬ್ಬರಾಗಿದ್ದರೆ.

ತಂಡದ ನಾಯಕ ಸಾದ್ ಬಿನ್ ಜಾಫರ್ ಸೇರಿದಂತೆ ಮೂವರು ಪಾಕಿಸ್ತಾನದವರಿದ್ದಾರೆ. ಭಾರತ ಮತ್ತು ಕೆನಡಾ ತಂಡಗಳು ಇದೇ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿವೆ. ಗುಂಪು ಹಂತದಲ್ಲಿ ಅಜೇಯವಾಗುಳಿಯುವ ಭಾರತ ತಂಡದ ಗುರಿಗೆ ಸವಾಲೊಡ್ಡಲು ಕೆನಡಾ ಸಿದ್ಧವಾಗಿದೆ.

ಭಾರತ ಕ್ರಿಕೆಟ್ ತಂಡ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್
ಕೆನಡಾ: ಸಾದ್ ಬಿನ್ ಜಾಫರ್ (ನಾಯಕ), ಆ್ಯರನ್ ಜಾನ್ಸನ್, ನವನೀತ್ ಧಲಿವಾಲ್, ಪರ್ಗತ್ ಸಿಂಗ್, ನಿಕೋಲಸ್ ಕಿರ್ಟನ್, ಶ್ರೇಯಸ್ ಮೊವಾ (ವಿಕೆಟ್‌ಕೀಪರ್), ರವಿಂದರ್‌ಪಾಲ್ ಸಿಂಗ್, ಖಲೀಂ ಸನಾ, ದಿಲ್ಲೋನ್ ಹೆಲಿಗರ್, ಜುನೈದ್ ಸಿದ್ಧಿಕ್, ಜೆರೆಮಿ ಗೊರ್ಡಾನ್.

ಇಂದಿನ ಪಂದ್ಯ

ನೇಪಾಳ	Vs ದಕ್ಷಿಣ ಆಫ್ರಿಕಾ	(ಬೆಳಿಗ್ಗೆ 5)
ನ್ಯೂಜಿಲೆಂಡ್	Vs ಯುಗಾಂಡ	(ಬೆಳಿಗ್ಗೆ 6)
ಕೆನಡಾ	Vs ಭಾರತ	(ರಾತ್ರಿ 8)
ಇಂಗ್ಲೆಂಡ್	Vs ನಮೀಬಿಯಾ	(ರಾತ್ರಿ 10)

ಲೈವ್: ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

19 ಎಸೆತಗಳಲ್ಲಿ 50 ರನ್ ಗಳಿಸಿದ ಇಂಗ್ಲೆಂಡ್

ನಾರ್ತ್ ಸೌಂಡ್, ಆ್ಯಂಟಿಗಾ (ಎಪಿ): ಇಂಗ್ಲೆಂಡ್ ತಂಡವು ಶುಕ್ರವಾರ ಇಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಕೇವಲ 3.1 ಓವರ್‌ಗಳಲ್ಲಿ 50 ರನ್ ಗಳಿಸಿ ಗೆದ್ದಿತು. ಇದರೊಂದಿಗೆ ನೆಟ್ ರನ್‌ರೇಟ್‌ನಲ್ಲಿ ಗಮನಾರ್ಹ (+3.081) ಏರಿಕೆ ಕಂಡಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಒಮಾನ್ ತಂಡವು ಇಂಗ್ಲೆಂಡ್ ಸ್ಪಿನ್ನರ್ ಆದಿಲ್ ರಶೀದ್ (11ಕ್ಕೆ4) ಅವರ ದಾಳಿಗೆ ತತ್ತರಿಸಿತು. 13.2 ಓವರ್‌ಗಳಲ್ಲಿ 47 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡ 3.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 50 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಒಮಾನ್: 13.2 ಓವರ್‌ಗಳಲ್ಲಿ 47 (ಶೋಯಬ್ ಖಾನ್ 11, ಜೋಫ್ರಾ ಆರ್ಚರ್ 12ಕ್ಕೆ3, ಮಾರ್ಕ್ ವುಡ್ 12ಕ್ಕೆ3, ಆದಿಲ್ ರಶೀದ್ 11ಕ್ಕೆ4) ಇಂಗ್ಲೆಂಡ್: 3.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 50 (ಫಿಲಿಪ್ ಸಾಲ್ಟ್ 12, ಜೋಸ್ ಬಟ್ಲರ್ ಔಟಾಗದೆ 24, ಬಿಲಾಲ್ ಖಾನ್ 36ಕ್ಕೆ1, ಖಲೀಮುಲ್ಲಾ 10ಕ್ಕೆ1) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ: ಆದಿಲ್ ರಶೀದ್.**

ಇಂಗ್ಲೆಂಡ್ ತಂಡದ ಆದಿಲ್ ರಶೀದ್ – ಎಪಿ/ಪಿಟಿಐ ಚಿತ್ರ

ಹೊರಬಿದ್ದ ಪಾಕ್: ಎಂಟರ ಹಂತಕ್ಕೆ ಅಮೆರಿಕ

ಫ್ಲಾರಿಡಾ (ಪಿಟಿಐ): ಅಮೆರಿಕ ಮತ್ತು ಐರ್ಲೆಂಡ್ ತಂಡಗಳ ನಡುವೆ ಶುಕ್ರವಾರ ನಡೆಯಬೇಕಿದ್ದ ಪಂದ್ಯ ಮಳೆಯಿಂದ ರದ್ದುಗೊಂಡಿತು. ಐದು ಅಂಕಗಳೊಂದಿಗೆ ಮೊದಲ ಬಾರಿಗೆ ಆತಿಥೇಯ ತಂಡ ಸೂಪರ್ 8ಕ್ಕೆ ಪ್ರವೇಶಿಸಿದರೆ, ಮಾಜಿ ಚಾಂಪಿಯನ್ ಪಾಕಿಸ್ತಾನ ತಂಡ ಟೂರ್ನಿಯಿಂದ ಹೊರಬಿತ್ತು.

ಭಾರತೀಯ ಕಾಲಮಾನದ ಪ್ರಕಾರ ರಾತ್ರಿ 8ರಿಂದ ಪಂದ್ಯ ನಡೆಯಬೇಕಿತ್ತು. ಆದರೆ ಮಳೆ ಮತ್ತು ತೇವಗೊಂಡ ಮೈದಾನದ ಕಾರಣ ಟಾಸ್ ಕೂಡ ಸಾಧ್ಯವಾಗಲಿಲ್ಲ. ಈ ಅವಧಿಯಲ್ಲಿ ಅಂಪೈರ್‌ಗಳು ಮೂರು ಬಾರಿ ಪಿಚ್ ಮತ್ತು ಹೊರಾಂಗಣದ ಪರಿಶೀಲನೆ ನಡೆಸಿದರು. ಬಳಿಕ ಪಂದ್ಯ ರದ್ದುಗೊಳಿಸಿ, ಉಭಯ ತಂಡಗಳಿಗೆ ತಲಾ ಒಂದು ಅಂಕ ನೀಡಲಾಯಿತು.

‘ಎ’ ಗುಂಪಿನಲ್ಲಿ ಅಮೆರಿಕ ನಾಲ್ಕು ಪಂದ್ಯಗಳಿಂದ ಐದು ಅಂಕ ಗಳಿಸಿ, ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನ ಕ್ಕೇರಿತು. ಆದರೆ ಪಾಕಿಸ್ತಾನ ತಂಡವು ಮೂರು ಪಂದ್ಯಗಳಿಂದ ಎರಡು ಅಂಕ ಮಾತ್ರ ಸಂಪಾದಿಸಿದೆ. ಹಾಗಾಗಿ ಪಾಕ್ ತಂಡ ಟೂರ್ನಿಯಿಂದ ಹೊರಬಿತ್ತು.

ಜೂನ್ 6ರಂದು ನಡೆದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಆತಿಥೇಯ ಅಮೆರಿಕ ವಿರುದ್ಧ ಸೂಪರ್ ಓವರ್‌ನಲ್ಲಿ ಸೋಲುನುಭವಿಸಿತ್ತು. ಜೂನ್ 9 ರಂದು ತನ್ನ ಸಾಂಪ್ರದಾಯಿಕ ಎದುರಾಳಿ ಭಾರತ ತಂಡದ ವಿರುದ್ಧ ಪರಾಭವಗೊಂಡಿತು. ಜೂನ್ 11 ರಂದು ಕೆನಡಾ ವಿರುದ್ಧ ಪಂದ್ಯದಲ್ಲಿ ಮಾತ್ರ ಪಾಕ್ ಗೆಲುವು ಸಾಧಿಸಿದೆ. 2009ರಲ್ಲಿ ಪಾಕ್ ತಂಡ ಟಿ20 ವಿಶ್ವಕಪ್ ಗೆದ್ದಿತ್ತು.

ಈ ಗುಂಪಿನಿಂದ ಭಾರತ ತಂಡವು ಈಗಾಗಲೇ ಎಂಟರ ಹಂತ ಪ್ರವೇಶಿಸಿದೆ. ಒಂದೊಮ್ಮೆ ಅಮೆರಿಕ ಸೋತಿದ್ದರೆ ಮೂರನೇ ಸ್ಥಾನದಲ್ಲಿರುವ ಪಾಕಿಸ್ತಾನ ತಂಡವು ಸೂಪರ್ 8ರ ಘಟ್ಟ ಪ್ರವೇಶಿಸುವ ಆಸೆ ಜೀವಂತವಾಗಿರುತ್ತಿತ್ತು. ಆದರೆ ಮಳೆ ಅದಕ್ಕೆ ಅವಕಾಶ ನೀಡಲಿಲ್ಲ.

ಪಾಕಿಸ್ತಾನ ಗುಂಪಿನಲ್ಲಿ ತನ್ನ ಕೊನೆಯ ಪಂದ್ಯವನ್ನು ಐರ್ಲೆಂಡ್ ವಿರುದ್ಧ ಆಡಲಿದೆ.



ಮೈದಾನ ಪರಿಶೀಲಿಸಿದ ಅಂಪೈರ್‌ಗಳು ಎಪಿ/ಪಿಟಿಐ ಚಿತ್ರ

ಮತ್ತೆ ಮಿಂಚಿದ ವೇಗಿ ಫರೂಕಿ • ಪಾಪುವಾ ನ್ಯೂಗಿನಿಗೆ 3ನೇ ಸೋಲು

ಅಫ್ಗಾನಿಸ್ತಾನ ತಂಡಕ್ಕೆ ಹ್ಯಾಟ್ರಿಕ್ ಗೆಲುವು

ತರೂಬಾ (ಟ್ರಿನಿಡಾಡ್), (ಪಿಟಿಐ): ಉತ್ತಮ ಲಯದಲ್ಲಿರುವ ಎಡಗೈ ವೇಗಿ ಫಜಲ್ಲಖ್ ಫರೂಕಿ (16ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಮತ್ತು ಗುಲ್ಬದಿನ್ ನೈಬ್ ಅವರ ಅಜೇಯ 49 ರನ್‌ಗಳ (36ಎ) ನೆರವಿನಿಂದ ಅಫ್ಗಾನಿಸ್ತಾನ ತಂಡ ಶುಕ್ರವಾರ ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಪುವಾ ನ್ಯೂಗಿನಿ ಮೇಲೆ ಏಳು ವಿಕೆಟ್‌ಗಳ ಸುಲಭ ಜಯ ಪಡೆಯಿತು.

‘ಸಿ’ ಗುಂಪಿನಲ್ಲಿ ಸತತ ಮೂರನೇ ಗೆಲುವಿನೊಡನೆ ರಶೀದ್ ಖಾನ್ ಬಳಗ ಮೊದಲ ಬಾರಿ ಸೂಪರ್ ಎಂಟರಲ್ಲಿ ಸ್ಥಾನ ಕಾದಿರಿಸಿತು. ವೆಸ್ಟ್ ಇಂಡೀಸ್ ಈ ಮೊದಲೇ ಗುಂಪಿನಿಂದ ಸೂಪರ್ ಎಂಟಕ್ಕೆ ಅರ್ಹತೆ ಪಡೆದಿತ್ತು. ಅಫ್ಗನ್ನರ ಗೆಲುವಿನಿಂದ, ನ್ಯೂಜಿಲೆಂಡ್ ಹೊರಬಿದ್ದಂತಾಯಿತು. ಆಡಿದ ಮೂರೂ ಪಂದ್ಯ ಸೋತು ಗುಂಪಿನಲ್ಲಿ ಅದು ಕೊನೆಯ ಸ್ಥಾನದಲ್ಲಿದೆ.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಪಾಪುವಾ ನ್ಯೂಗಿನಿ 95ಕ್ಕೆ (19.1) ಉರುಳಿತು. ಅಫ್ಗನ್ ತಂಡ 15.1 ಓವರುಗಳಲ್ಲಿ 3 ವಿಕೆಟ್‌ಗೆ 101 ರನ್ ಹೊಡೆದು ಗೆಲುವು ಪೂರೈಸಿತು.

ಫರೂಕಿ ತಮ್ಮ ಎರಡನೇ ಓವರ್‌ನ ಸತತ ಎರಡು ಎಸೆತಗಳಲ್ಲಿ ವಿಕೆಟ್‌ಗಳನ್ನು ಪಡೆದು ನ್ಯೂಗಿನಿಗೆ ಹೊಡೆತ ನೀಡಿದರು. ಆಗ ಮೊತ್ತ 17ಕ್ಕೆ4. ನಂತರ ನಿಯಮಿತವಾಗಿ ವಿಕೆಟ್‌ಗಳು ಬಿದ್ದವು. ಹೊಸ ಚೆಂಡಿನಲ್ಲಿ ಅವರ ಜೊತೆಗಾರ ನವೀನ್ ಉಲ್ ಹಕ್ 4 ರನ್ನಿಗೆ 2 ವಿಕೆಟ್ ಪಡೆದು ಉತ್ತಮ ಬೆಂಬಲ ನೀಡಿದರು. ಅನನುಭವಿ ನ್ಯೂಗಿನಿ ತಂಡದ ನಾಲ್ವರು ರನೌಟ್ ಆದರು. ವಿಕೆಟ್ ಕೀಪರ್ ಕಿಪ್ಲಿನ್ ದೊರಿಗಾ ಗಳಿಸಿದ 27 ರನ್‌ಗಳೇ ತಂಡದ ವೈಯಕ್ತಿಕ ಗರಿಷ್ಠ.

ಇದುವರೆಗಿನ ಮೂರು ಪಂದ್ಯಗಳಲ್ಲಿ ಫರೂಕಿ ಅವರ ಒಟ್ಟು ನಿರ್ವಹಣೆ 11.2–0–42–12. ಅವರು ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಇತರೆ ರೂಪದಲ್ಲಿ 25 ರನ್‌ಗಳು ಹರಿದುಬಂದ ಕಾರಣ ನ್ಯೂಗಿನಿ ತಂಡದ ಮೊತ್ತ 95 ತಲುಪಲು ಸಾಧ್ಯವಾಯಿತು.

ಸಣ್ಣ ಮೊತ್ತ ಬೆನ್ನಟ್ಟುವ ಹಾದಿಯಲ್ಲಿ ಅಫ್ಗನ್ನರು ಆರಂಭ ಆಟಗಾರರಾದ ರಹಮಾನುಲ್ಲಾ ಗುರ್ಬಾಝ್ ಮತ್ತು ಇಬ್ರಾಹಿಂ ಜದ್ರಾನ್ ಅವರನ್ನು ಬೇಗ ಕಳೆದುಕೊಂಡರು. ಆದರೆ ನೈಬ್ ಒಂದೆಡೆ ಅಚಲವಾಗಿ ನಿಂತರು.

ಸ್ಕೋರುಗಳು: ಪಾಪುವಾ ನ್ಯೂಗಿನಿ: 19.5 ಓವರುಗಳಲ್ಲಿ 95 (ಕಿಪ್ಲಿನ್ ದೊರಿಗಾ 27; ಫಜಲ್ಲಖ್ ಫರೂಕಿ 16ಕ್ಕೆ3, ನವೀನ್ ಉಲ್ ಹಕ್ 4ಕ್ಕೆ2); ಅಫ್ಗಾನಿಸ್ತಾನ: 15.1 ಓವರುಗಳಲ್ಲಿ 3 ವಿಕೆಟ್‌ಗೆ 101 (ಗುಲ್ಬದಿನ್ ನೈಬ್ ಔಟಾಗದೇ 49, ಮೊಹಮ್ಮದ್ ನಬಿ ಔಟಾಗದೇ 16; ಅಲಿ ನಾವೊ 26ಕ್ಕೆ1, ಸೆಮೊ ಕಮಿಯಾ 16ಕ್ಕೆ1, ನಾರ್ಮನ್ ವನುವ 18ಕ್ಕೆ1). ಪಂದ್ಯದ ಆಟಗಾರ: ಫಜಲ್ಲಖ್ ಫರೂಕಿ.

ಅಫ್ಗಾನಿಸ್ತಾನದ ಬೌಲರ್ ಫಜಲ್ಲಖ್ ಫರೂಕಿ (ಬಲದಿಂದ ಎರಡನೇಯವರು) ಅವರನ್ನು ಅಭಿನಂದಿಸುತ್ತಿರುವ ಸಹ ಆಟಗಾರರು. ಎಎಫ್‌ಪಿ ಚಿತ್ರ

ಹೆರಾನ್ಸ್ ಕ್ರಿಕೆಟ್ ಕ್ಲಬ್‌ಗೆ ಎಂ.ಎ.ಟಿ ಆಚಾರ್ಯ ಶೀಲ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ತಂಡವು 24 ವರ್ಷಗಳ ನಂತರ ಎಂ.ಎ.ಟಿ ಆಚಾರ್ಯ ಶೀಲ್ಡ್ ಕೆಎಸ್‌ಸಿಎ ಎರಡನೇ ಡಿವಿಷನ್ ಪ್ರಥಮ ಗುಂಪಿನ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಟೂರ್ನಿಯಲ್ಲಿ ಹೆರಾನ್ಸ್ ತಂಡವು 11 ಪಂದ್ಯಗಳಲ್ಲಿ ಆಡಿ 37 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆಯಿತು.

ಜವಾನ್ಸ್ ಕ್ರಿಕೆಟ್ ಕ್ಲಬ್ (33 ಅಂಕ), ಜವಾಹರ್ ಸ್ಪೋರ್ಟ್ಸ್ ಕ್ಲಬ್ (29 ಅಂಕ) ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದವು.

ಬೆಂಗಳೂರು ಕ್ರಿಕೆಟರ್ಸ್ (25), ವಿಜಯಾ ಸಿಸಿ (25), ಮಾಡರ್ನ್ ಸಿಸಿ (23), ಸೆಂಚುರಿ ಕ್ರಿಕೆಟರ್ಸ್ (22), ಜುಪಿಟರ್ ಸಿಎ (21), ವಿಲ್ಸನ್ ಗಾರ್ಡನ್ ಸಿಸಿ (20), ಜವಾಹರ್ ಸ್ಪೋರ್ಟ್ಸ್ ಕ್ಲಬ್ (19), ವಿಶ್ವೇಶ್ವರಪುರಂ ಸಿಸಿ (9) ಹಾಗೂ ಚಿಂತಾಮಣಿ ಸ್ಪೋರ್ಟ್ಸ್ ಸಂಸ್ಥೆ (0) ಕ್ರಮವಾಗಿ ನಂತರದ ಸ್ಥಾನಗಳಲ್ಲಿವೆ. ಇದರೊಂದಿಗೆ ಹೆರಾನ್ಸ್ ಮತ್ತು ಜವಾನ್ಸ್ ತಂಡಗಳು ಪ್ರಥಮ ಡಿವಿಷನ್‌ಗೆ ಬಡ್ತಿ ಪಡೆದವು.

ಕೆಎಸ್‌ಸಿಎ ಎರಡನೇ ಡಿವಿಷನ್ ಲೀಗ್ ಎಂ.ಎ.ಟಿ ಆಚಾರ್ಯ ಶೀಲ್ಡ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ಬೆಂಗಳೂರಿನ ಹೆರಾನ್ಸ್ ಕ್ಲಬ್ ತಂಡ (ಎಡದಿಂದ), ನಿಂತವರು: ವಿಶ್ವನಾಥ್, ಎವಂಕರ್, ಸುಮಂತ್, ವಾಸಿಫ್, ಶಿವರತನ್, ಅಮೋಘ, ಆದಿತ್ಯ ಮಣಿ, ಸಾಯಿ ಸುಶೀಲ್ ರೆಡ್ಡಿ, ಆದರ್ಶ, ದಾನೀಶುಲ್ಲಾ ಶರೀಫ್, ಮಹೀಂದ್ರಾ, ಸುಹಾಸ್ ಅಡಿಗ. ಕುಳಿತವರು: ವಿನೀತ್ ಮಂಜುನಾಥ್, ನಿತಿನ್ ನಾಯ್ದು, ಅರ್ಜುನ್ ಹೊಯ್ಸಳ (ನಾಯಕ), ಕೆ. ಮುರಳೀಧರ (ಮ್ಯಾನೇಜರ್), ರಾಧಾಕೃಷ್ಣ (ಕಾರ್ಯದರ್ಶಿ), ರಘುನಂದನ್ (ಅಧ್ಯಕ್ಷ), ರೋಹಿತ್ ಗೌಡ, ಎಸ್.ಪಿ. ಅರ್ಜುನ್

Prajna Education Trust (R)
PACE
Advanced Learning Centre, Shivamogga
No. 1 Institution in Shivamogga for JEE, NEET & KCET
NEET LONG TERM – 2024-25
Rank Enhancement Programme
ವೈದ್ಯಕೀಯ ಶಿಕ್ಷಣಕ್ಕೆ ಸೇರಬಯಸುವ "ನಿಮ್ಮ ಕನಸನ್ನು ನನಸಾಗಿಸುವುದೇ ನಮ್ಮಗುರಿ"
ನಮ್ಮ ತರಬೇತಿಯು ಯಶಸ್ಸು ಕಂಡಿರುವುದಕ್ಕೆ ನಮ್ಮ ವಿದ್ಯಾರ್ಥಿಗಳ ಫಲಿತಾಂಶವೇ ಸಾಕ್ಷಿ
OUR NEET ACHIEVERS - 2023-24
(LONG TERM BATCH)
VARSHA K L 2023 - 466 2024 - 631
RAKSHITHA A 2023 - 320 2024 - 621
LEKHANA R 2023 - 415 2024 - 614
BHOOMIKA K. 2023 - 435 2024 - 608
SUMITH BILGI 2023 - 429 2024 - 586
ANUSHA H M 2023 - 367 2024 - 559
AMRUTHA H 2023 - 328 2024 - 550
HARSHITHA A S 2023 - 424 2024 - 527
SHANTHA B 2023 - 278 2024 - 527
VASANTHKUMAR 2023 - 231 2024 - 503
YOGITHA 2023 - 229 2024 - 500
WE SPEAK WITH THE RESULT
No. Of STUDENTS JOINED MEDICAL COURSES
2021-22 - No. Of STUDENTS: 25
MBBS (GOVT.): 04
MBBS (PVT.): 05
BDS: 04
BAMS : 05
SUCCESS RATE 72%
2022-23 - No. Of STUDENTS: 25
MBBS (GOVT.): 06
MBBS (PVT.): 06
BDS: 05
BAMS: 02
BHMS: 02
SUCCESS RATE 84%

NEET-2024ರಲ್ಲಿ ಪಡೆದ ಅಂಕಗಳು	ಶುಲ್ಕದಲ್ಲಿ ರಿಯಾಯಿತಿ
400 + ಇದ್ದಲ್ಲಿ	35%
450 + ಇದ್ದಲ್ಲಿ	50%
500 + ಇದ್ದಲ್ಲಿ	80%

NEET ತರಬೇತಿ, ಸ್ಟಡಿ ಮೆಟೀರಿಯಲ್, ಸಮವಸ್ತ್ರ, ಬಸ್, ಮಧ್ಯಾಹ್ನದ ಊಟದ ಸೌಲಭ್ಯಗಳನ್ನು ಈ ಶುಲ್ಕ ಒಳಗೊಂಡಿರುತ್ತದೆ.
ಜೂನ್–21ರಿಂದ ತರಗತಿಗಳು ಪ್ರಾರಂಭವಾಗುತ್ತವೆ
ನಮ್ಮ ವಿಶೇಷತೆಗಳು:
✓ ಅನುಭವಿ ಹಾಗೂ ನುರಿತ ಅಧ್ಯಾಪಕರಿಂದ ತರಬೇತಿ.
✓ 200+ ವಿಷಯವಾರು ದೈನಂದಿನ (Daily) ಟೆಸ್ಟ್‌ಗಳು.
✓ 50+ವಿಷಯವಾರು ಸಾಪ್ತಾಹಿಕ (Weekly) ಟೆಸ್ಟ್‌ಗಳು.
✓ 20 + Cumulative Part Tests.
✓ 50 + ಪೂರ್ಣ ಪಠ್ಯದ (Full Syllabus) ಗ್ರ್ಯಾಂಡ್ ಟೆಸ್ಟ್‌ಗಳು.
✓ ಆರೋಗ್ಯಕರ ಆಹಾರದೊಂದಿಗೆ ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ.
✓ ಮನೆಯಿಂದ ಬರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಮತ್ತು ಬಸ್ಸಿನ ವ್ಯವಸ್ಥೆ.
✓ ಅಧ್ಯಾಪಕರ ಉಪಸ್ಥಿತಿಯಲ್ಲಿ ಸಂಜೆಯಅಧ್ಯಯನ (Study Hours & Doubt Solving).
OUR NEET ACHIEVERS - 2023-24
(REGULAR BATCH)
CHRISTON R 670/720
SHABNUM BANU 668/720
PRERANA B 663/720
SONIYA V 661/720
SHEEBA FIRDOSE 654/720
MOULYA G 646/720
RITHESH RAJ 616/720
JEEVAN MATTER 596/720
HARSHINI P R 592/720
KIRAN PATEL 591/720
LAKSHMI S 577/720
PRUTHVI P 564/720
NEETHUSHREE C 563/720
MOKSH JAIN 562/720
SARASWATHI Y R 552/720

Contact Details: 9900631508 | 89517 21555 | 89518 21555 | 89519 21555
Join PACE to Win the RACE

ಯುರೊ ಕಪ್ ಫುಟ್‌ಬಾಲ್ ‘ಬಿ’ ಗುಂಪಿನ ಪಂದ್ಯ ಇಂದು

ಸ್ಪೇನ್–ಕ್ರೊವೇಷಿಯಾ ಸೆಣಸು

ಬರ್ಲಿನ್ (ಎಎಫ್‌ಪಿ): ಪೆದ್ರಿ ಗೊನ್ಸಾಲೆಝ್ ಅವರು ಲಯಕ್ಕೆ ಮರಳಿರುವುದು ಸ್ಪೇನ್ ತಂಡಕ್ಕೆ ಉತ್ಸಾಹ ಮೂಡಿಸಿದೆ. ಲುಕಾ ಮಾಡ್ರಿಚ್ ನೇತೃತ್ವದ ಕ್ರೊವೇಷಿಯಾ ತಂಡದ ವಿರುದ್ಧ ಶನಿವಾರ ನಡೆಯುವ ಯೂರೊ ಕಪ್ ‘ಬಿ’ ಗುಂಪಿನ ಪಂದ್ಯದಲ್ಲಿ ಅವರ ಆಟವು ಸ್ಪೇನ್ ತಂಡದ ಯಶಸ್ಸಿನಲ್ಲಿ ನಿರ್ಣಾಯಕ ಪಾತ್ರ ವಹಿಸುವ ಸಾಧ್ಯತೆಯಿದೆ.

38 ವರ್ಷ ವಯಸ್ಸಿನ ರಿಯಲ್ ಮ್ಯಾಡ್ರಿಡ್ ಮಿಡ್‌ಫೀಲ್ಡರ್ ಮಾಡ್ರಿಚ್ ಮತ್ತು ಪೆದ್ರಿ ನಡುವಣ ಮಿಡ್‌ಫೀಲ್ಡ್‌ನ ಪ್ರಾಬಲ್ಯಕ್ಕೆ ನಡೆಯುವ ಹೋರಾಟ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

‘ಬಿ’ ಗುಂಪಿನಲ್ಲಿ ಸ್ಪೇನ್, ಕ್ರೊವೇಷಿಯಾ, ಇಟಲಿ, ಅಲ್ಬೇನಿಯಾ ತಂಡಗಳಿವೆ. 2020ರಲ್ಲಿ ಸ್ಪೇನ್ ತಂಡವು ಯುರೊ ಸೆಮಿಫೈನಲ್ ತಲುಪುವಲ್ಲಿ ಪೆದ್ರಿ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ನಂತರ ಮಂಡಿಯ ಸ್ನಾಯುರಜ್ಜು

ಲುಕಾ ಮಾಡ್ರಿಚ್ ಎಎಫ್‌ಪಿ ಚಿತ್ರ

ನೋವು ಅವರನ್ನು ಆಗಾಗ ಕಾಡಿತ್ತು. ಕಳೆದ ಕೆಲವು ಸಮಯದಿಂದ ಅವರು ಉತ್ತಮ ಲಯದಲ್ಲಿದ್ದಾರೆ.

ಮಾಡ್ರಿಚ್ ಜೊತೆ ಮಾಟಿಯೊ ಕೊವಾಸಿಚ್ ಮತ್ತು ಮಾರ್ಸೆಲೊ ಬ್ರಾಝೊವಿಚ್ ಅವರು ಕ್ರೊವೇಷ್ಯಾದ

UEFA ಯುರೋ ಕಪ್ 2024 ಜರ್ಮನಿ

ಮಿಡ್‌ಫೀಲ್ಡ್ ಶಕ್ತಿಯಾಗಿದ್ದಾರೆ. 2018ರಲ್ಲಿ ವಿಶ್ವಕಪ್ ಫೈನಲ್ ತಲುಪಿದ್ದ ಕ್ರೊವೇಷಿಯಾ 2022ರಲ್ಲಿ ಅಂತಿಮ ನಾಲ್ಕರ ಘಟ್ಟ ತಲುಪಿತ್ತು. ಯುರೊ 2020ರ ಕೂಟದ 16ರ ಘಟ್ಟದ ಪಂದ್ಯದಲ್ಲಿ ಸ್ಪೇನ್ ಹೆಚ್ಚುವರಿ ಅವಧಿಯ ಆಟದಲ್ಲಿ ಕ್ರೊವೇಷಿಯಾ ಮೇಲೆ ಜಯಗಳಿಸಿತ್ತು.

ಕೊಲೋನ್‌ನಲ್ಲಿ ನಡೆಯಲಿರುವ ‘ಎ’ ಗುಂಪಿನ ಪಂದ್ಯದಲ್ಲಿ ಹಂಗೆರಿ ಮತ್ತು ಸ್ವಿಜರ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ.

ಒಲಿಂಪಿಕ್ಸ್ ಕೂಟ: ಸಿಂಗಲ್ಸ್, ಡಬಲ್ಸ್ ಆಡಲಿರುವ ಸಿನ್ನರ್

ರೋಮ್ (ಎಪಿ): ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರು ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳ ಟೆನಿಸ್ ಸ್ಪರ್ಧೆಯ ಸಿಂಗಲ್ಸ್, ಡಬಲ್ಸ್ ಎರಡರಲ್ಲೂ ಆಡಲಿದ್ದಾರೆ ಎಂದು ಇಟಾಲಿಯನ್ ಟೆನಿಸ್ ಫೆಡರೇಷನ್ ಶುಕ್ರವಾರ ತಿಳಿಸಿದೆ.


ಸಿನ್ನರ್

ಸಿನ್ನರ್ ಪಾಲಿಗೆ ಮೊದಲ ಒಲಿಂಪಿಕ್ಸ್. ಒಲಿಂಪಿಕ್ಸ್ ಡಬಲ್ಸ್‌ನಲ್ಲಿ ಸಿನ್ನರ್, ಲೊರೆಂಝೊ ಮುಸೆಟ್ಟಿ ಅವರ ಜೊತೆ ಆಡುವರು. ಮಹಿಳಾ ಸಿಂಗಲ್ಸ್‌ನಲ್ಲಿ ಸೋತ ಇಟಲಿಯ ಆಟಗಾರ್ತಿ ಜಾಸ್ಮಿನ್ ಪಾವ್ಲೀನಿ ಅವರೂ ಇಟಲಿ ತಂಡದಲ್ಲಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಟೆನಿಸ್ ಸ್ಪರ್ಧೆಗಳು 27ರಂದು ಆರಂಭವಾಗುತ್ತವೆ.

ಸೆಮಿಗೆ ಸುಮಿತ್

ಪೆರುಗಿಯಾ (ಇಟಲಿ), (ಪಿಟಿಐ): ಯಶಸ್ಸಿನ ಓಟವನ್ನು ಮುಂದುವರಿಸಿರುವ ಭಾರತದ ಸುಮಿತ್ ನಗಾಲ್, ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಟೂರ್ನಿಯಲ್ಲಿ ಆರನೇ ಶ್ರೇಯಾಂಕದ ಪಡೆದಿರುವ ಭಾರತದ ಅಗ್ರ ಸಿಂಗಲ್ಸ್ ಆಟಗಾರ ಕ್ವಾರ್ಟರ್‌ಫೈನಲ್‌ನಲ್ಲಿ 6–4, 7–5 ರಿಂದ ಶ್ರೇಯಾಂಕರಹಿತ ಆಟಗಾರ ಮಾಕ್ಸ್ ಕಾಸ್ನಿಕೋವ್‌ಸ್ಕಿ (ಪೋಲೆಂಡ್) ಅವರನ್ನು ಸೋಲಿಸಿದರು. ಜರ್ಮನಿಯಲ್ಲಿ ಕಳೆದ ವಾರ ಹೀಲ್‌ಬ್ರಾನ್ ಚಾಲೆಂಜರ್ ಟೂರ್ನಿಯಿಂದೀಚೆಗೆ ಇದು ಸುಮಿತ್‌ಗೆ ಸತತ ಎಂಟನೇ ಗೆಲುವು.

ಅವರು ಸೆಮಿಫೈನಲ್‌ನಲ್ಲಿ ಸ್ಪೇನ್‌ನ ಬೆರ್ನಾಬ್ ಝಪಟಾ ಮಿರಾಲ್ಯಸ್ ಅವರನ್ನು ಎದುರಿಸಲಿದ್ದಾರೆ. ಶ್ರೇಯಾಂಕರಹಿತ ಆಟಗಾರ ಬೆರ್ನಾಬ್ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಲಾಸ್ಲೊ ದ್ಯೇರೆ (ಸರ್ಬಿಯಾ) ಅವರಿಗೆ 6–3, 6–3ರಿಂದ ಆಘಾತ ನೀಡಿದರು.

ಪ್ರಣಯ್‌ಗೆ ಸೋಲು; ಸವಾಲು ಅಂತ್ಯ

ಸಿಡ್ನಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಎಚ್‌.ಎಸ್‌.ಪ್ರಣಯ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ತಮಗಿಂತ ಉನ್ನತ ಕ್ರಮಾಂಕದ ಆಟಗಾರ ಕೊಡೈ ನರವೊಕಾ ಅವರಿಗೆ 19–21, 13–21ರಲ್ಲಿ ಮಣಿದರು. ಇದರೊಂದಿಗೆ ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಕಂಡಿತು.

ವಿಶ್ವದ 10ನೇ ಕ್ರಮಾಂಕದ ಆಟಗಾರ ಕೊನೆಯವರಾಗಿ ಭಾರತದ ಸವಾಲು ಉಳಿಸಿಕೊಂಡಿದ್ದರು. ಇದಕ್ಕೆ ಮೊದಲು ಸಮೀರ್ ವರ್ಮಾ ಪುರುಷರ ಸಿಂಗಲ್ಸ್‌ನಲ್ಲಿ, ಆಕರ್ಷಿ ಕಶ್ಯಪ್ ಮಹಿಳೆಯರ ಸಿಂಗಲ್ಸ್‌ನಲ್ಲಿ ನಿರ್ಗಮಿಸಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಸಿಕ್ಕಿ ರೆಡ್ಡಿ ಮತ್ತು ಬಿ.ಸುಮೀತ್ ರೆಡ್ಡಿ ದಂಪತಿ ಸೋಲನುಭವಿಸಿತ್ತು.

ಪ್ರಣಯ್

ಮೊದಲ ಗೇಮ್‌ನಲ್ಲಿ ಪ್ರಣಯ್ 10–16 ಹಿನ್ನಡೆಯಿಂದ ಚೇತರಿಸಿ, ನಂತರ 18–18ರಲ್ಲಿ ಸಮ ಮಾಡಿಕೊಂಡು ಹೋರಾಟ ತೋರಿದ್ದರು. ಆದರೆ ನರವೊಕಾ ಒತ್ತಡ ಮೆಟ್ಟಿನಿಂತು ಪಂದ್ಯ ಗೆದ್ದರು. ಎರಡನೇ ಗೇಮ್‌ನಲ್ಲಿ ಜಪಾನ್‌ನ ಆಟಗಾರ ಪ್ರಾಬಲ್ಯ ಮೆರೆದರು.

ಮಾಜಿ ಅಗ್ರಮಾನ್ಯ ಆಟಗಾರ ಲೊಹ್ ಕೀನ್ ಯಿವ್ ಅವರಿಗೆ ಆಘಾತ ನೀಡಿದ್ದ ವರ್ಮಾ ಎಂಟರ ಘಟ್ಟದಲ್ಲಿ ವಿಶ್ವದ 17ನೇ ಕ್ರಮಾಂಕದ ಆಟಗಾರ ಲಿನ್ ಚುನ್‌-ಯಿ (ಚೀನಾ ತೈಪಿ) ಅವರಿಗೆ ಸಾಟಿಯಾಗಲಿಲ್ಲ. ಲಿನ್ 38 ನಿಮಿಷಗಳಲ್ಲಿ 21–12, 21–13ರಲ್ಲಿ ಪಂದ್ಯ ಗೆದ್ದರು.

ಮಿಶ್ರ ಡಬಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಸುಮೀತ್‌- ಸಿಕ್ಕಿ ಅವರೂ ಹೆಚ್ಚು ಪೈಪೋಟಿ ನೀಡದೇ 12–21, 14–21ರಲ್ಲಿ ಅಗ್ರ ಶ್ರೇಯಾಂಕದ ಜಿಯಾನ್ ಝೆನ್ ಬಾಂಗ್‌- ವೀ ಯಾ ಷಿನ್ ಅವರಿಗೆ ಮಣಿದರು. ಪಂದ್ಯ ಸುಮಾರು ಅರ್ಧ ಗಂಟೆಯಲ್ಲಿ ಮುಗಿಯಿತು. ಮಹಿಳಾ ಸಿಂಗಲ್ಸ್‌ನಲ್ಲಿ, ಎಂಟನೇ ಶ್ರೇಯಾಂಕದ ಆಕರ್ಷಿ 21–17, 21–12 ರಲ್ಲಿ ಚೀನಾ ತೈಪಿಯ ಯು ಪೊ ಪೈ ಅವರಿಗೆ 42 ನಿಮಿಷಗಳ ಪಂದ್ಯದಲ್ಲಿ ಶರಣಾದರು.

ಆರ್ಚರಿ: ಉಕ್ರೇನ್‌ಗೆ ಮಣಿದ ಮಹಿಳಾ ರಿಕರ್ವ್ ತಂಡ

ಅಂತಾಲ್ಯ (ಟರ್ಕಿ), (ಪಿಟಿಐ): ಉತ್ತಮ ಮುನ್ನಡೆ ಕೈಚೆಲ್ಲಿದ ಭಾರತದ ಮಹಿಳಾ ರಿಕರ್ವ್ ತಂಡ, ಒಲಿಂಪಿಕ್ ಆರ್ಚರಿ ಅಂತಿಮ ಕ್ವಾಲಿಫೈಯರ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ ಕಡಿಮೆ ಕ್ರಮಾಂಕದ ಉಕ್ರೇನ್ ತಂಡದೆದುರು 3–5ರಲ್ಲಿ ಸೋಲಿನ ಆಘಾತ ಅನುಭವಿಸಿತು.

ಐದನೇ ಶ್ರೇಯಾಂಕದ ಭಾರತ ತಂಡ (ದೀಪಿಕಾ ಕುಮಾರಿ, ಭಜನ್ ಕೌರ್ ಮತ್ತು ಅಂಕಿತಾ ಭಕತ್) ಪ್ರಿಕ್ವಾರ್ಟರ್ ಫೈನಲ್‌ಗೆ ಬೈ ಪಡೆದಿತ್ತು.

ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಬೇಕಾದರೆ, ಭಾರತ ಎಲಿಮಿನೇಷನ್ ಸುತ್ತಿನಲ್ಲಿ ಎರಡು ಪಂದ್ಯಗಳನ್ನಷ್ಟೇ ಗೆಲ್ಲಬೇಕಾಗಿತ್ತು. ಸೆಮಿಫೈನಲ್ ತಲುಪುವ ನಾಲ್ಕು ತಂಡಗಳು, ರಿಕರ್ವ್ ವಿಭಾಗದಲ್ಲಿ ಪ್ಯಾರಿಸ್‌ಗೆ ಟಿಕೆಟ್ ಪಡೆಯಲಿವೆ.

ಆದರೆ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಭಾರತ, ತನಗಿಂತ ಹತ್ತು ಸ್ಥಾನ ಕೆಳಗಿರುವ ಉಕ್ರೇನ್ ವಿರುದ್ಧ 3–1 ಮುನ್ನಡೆಯಿದ್ದರೂ, ಅದನ್ನು ಕಾಪಾಡುವಲ್ಲಿ ವಿಫಲವಾಗಿ 3–5 ರಲ್ಲಿ (51–51, 55–52, 53–54, 52–54) ಅಚ್ಚರಿಯ ಸೋಲು ಕಂಡಿತು. ಭಜನ್ ಕೌರ್ ಮತ್ತು ಅಂಕಿತಾ ಅವರ ಅನನುಭವ ಭಾರತಕ್ಕೆ ದುಬಾರಿಯಾಯಿತು.

ಉಕ್ರೇನ್‌ನ ವೆರೋನಿಕಾ ಮರ್ಚೆಂಕೊ, ಅನಸ್ತೇಸಿಯಾ ಪಾವ್ಲೊವಾ ಮತ್ತು ಒಲ್ಹಾ ಚೆಬೊಟರೆಂಕೊ ಅವರು ಉತ್ತಮ ಪ್ರದರ್ಶನ ನೀಡಿ ತಂಡವನ್ನು ಕ್ವಾರ್ಟರ್‌ಫೈನಲ್‌ಗೆ ತಲುಪಿಸಿದರು.

ಪುರುಷರ ವಿಭಾಗದ ಕ್ವಾಲಿಫೈಯಿಂಟ್ ಸ್ಪರ್ಧೆ ಶನಿವಾರ ನಡೆಯಲಿದೆ. ಮೂರು ಕೋಟಾ ಲಭ್ಯ ಇದೆ. ವೈಯಕ್ತಿಕ ಕೋಟಾ ಸ್ಪರ್ಧೆಗಳು ಭಾನುವಾರ ನಡೆಯಲಿವೆ.

ಅರ್ಹತೆಗಿದೆ ಇನ್ನೂ ಇದೆ ಅವಕಾಶ: ಭಾರತ ಮಹಿಳಾ ರಿಕರ್ವ್ ತಂಡ, ರ‍್ಯಾಂಕಿಂಗ್ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲೂ ಇನ್ನೊಂದು ದಾರಿಯಿದೆ.

ಕ್ವಾಲಿಫಿಕೇಷನ್ ನಿಯಮಕ್ಕೆ ತಂದಿರುವ ಹೊಸ ತಿದ್ದುಪಡಿ ಪ್ರಕಾರ, ಕ್ವಾಲಿಫೈಯರ್ಸ್ ಮೂಲಕ ಪ್ರವೇಶ ಪಡೆಯದ ಅಗ್ರ ಕ್ರಮಾಂಕದ 2 ತಂಡಗಳಿಗೂ ಅರ್ಹತೆಗೆ ಅವಕಾಶವಿದೆ.

ರಾಜೇಶ್ವರ್–ಸುಮಿತ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಆರಂಭದಿಂದಲೇ ಆಧಿಪತ್ಯ ಸ್ಥಾಪಿಸುತ್ತ ಮುನ್ನುಗ್ಗಿದ ಮೇವರಿಕ್ಸ್ ತಂಡ ಶುಕ್ರವಾರ ಕೊನೆಗೊಂಡ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ‘ಗೋಲ್ಡ್’ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಸುಭಾಷ್ ಗುಪ್ತಾ ಮ್ಯಾಚ್ ಪಾಯಿಂಟ್ ಪೇರ್ ವಿಭಾಗದ ಪ್ರಶಸ್ತಿ ರಾಜೇಶ್ವರ್ ತಿವಾರಿ ಮತ್ತು ಸುಮಿತ್ ಮುಖರ್ಜಿ ಅವರ ಪಾಲಾಯಿತು.

ಸುಬೋಧ್ ಮಸ್ಕರ, ಸುಭಾಷ್ ಗುಪ್ತಾ, ಕೈಜದ್ ಅಂಕ್ಲೇಸರಿಯಾ, ಅನಾಲ್ ಶಾ, ಸಂದೀಪ್ ತಕ್ರಾಲ್ ಮತ್ತು ಜಗ್ಗಿ ಶಿವದಾಸಾನಿ ಅವರನ್ನು ಒಳಗೊಂಡ ಮೇವರಿಕ್ಸ್ ತಂಡ ಸ್ವಿಸ್ ಲೀಗ್ ಹಂತದಿಂದಲೇ ಪಾರುಪತ್ಯ ಸ್ಥಾಪಿಸಿತ್ತು. ಫೈನಲ್‌ನಲ್ಲಿ ಮೋನಿಕಾ ಜಾಜೂ ತಂಡವನ್ನು ಹಿಂದಿಕ್ಕಿತು.

ವಿನೋದ್ ಕುಮಾರ್ ಶಾ, ಸಂಜಿತ್ ಡೇ, ಮೋನಿಕಾ ಜಾಜೂ, ಸೋಮೇಶ್ ಭಟ್ಟಾಚಾರ್ಯ, ವಿಕ್ರಾಂತ್ ಮೆಹ್ತಾ ಮತ್ತು ಸುಕಮಲ್ ದಾಸ್ ರನ್ನರ್ ಅಪ್ ತಂಡದಲ್ಲಿದ್ದರು. ಡಿಯೊರಾಸ್ ಡೆಕಾನ್ಸ್ ಮತ್ತು ಫೋರ್ಮಿಡೇಬಲ್ ತಂಡಗಳು ಕ್ರಮವಾಗಿ ಮೂರು, ನಾಲ್ಕನೇ ಸ್ಥಾನ ಗಳಿಸಿದವು. ಸುಭಾಷ್ ಗುಪ್ತಾ ಮ್ಯಾಚ್ ಪಾಯಿಂಟ್ ಪೇರ್ಸ್ ವಿಭಾಗದಲ್ಲಿ ಶಂಭುನಾಥ್ ಘೋಷ್ ಮತ್ತು ವಿಶ್ವಜೀತ್ ಪೋದ್ದಾರ್ ಜೋಡಿಯನ್ನು ಮಣಿಸಿ ರಾಜೇಶ್ವರ್ ತಿವಾರಿ ಮತ್ತು ಸುಮಿತ್ ಮುಖರ್ಜಿ ಪ್ರಶಸ್ತಿಗೆ ಮುತ್ತಿಕ್ಕಿದರು. ಫೈನಲ್‌ನಲ್ಲಿ ರಾಜೇಶ್ವರ್‌–ಸುಮಿತ್ 854.16 ಸ್ಕೋರು ಕಲೆ ಹಾಕಿದರೆ ಶಂಭುನಾಥ್ ಮತ್ತು ವಿಶ್ವಜೀತ್ 839.55 ಸ್ಕೋರು ಗಳಿಸಿದರು.

ಸುಭಾಷ್ ಗುಪ್ತಾ ಮ್ಯಾಚ್ ಪಾಯಿಂಟ್ ಪೇರ್ಸ್ ವಿಭಾಗದಲ್ಲಿ ಮೊದಲ 10 ಸ್ಥಾನ ಗಳಿಸಿದ ಜೋಡಿ: ರಾಜೇಶ್ವರ್ ತಿವಾರಿ ಮತ್ತು ಸುಮಿತ್ ಮುಖರ್ಜಿ–1 (ಸ್ಕೋರು: 854.16), ಶಂಭುನಾಥ್ ಘೋಷ್, ವಿಶ್ವಜೀತ್ ಪೋದ್ದಾರ್‌–2 (839.55), ಅಜಯ್ ಪಿ.ಖಾರೆ, ರಾಜು ತೋಲಾನಿ–3 (820.42), ಜಗ್ಗಿ ಬಿ.ಶಿವದಾಸಾನಿ, ಸಂದೀಪ್ ತಕ್ರಾಲ್‌–4 (800.55), ಟಿ.ವಿ.ರಮಣಿ, ಸುಭಾಷ್ ಭವನಾನಿ–5 (791.12), ಗೋಪಿನಾಥ್ ಮನಾ, ಸಂದೀಪ್ ದತ್ತಾ–6 (783.62), ಸಾಗನಿಕ್ ರಾಯ್, ಕೌಸ್ತುಭ್ ನಂದಿ–7 (782.81), ಸುಕಾಂತ ದಾಸ್, ರಾಜೇಂದ್ರ ಸಿರೋಹಿಯ–8 (781.24), ಅರುಣ್ ಬಾಪಟ್, ಸಮೀರ್ ಬಾಸಕ್‌–9 (776.40), ಸಪನ್ ದೇಸಾಯಿ, ಶ್ರೀಧರನ್‌–10 (757.46).

26ರಿಂದ ರಾಜ್ಯ ಅಥ್ಲೆಟಿಕ್ಸ್

ಮೈಸೂರು: ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜೂನ್ 26ರಿಂದ 29ರವರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈಸೂರು ಪ್ರಾದೇಶಿಕ ಕೇಂದ್ರದ ವತಿಯಿಂದ 25ನೇ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕೂಟ ಆಯೋಜಿಸಲಾಗಿದೆ.

‘ರಾಜ್ಯದ 200 ಎಂಜಿನಿಯರಿಂಗ್ ಕಾಲೇಜುಗಳ 2 ಸಾವಿರ ಕ್ರೀಡಾಪಟುಗಳು 23 ವಿವಿಧ ವಿಭಾಗದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದು, ಕೂಟಕ್ಕೆ 26 ರಂದು ಬೆಳಿಗ್ಗೆ 10ಕ್ಕೆ ರಾಷ್ಟ್ರೀಯ ಅಥ್ಲೀಟ್ ಅಶ್ವಿನಿ ನಾಚಪ್ಪ ಚಾಲನೆ ನೀಡುವರು. ಗೆದ್ದವರಿಗೆ ಪದಕ ನೀಡಲಾಗುವುದು.’ ಎಂದು ಪ್ರಾದೇಶಿಕ ಕೇಂದ್ರದ ನಿರ್ದೇಶಕ ಟಿ.ಪಿ. ರೇಣುಕಮೂರ್ತಿ, ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



WT.5730.2024